ಸಾಹಿತ್ಯ ದಾಸೋಹ – ೨೧೮

ಸಂಚಿಕೆ 42 – ಅಕ್ಟೋಬರ್ 2023

22.10.2023ರ ದಾಸೋಹದ ಬರಹಗಳ ಸಂಕಲನ



ಏರಿಸಿ ಹಾರಿಸಿ ಕನ್ನಡದ ಬಾವುಟ



ಹಚ್ಚೇವು ದೀಪಾವಳಿ ಕನ್ನಡದ ದೀಪ



ಧೀರೇಂದ್ರ ವಿರಚಿತ ' ಹವ್ಯಾಸಿ ರಂಗದ ಮುತ್ತು ರತ್ನಗಳು' ಕೃತಿ ಬಿಡುಗಡೆ ಮತ್ತು ಸನ್ಮಾನ ಸಮಾರಂಭ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ವೇದಿಕೆ

ಪುಟ ತೆರೆಯುವ ಮುನ್ನ . . .

ಆತ್ಮೀಯರೆ,

22ನೆಯ ಅಕ್ಟೋಬರ್ 2023ರಂದು ದಸರಾ ಹಬ್ಬದ ಸಂದರ್ಭದಲ್ಲಿ ನಮ್ಮ ಪ್ರತಿಷ್ಠಾನದ ನೋಡಿಯೋ ಸಾಹಿತ್ಯ. ದಾಸೋಹ ವೇದಿಕೆಯಲ್ಲಿ ನಡೆದ 218ನೆಯ ಸಾಹಿತ್ಯ ದಾಸೋಹದ ಸಂಚಿಕೆ ಇಲ್ಲಿದೆ. ಇದು ಪಿಡಿಎಫ್ ರೂಪದಲ್ಲಿ ಮೂಡಿಬಂದ 42ನೆಯ ಸಂಚಿಕೆ.

ಸಾಹಿತ್ಯ ದಾಸೋಹದಲ್ಲಿ ತಮ್ಮ ಬರಹಗಳನ್ನು ಪ್ರಸ್ತುತಿಪಡಿಸಿದ ಎಲ್ಲ ದಾಸೋಹಿಗಳಿಗೂ, ಅಧ್ಯಕ್ಷತೆ ವಹಿಸಿ ಎಲ್ಲ ಪ್ರಸ್ತುತಿಗಳನ್ನೂ ವಿಶ್ಲೇಷಿಸಿ ಬರಹ ರೂಪದಲ್ಲಿ ನೀಡಿದ ಶ್ರೀಮತಿ ಮಾಲತಿ ಶ್ರೀನಿವಾಸನ್ ಅವರಿಗೂ ನಮ್ಮ ವಂದನೆಗಳು. ಒಟ್ಟು 24 ಪ್ರಸ್ತುತಿತಳ ಪೈಕಿ 11 ಕವನಗಳೇ ಇದ್ದುದು ಈ ಬಾರಿಯ ವಿಶೇಷ.

29ನೆಯ ಅಕ್ಟೋಬರ್ 2023ರಂದು ನಮ್ಮ ಸದಸ್ಯರಾದ ಶ್ರೀ ಎಸ್. ಧೀರೇಂದ್ರ ಅವರು ರಚಿಸಿದ 'ಹವ್ಯಾಸಿ ರಂಗದ ಮುತ್ತು ರತ್ನಗಳು' ಕೃತಿಯು ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ವತಿಯಿಂದ ಬಿಡುಗಡೆ ಯಾಯಿತು. ಈ ಕುರಿತ ವರದಿ ಹಾಗೂ ಚಿತ್ರಗಳೂ ಈ ಸಂಚಿಕೆಯಲ್ಲಿವೆ.

ಈ ಸಂಚಿಕೆಯನ್ನು ರೂಪಿಸಿದ ಶ್ರೀ ಎಸ್. ಶೃಂಗೇಶ್ವರ ಶರ್ಮ ಅವರಿಗೂ, ದಾಸೋಹ ಮತ್ತು ಇತರ ಕಾರ್ಯಕ್ರಮಗಳ ತಾಂತ್ರಿಕತೆಯನ್ನು ನಿರ್ವಹಿಸಿದ ಎಲ್ಲ ಸದಸ್ಯರಿಗೂ ನಮ್ಮ ಧನ್ಯವಾದಗಳು.

ಸಂಚಿಕೆಯ ಬಗ್ಗೆ ನಮ್ಮ ಸದಸ್ಯರ ಪ್ರತಿಕ್ರಿಯೆ, ಅಭಿಪ್ರಾಯ, ಸಲಹೆ, ಸೂಚನೆಗಳನ್ನು ಸ್ವಾಗತಿಸುತ್ತೇವೆ.

ಎಲ್ಲರಿಗೂ ಕನ್ನಡ ರಾಜ್ಯೋತ್ಸವ ಹಾಗೂ ದೀಪಾವಳಿ ಹಬ್ಬದ ಶುಭಾಶಯಗಳು.

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ದಾಸೋಹ ವೇದಿಕೆ, ಬೆಂಗಳೂರು 11.11..2023

ದಾಸೋಹದ ಪುಟಗಳಲ್ಲಿ ...

ಸಮನ್ವಯ ಸಮಿತಿ – ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ 218

ಕಾರ್ಯಕ್ರಮ ವರದಿ: ಎಸ್.ಶೃಂಗೇಶ್ವರ ಶರ್ಮ

218ನೆಯ ಸಾಹಿತ್ಯ ದಾಸೋಹವು, 22ನೆಯ ಅಕ್ಟೋಬರ್ 2023ರಂದು ಶನಿವಾರ ಮಧ್ಯಾಹ್ನ 3.30ಕ್ಕೆ ಗೂಗಲ್ ಮೀಟ್ ಅಂತರಜಾಲ ವೇದಿಕೆಯಲ್ಲಿ ನಡೆಯಿತು. ಶ್ರೀಮತಿ ಮಾಲತಿ ಶ್ರೀನಿವಾಸನ್ ಅವರು ದಾಸೋಹದ ಅಧ್ಯಕ್ಷತೆ ವಹಿಸಿದ್ದರು.



ಆರಂಭದಲ್ಲಿ ಸ್ವಾಗತ ನುಡಿಗಳನ್ನಾಡಿದ ಶ್ರೀಮತಿ ಶೀಲಾ ಅರಕಲಗೂಡು ಅವರು ಎಲ್ಲರನ್ನೂ ಸ್ವಾಗತಿಸಿ, ದಾಸೋಹದ ಅಧ್ಯಕ್ಷತೆ ವಹಿಸಿರುವ ಶ್ರೀಮತಿ ಮಾಲತಿ ಶ್ರೀನಿವಾಸನ್ ಅವರನ್ನು ಪರಿಚಯಿಸಿದರು. "ಅಧ್ಯಾಪನ ವೃತ್ತಿ, ಸಂಗೀತ ಮತ್ತು ಸಾಹಿತ್ಯ ಲೋಕ ಹೀಗೆ ಮೂರು ಕ್ಷೇತ್ರಗಳಲ್ಲಿಯೂ ತೊಡಗಿಸಿಕೊಂಡಿರುವ ಮಾಲತಿ ಶ್ರೀನಿವಾಸನ್ ಅವರು ವೇದಿಕೆಯ ಹಿರಿಯ ಸದಸ್ಯರು. ವಿವೇಕಾನಂದ ಕಾಲೇಜಿನ ಅಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿದ ಅವರು ನಂತರ ಪದವಿ ಪೂರ್ವ ಶಿಕ್ಷಣ ಮಂಡಳಿಯಲ್ಲಿ ಮುಖ್ಯ ಮೌಲ್ಯಮಾಪಕಿಯಾಗಿ ಎರಡು ದಶಕಗಳ ಕಾಲ ಕಾರ್ಯ ನಿರ್ವಹಿಸಿ, ಸ್ವಯಂ ನಿವೃತ್ತಿ ಪಡೆದು, ಹೈದರಾಬಾದಿನ ವಿಜ್ಞಾನ್ ವಿದ್ಯಾ ಸಂಸ್ಥೆಯಲ್ಲಿ ಜೀವಶಾಸ್ತ್ರದ ಅಧ್ಯಾಪಕಿಯಾಗಿಯೂ ಸೇವೆ ಸಲ್ಲಿಸಿದರು. ಸಂಗೀತ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಸಹ ನಿರಂತರವಾಗಿ ತೊಡಗಿಕೊಂಡ ಅವರು, 'ಜೀವ ನುಡಿ', 'ನುಡಿ ಜೇನು', 'ಆಂತರ್ಯದ ಅಲೆಗಳು' ಎಂಬ ಮೂರು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ" ಎಂದು ಹೇಳಿ ಶ್ರೀಮತಿ ಮಾಲತಿಯವರನ್ನು ಸ್ವಾಗತಿಸಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಬಿ.ಎಸ್. ರವೀಂದ್ರ ಅವರು, ಇತ್ತೀಚೆಗೆ ವೇದಿಕೆಯ ಹಲವಾರು ಸದಸ್ಯರು ಸಾಲುಸಾಲಾಗಿ ಪ್ರಶಸ್ತಿಗಳಿಗೆ ಭಾಜನರಾಗುತ್ತಿರುವುದರ ಬಗ್ಗೆ ಸಂತಸ ವ್ಯಕ್ತಪಡಿಸಿ ಇನ್ನೂ ಹೆಚ್ಚಿನ ಸದಸ್ಯರು ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಶಸ್ತಿ, ಗೌರವಗಳಿಗೆ ಪಾತ್ರರಾಗಬೇಕೆಂದು ಕೋರಿದರು. ವೇದಿಕೆಯು ಮುಂಬರುವ ದಿನಗಳಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಬಗ್ಗೆ ತಿಳಿಸಿದರು.

ಶ್ರೀ ಎಸ್.ಶೃಂಗೇಶ್ವರ ಶರ್ಮ ಅವರು 'ಸಾಹಿತ್ಯ ದಾಸೋಹ–217'ರ ಸಂಚಿಕೆಯನ್ನು ಬಿಡುಗಡೆ ಮಾಡಿದರು. ನಂತರ ಒಟ್ಟು 22 ದಾಸೋಹಿಗಳು ತಮ್ಮ ಲೇಖನ, ಕವನಗಳನ್ನು ಪ್ರಸ್ತುತಪಡಿಸಿದರು. ಸಭೆಯ ಅಧ್ಯಕ್ಷತೆವಹಿಸಿದ ಶ್ರೀಮತಿ ಮಾಲತಿ ಶ್ರೀನಿವಾಸನ್ ಅವರು ಈ ಎಲ್ಲ ಪ್ರಸ್ತುತಿಗಳನ್ನು ವಿಶ್ಲೇಷಿಸಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಕೊನೆಯಲ್ಲಿ ಶ್ರೀ ಮನೋಹರ ಗೋಖಲೆ ಅವರು ಧನ್ಯವಾದ ಅರ್ಪಿಸಿದರು. ಶ್ರೀ ಕೆ.ಎನ್. ಮಹಾಬಲ ಕಾರ್ಯಕ್ರಮ ನಿರ್ವಹಿಸಿದರೆ, ಶ್ರೀಮತಿ ರಾಧಿಕಾ ಗುಜ್ಜರ್ ಹಾಗೂ ಶ್ರೀಮತಿ ರೇಣುಕಾ ದೇಸಾಯಿಯವರು ತಾಂತ್ರಿಕ ನಿರ್ವಹಣೆ ಮಾಡಿದರು.

***


ಸಮನ್ವಯ ಸಮಿತಿ – ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಎಸ್. ಧೀರೇಂದ್ರ ಅವರು ರಚಿಸಿದ
'ಹವ್ಯಾಸಿರಂಗದ ಮುತ್ತು ರತ್ನಗಳು'
ಕೃತಿಯ ಬಿಡುಗಡೆ ಮತ್ತು ಹಿರಿಯ ರಂಗನಟರಿಗೆ ಗೌರವಾರ್ಪಣೆ

ಕಾರ್ಯಕ್ರಮ ವರದಿ: ಶ್ರೀ ಟಿ.ಕೆ. ರಂಗನಾಥ್



ದಿನಾಂಕ 29ನೆಯ ಅಕ್ಟೋಬರ್ 2023ರಂದು ಬೆಂಗಳೂರಿನ ಬಸವನಗುಡಿಯ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನ ಬಿಪಿ ವಾಡಿಯಾ ಹಾಲ್ ಅಪರೂಪದ ಸಮಾರಂಭವೊಂದಕ್ಕೆ ಸಾಕ್ಷಿಯಾಯಿತು. ಅದು ನಟ, ನಿವೃತ್ತ ಬ್ಯಾಂಕರ್ ಹಾಗೂ ಸಮನ್ವಯ ಸಮಿತಿ ವೇದಿಕೆಯ ಹಿರಿಯ ಸದಸ್ಯರಾದ ಶ್ರೀ ಎಸ್. ಧೀರೇಂದ್ರ ಅವರು ರಚಿಸಿದ 'ಹವ್ಯಾಸಿರಂಗದ ಮುತ್ತು ರತ್ನಗಳು' ಕೃತಿಯ ಬಿಡುಗಡೆ ಸಮಾರಂಭ. ಧೀರೇಂದ್ರ ಅವರು ತನ್ನೊಡನೆ ನಟರಂಗ, ಬೆನಕ ಮತ್ತು ಇತರ ರಂಗತಂಡಗಳಲ್ಲಿ ಒಡನಾಟ ಹೊಂದಿದ್ದ ಮೇರು ಕಲಾವಿದರ ಕುರಿತು ರಚಿಸಿದ "40 ಹವ್ಯಾಸಿ ರಂಗಕರ್ಮಿಗಳ ಸಂಕಥನ"ವಿದು. ಈ ಕೃತಿಯನ್ನು ಸ್ನೇಹಾ ಬುಕ್ ಹೌಸ್ ಪ್ರಕಟಿಸಿದೆ. ಹಿರಿಯ ರಂಗಕರ್ಮಿ, ನಟ, ನಿರ್ದೇಶಕ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಟಿ.ಎಸ್. ನಾಗಾಭರಣ ಅವರ ಅರ್ಥಪೂರ್ಣ ಮುನ್ನುಡಿ ಹಾಗೂ ಹಿರಿಯ ರಂಗಕರ್ಮಿ ಹಾಗೂ ಕರ್ನಾಟಕ ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷ ಶ್ರೀ ಶ್ರೀನಿವಾಸ ಜಿ.ಕಪ್ಪಣ್ಣ ಅವರ ಆತ್ಮೀಯ ಬೆನ್ನುಡಿಗಳು, ರಂಗಭೂಮಿ ಕುರಿತ ಅಪರೂಪದ ಗ್ರಂಥಕ್ಕೆ ಹೆಚ್ಚಿನ ಮೌಲ್ಯವನ್ನು ನೀಡಿವೆ.



ಕೃತಿ ಬಿಡುಗಡೆ – ಎಡದಿಂದ ಬಲಕ್ಕೆ: ಶ್ರೀಯುತರಾದ ಪರಶಿವಪ್ಪ, ಎಸ್.ಧೀರೇಂದ್ರ, ಬಿ.ಆರ್.ಜಯರಾಂ, ಶ್ರೀಮತಿ ಗಿರಿಜಾ ಲೋಕೇಶ್, ಶ್ರೀನಾಥ್, ಬೆಂ.ಶ್ರೀ.ರವೀಂದ್ರ, ಜಿ.ಎನ್. ನರಸಿಂಹ ಮೂರ್ತಿ



ಕೃತಿಯ ಲೋಕಾರ್ಪಣೆ ಮಾಡಿದ ಕನ್ನಡದ ಹಿರಿಯ ನಟ, 'ಪ್ರಣಯ ರಾಜ' ಶ್ರೀನಾಥ್ ಅವರು, ತಮ್ಮ ರಂಗ ಜೀವನದ ಹಲವು ಸುಮಧುರ ನೆನಪುಗಳನ್ನು ಸ್ಮರಿಸಿದರಲ್ಲದೆ, ನಲವತ್ತು ಹಿರಿಯ ಹವ್ಯಾಸಿ ರಂಗಕರ್ಮಿಗಳ ರಂಗಬದುಕಿನ ವಿವಿಧ ಆಯಾಮಗಳನ್ನು ದಾಖಲಿಸಿರುವ ಈ ಕೃತಿಯಲ್ಲಿ ಶ್ರೀ ಧೀರೇಂದ್ರ ಅವರು ರಂಗಭೂಮಿಯಲ್ಲಿ ತಾವು ಕಲೆತು ಬೆರೆತು ಒಡನಾಡಿದ ನಲವತ್ತು ಕಲಾವಿದರ ಬಗ್ಗೆ ತಮ್ಮ ಹೃದಯದಲ್ಲಿರುವ ಸ್ನೇಹಭಾವವನ್ನು ವ್ಯಕ್ತಪಡಿಸುವುದರ ಮೂಲಕ ಗೌರವ ಅರ್ಪಿಸಿದ್ದಾರೆ. ಈ ಗ್ರಂಥವು ಕನ್ನಡ ರಂಗಭೂಮಿ ಕ್ಷೇತ್ರಕ್ಕೆ ಬಹು ದೊಡ್ಡ ಕೊಡುಗೆಯಾಗಿದೆ, ಇವರಿಂದ ರಂಗಭೂಮಿ ಕುರಿತ ಇನ್ನಷ್ಟು ಪುಸ್ತಕಗಳು ಹೊರಬರಲಿ ಎಂದು ಆಶಿಸಿದರು.

ಸಭೆಗೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಾಟಕ, ಕಿರುತೆರೆ ಮತ್ತು ಚಲನಚಿತ್ರರಂಗದ ಹಿರಿಯ ನಟಿ ಶ್ರೀಮತಿ ಗಿರಿಜಾ ಲೋಕೇಶ್ ಧೀರೇಂದ್ರ ಅವರಿಂದ ಒಂದು ಮಹತ್ವದ ಕೃತಿ ಬೆಳಕು ಕಂಡಿರುವುದರ ಬಗ್ಗೆ ತಮ್ಮ ಸಂತಸವನ್ನು ಹಾಗೂ ಹಳೆಯ ಸಹರಂಗಕರ್ಮಿಗಳ ಒಡನಾಟದ ಸವಿನೆನಪುಗಳನ್ನು ಹಂಚಿಕೊಂಡರು.

ಸಭೆಯಲ್ಲಿ ನಟರಂಗದ ಹಿರಿಯ ನಟರಾದ ಶ್ರೀಯುತರಾದ ಬಿ.ಆರ್.ಜಯರಾಂ, ಎಂ.ಪಿ.ವೆಂಕಟರಾವ್ ಮತ್ತು ಟಿ.ಎಸ್. ಶಿವಶಂಕರ್ ಅವರನ್ನು ಸನ್ಮಾನಿಸಲಾಯಿತು. ಸನ್ಮಾನಿತರ ಜೀವನ ಸಾಧನೆ ಹಾಗೂ ನಾಟಕರಂಗಕ್ಕೆ ಅವರ ಕೊಡುಗೆಯ ಕಿರು ಪರಿಚಯವನ್ನು, ಕ್ರಮವಾಗಿ ಶ್ರೀ ರಂಗನಾಥ ಟಿ.ಕೆ, ಶ್ರೀ ಮಹಾಬಲ ಕೆ.ಎನ್. ಮತ್ತು ಶ್ರೀಮತಿ ರೇಣುಕಾ ದೇಸಾಯಿ ಅವರು ಮಾಡಿಕೊಟ್ಟರು.



ಸನ್ಮಾನಿತರು: ಟಿ.ಎಸ್.ಶಿವಶಂಕರ್, ಬಿ.ಆರ್. ಜಯರಾಂ, ಎಂ.ಪಿ.ವೆಂಕಟರಾವ್
ನಿಂತವರು: ಎಸ್.ಧೀರೇಂದ್ರ, ಬೆಂ.ಶ್ರೀ.ರವೀಂದ್ರ, ಪರಶಿವಪ್ಪ, ಶ್ರೀನಾಥ್, ಗಿರಿಜಾ ಲೋಕೇಶ್, ಪದ್ಮಾ ಧೀರೇಂದ್ರ, ಜಿ.ಎನ್. ನರಸಿಂಹಮೂರ್ತಿ



ನಟರಂಗ ತಂಡದ ಸದಸ್ಯರು ಹಿರಿಯ ನಟ ಸುಂದರರಾಜ್ ಅವರ ನೇತೃತ್ವದಲ್ಲಿ 'ಗಜವದನ ಹೇರಂಬ' ಎಂಬ ಪ್ರಸಿದ್ಧ ಪ್ರಾರ್ಥನಾ ರಂಗಗೀತೆಯನ್ನು ಪ್ರಸ್ತುತಪಡಿಸುವುದರೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಈ ತಂಡವು ಕಾರ್ಯಕ್ರಮದ ಉದ್ದಕ್ಕೂ ಆಗಿಂದಾಗ್ಗೆ ಸುಶ್ರಾವ್ಯವಾಗಿ ಹಾಡಿದ ಹಲವು ರಂಗಗೀತೆಗಳು ಸಭಿಕರನ್ನು ಕನ್ನಡ ಹವ್ಯಾಸಿ ರಂಗಭೂಮಿಯ ಸುವರ್ಣ ಯುಗಕ್ಕೆ ಕೊಂಡೊಯ್ದವು.

ಕನ್ನಡ ಗಣಕ ಪರಿಷತ್ತಿನ ಕಾರ್ಯದರ್ಶಿ, ಶ್ರೀ ಜಿ.ಎನ್. ನರಸಿಂಹಮೂರ್ತಿ ಕೃತಿಯ ವಿಶಿಷ್ಟತೆಯನ್ನು ಪರಿಚಯಿಸಿದರು. ಕೃತಿಯನ್ನು ಪ್ರಕಟಿಸಿರುವ ಸ್ನೇಹ ಬುಕ್ ಹೌಸ್‌ನ ಶ್ರೀ ಪರಶಿವಪ್ಪ ಅವರು ಮಾತನಾಡಿ ಸಸಕಸ ಪ್ರತಿಷ್ಠಾನದ ಜೊತೆಗೆ ತಮ್ಮ ಸಂಸ್ಥೆಯ, ಉತ್ತಮ ಬಾಂಧವ್ಯ ಇದೇ ರೀತಿ ಮುಂದುವರೆಯಲಿದೆ ಎಂದರು.



ವಿಶಿಷ್ಟ ರೀತಿಯಲ್ಲಿ ಕೃತಿ ಲೋಕಾರ್ಪಣೆ

ಕೃತಿಯನ್ನು ವಿಶಿಷ್ಟ ರೂಪದಲ್ಲಿ ಬಿಡುಗಡೆ ಮಾಡಿದ ರೀತಿ ಸಭಿಕರ ಮೆಚ್ಚುಗೆಗೆ ಪಾತ್ರವಾಯಿತು. ಬಿಡುಗಡೆಗೆ ಮುನ್ನ ಸಾಂಪ್ರದಾಯಿಕ ಖಾವಿ ಉಡುಪು ಧರಿಸಿದ್ದ ಲೇಖಕ ಶ್ರೀ ಧೀರೇಂದ್ರ ಅವರು ಖಾವಿ ಬಟ್ಟೆಯಲ್ಲಿ ಸುತ್ತಿದ್ದ ಪುಸ್ತಕದ ಕಟ್ಟನ್ನು ತಲೆಯ ಮೇಲೆ ಹೊತ್ತು ಸಭಾಂಗಣದ ಮುಂಬಾಗಿಲಿನಿಂದ ಬಂದು ವೇದಿಕೆಯನ್ನೇರಿ, ಕೃತಿ ಬಿಡುಗಡೆಕಾರ ಚಿತ್ರನಟ ಶ್ರೀನಾಥ್ ಅವರಿಗೆ ಒಪ್ಪಿಸಿದ್ದು ಸಭಿಕರಲ್ಲಿ ಅಚ್ಚರಿ ಮೂಡಿಸಿತು. ಧೀರೇಂದ್ರ ಅವರಿಂದ ಪುಸ್ತಕ ಗುಚ್ಛವನ್ನು ಸ್ವೀಕರಿಸಿದ ಶ್ರೀನಾಥ್ ಅವರು ಪುಸ್ತಕವನ್ನು ಲೋಕಾರ್ಪಣೆಗೊಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಮನ್ವಯ ಸಮಿತಿ, ಕನ್ನಡವೇ ಸತ್ಯ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಬೆಂ.ಶ್ರೀ. ರವೀಂದ್ರ ಅವರು ಹವ್ಯಾಸಿ ರಂಗಭೂಮಿ ನಡೆದು ಬಂದ ದಾರಿಯ ವಿವಿಧ ಆಯಾಮಗಳನ್ನು ವಿವರಿಸಿ, ಹವ್ಯಾಸಿ ನಾಟಕರಂಗ ಮತ್ತೆ ಪುನಶ್ಚೇತನಗೊಳ್ಳಲು ಹೆಚ್ಚಿನ ಪ್ರೋತ್ಸಾಹ ಅಗತ್ಯ ಎಂದರು.

ಆರಂಭದಲ್ಲಿ ಸಮಾರಂಭಕ್ಕೆ ಆಗಮಿಸಿದವರನ್ನು ಶ್ರೀ ಗುರುರಾಜ ಶಾಸ್ತ್ರಿಯವರು ಸ್ವಾಗತಿಸಿ ಮುಖ್ಯ ಅತಿಥಿಗಳನ್ನು ಪರಿಚಯಿಸಿದರು. ಶ್ರೀ ರವಿ ಕುಸಬಿಯವರು, ತಮ್ಮ ಪಾಲ್ಗೊಳ್ಳುವಿಕೆಯಿಂದ ಸಭೆಯ ಶೋಭೆಯನ್ನು ಹೆಚ್ಚಿಸಿದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸಿದರು. ಶ್ರೀ ಶ್ರೀರಂಗರಾಜನ್ ಅವರು ಕಾರ್ಯಕ್ರಮ ನಿರೂಪಿಸಿದರು.

ಸುಮಾರು 150 ನಿಮಿಷಗಳ ಈ ಸಮಾರಂಭದ ಸಂಪೂರ್ಣ ವಿಡಿಯೋ ವೀಕ್ಷಿಸಿ ಆನಂದಿಸಲು ಯುಟ್ಯೂಬ್ https://youtu.be/ehOLWsuwCf8 ಕೊಂಡಿಯನ್ನು ಬಳಸಬಹುದು. ಪುಸ್ತಕದ ಪ್ರಕಾಶಕರು: ಸ್ನೇಹ ಬುಕ್ ಹೌಸ್, ಪುಟಗಳು: 304, ಬೆಲೆ: ರೂ. 375/-; ಪ್ರತಿಗಳಿಗೆ ಸಂಪರ್ಕಿಸಿ: 9845031335, 9448993811.

***

ಒಂದು ಲಹರಿ

ಮಿನುಗುವ ನಕ್ಷತ್ರಗಳು

–ಶೀಲಾ ಅರಕಲಗೂಡು

ನಕ್ಷತ್ರಗಳೇ ಹಾಗೆ. ಮಿನುಗುತ್ತವೆ, ಮಿಂಚುತ್ತವೆ, ಫಳ ಫಳನೆ ಹೊಳೆಯುತ್ತವೆ, ಆಕರ್ಷಿಸುತ್ತವೆ. ತಿಮಿರಾಂಧಕಾರವನ್ನು ಬಡಿದೋಡಿಸುತ್ತ ಸುಂದರ ಲೋಕದ ನಿರ್ಮಾಣ ಮಾಡಿಬಿಡುತ್ತವೆ. ಅಗೋಚರ ಶಕ್ತಿಯನ್ನೊಳಗಿಟ್ಟು ಕಂಗೊಳಿಸುವ ಈ ನಕ್ಷತ್ರಗಳು ನಮ್ಮೊಳಗೆ ಹಲ ಬಗೆಯ ಚಿಂತನೆಗಳಿಗೆ ಕಾರಣವಾಗುತ್ತವೆ.

ಹಾಗೇ ನೋಡುತ್ತಾ ನಿಂತೆ. ಏನಿದೀ ಮಾಯೆ! ಮೈಯೆಲ್ಲ ರೋಮಾಂಚನವಾದಂತಹ ಭಾವ! ಸಾವಿರಾರು ನಕ್ಷತ್ರಗಳು ಹೊಳೆಯುತ್ತಿವೆ. ಆ ಹೊಳಪಿಗೆ ನನ್ನಲ್ಲಿ ವಿದ್ಯುತ್ ಸಂಚಾರ! ಆಕಾಶದ ನಕ್ಷತ್ರಗಳೆಲ್ಲ ಭೂಮಿಗೆ ಇಳಿದದ್ದು ಹೇಗೆ? ನನ್ನ ಮುಂದೆ ಬಂದದ್ದು ಹೇಗೆ? ಎಲ್ಲ ಅಯೋಮಯ ಅನ್ನಿಸಿತು. ಈ ನಕ್ಷತ್ರಗಳು ನಗು ಮುಖವನ್ನು ಹೊತ್ತು ಕಂಗೊಳಿಸುತ್ತಿದ್ದವು. ಅಬ್ಬಾ, ನಾಲ್ಕಾರು ನಕ್ಷತ್ರಗಳನ್ನು ನೋಡುವುದೇ ಎಷ್ಟೊಂದು ಸೊಗಸು ಅಂದುಕೊಳ್ಳುವಾಗ ಹೀಗೆ ಸರಿ ಸುಮಾರು ಸಾವಿರ ನಕ್ಷತ್ರಗಳು ನನ್ನೆದುರು ಹೊಳೆಯುವುದು ಕಂಡು ಮನಸ್ಸು ತುಂಬಿ ಕವಿತೆ ಮೂಡಿ ಬಂತು.

ಹೊಳೆ ಹೊಳೆಯುತಿರುವ ನಕ್ಷತ್ರ ಮಾಲೆ
ಬುವಿಗಿಳಿದು ಬಂದ ವೇಳೆ
ತುಂಬಿ ಹರಿಯುತಿದೆ ಭಾವದುನ್ಮಾದವದು
ಏನಿಹುದು ದೈವಲೀಲೆ

ಅಲ್ಲಿಂದ ಬಂದು ಸೊಗ ತುಂಬಿ ನಿಂದು
ಬೆಳಕನ್ನು ಬೀರುತಿಹಿರಿ
ಮಾತೆಲ್ಲ ಮರೆತು ನಾನಾದೆ ಮೌನ
ಮೂಡಿತ್ತು ಮನದಿ ಲಹರಿ

ನಕ್ಷತ್ರ ಲೋಕ ನಿರ್ಮಾಣ ಮಾಡಿ
ನಾವೆಲ್ಲ ಕೂಡಿ ಹಾಡಿ
ಭೂ ಲೋಕವನ್ನೆ ಸ್ವರ್ಗವನು ಮಾಡಿ
ನಲಿಯೋಣ ಒಟ್ಟುಗೂಡಿ

ಈ ಹೊಳಪಿನಲ್ಲಿ ಈ ಬೆಳಕಿನಲ್ಲಿ
ತೊಳೆಯೋಣ ನಮ್ಮ ಮನವ
ತೇಯುತ್ತ ದೇಹ ಶ್ರೀಗಂಧದಂತೆ
ಧನ್ಯತೆಯ ಪಡೆದು ಜೀವ

ನನ್ನಲ್ಲಿ ಹಲವಾರು ಆಲೋಚನೆಗಳು ಮೂಡಲಾರಂಭಿಸಿದವು. ಅಲ್ಲಾ, ಮೇಲೆ ಆಗಸದಲ್ಲಿ, ದೇವಲೋಕದಲ್ಲಿ ಮಿನುಗುತ್ತಿರಬೇಕಾದ ನಕ್ಷತ್ರಗಳು ಇಲ್ಲಿಗೇಕೆ ಬಂದಿವೆ? ದಾರಿ ತಪ್ಪಿ ಕೆಳಗಿಳಿದು ಬಿಟ್ಟಿವೆಯೇ ಅಥವಾ ಭೂಲೋಕವನ್ನು ನೋಡುವ ಆಸೆಯಿಂದ ಕೆಳಗಿಳಿದು ಬಂದಿವೆಯೇ? ಅದೇನು ಆಕರ್ಷಣೆ ಕಂಡಿರಬಹುದು ಅವುಗಳಿಗೆ ಇಲ್ಲಿ?

ಅದೆಷ್ಟು ಕೋಟಿ ಕೋಟಿ ನಕ್ಷತ್ರಗಳಿವೆ ಆಗಸದಲ್ಲಿ! ಹಾಗಾದರೆ, ಹಲವು ಕೋಟಿ ನಕ್ಷತ್ರಗಳು ಗುಂಪು ಗುಂಪಾಗಿ ಧರೆಗಿಳಿದು ಇಡೀ ಭೂಮಂಡಲದಲ್ಲಿ ಹರಡಿಹೋಗಿವೆಯೇ? ಅಥವಾ, ಪುರಾಣ ಕಥೆಗಳಲ್ಲಿ ಹೇಳುವಂತೆ

ಶಾಪಗ್ರಸ್ತವಾಗಿ ಭೂಮಿಗಿಳಿದಿವೆಯೆ? ಇಷ್ಟು ಚೆಂದವಾಗಿ, ಹೂಗಳಂತೆ ಮೃದುವಾಗಿ, ಪಾಪ ಲೇಶವೂ ಇರದಂಥ ಸ್ನಿಗ್ಧ ರೂಪವಿರುವ ಈ ನಕ್ಷತ್ರಗಳು ಶಾಪಗ್ರಸ್ತರು ಎಂದರೆ ನಂಬಲೇ ಆಗುವುದಿಲ್ಲವಲ್ಲ? ಇವೇ ನಮ್ಮ ಶಾಪ ವಿಮೋಚನೆಗೆ ಬಂದಿರುವ ದೇವತೆಗಳಂತೆ ಕಾಣುವಾಗ, ಖಂಡಿತ ಇವು ಶಾಪಗ್ರಸ್ತರಾಗಿ ಬಂದಿರಲು ಸಾಧ್ಯವೇ ಇಲ್ಲ.

ನನ್ನ ಮನಸ್ಸು ಹಾಗೂ ಬುದ್ಧಿ ನನ್ನಲ್ಲಿ ಮೂಡಿದ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸತೊಡಗಿದವು. ಹಿಂದೆಲ್ಲಾ ಪ್ರತಿಯುಗದಲ್ಲೂ ಭಗವಂತ ಶಿಷ್ಟರ ರಕ್ಷಣೆಗಾಗಿ, ದುಷ್ಟರ ಶಿಕ್ಷೆಗಾಗಿ ಅವತಾರವನ್ನೆತ್ತಿ ಬಂದ ಕಥೆಗಳು ಗೊತ್ತಿವೆ, ಮತ್ಸ್ಯ, ಕೂರ್ಮ ಮೊದಲುಗೊಂಡು ಇದೀಗ ಕಲ್ಕ್ಯಾವತಾರವಾಗಿ ಬರಲಿದ್ದಾನೆ ಎನ್ನುತ್ತಾರೆ. ಬಹುಶಃ ಕಲ್ಕಿ ಭಗವಂತನಿಗೆ ಈ ನಕ್ಷತ್ರಗಳು **first hand information** ಕೊಡಲು ಬಂದಿರಬಹುದು ಎಂಬ ಅನುಮಾನವೂ ಮೂಡಿಬಂತು. ಹಾಗಿದ್ದಲ್ಲಿ ಇಲ್ಲೇಕೆ ಒಟ್ಟಾಗಿ ಸೇರಿದ್ದಾರೆ? ಎಲ್ಲವನ್ನೂ, ಎಲ್ಲರನ್ನೂ ಸೂಕ್ಷ್ಮವಾಗಿ ಗಮನಿಸುತ್ತಾ ಎಲ್ಲರ ಮನಸ್ಸಿನ ಅಂತರಾಳವನ್ನು ಶೋಧಿಸಿ ವಿಷಯ ಸಂಗ್ರಹಣೆ ಮಾಡುತ್ತಿರಬಹುದೆ? ಹಾಗಿದ್ದಲ್ಲಿ, ನಾನು ಬಹಳ ಎಚ್ಚರದಿಂದಿರಬೇಕು ಎಂದುಕೊಂಡೆ. ಹೀಗೆ ಚಿತ್ರ ವಿಚಿತ್ರ ಪ್ರಶ್ನೆಗಳ, ಆಲೋಚನೆಗಳ ಮಹಾಪೂರವೇ ಮನದಲ್ಲಿ ಹರಿದುಬಂತು.

ನನ್ನ ಕಣ್ಣುಗಳು ಒಂದೊಂದೇ ನಕ್ಷತ್ರವನ್ನು ನೋಡತೊಡಗಿದವು. ಒಂದೊಂದೂ ದೇದೀಪ್ಯಮಾನ! ಎಲ್ಲ ನಕ್ಷತ್ರಗಳೂ ಹೊಳೆವ ನಕ್ಷತ್ರಗಳೇ ಆದರೂ, ಪ್ರತಿಯೊಂದೂ ಮತ್ತೊಂದಕ್ಕಿಂತ ವಿಭಿನ್ನ, ವಿಶಿಷ್ಟ ಅನ್ನಿಸತೊಡಗಿತು. ಅವುಗಳಲ್ಲಿರುವ ವಿಭಿನ್ನತೆ ಏನಿರಬಹುದು? ಒಂದೊಂದು ನಕ್ಷತ್ರವೂ ಅದಾವ ಕಾರಣದಿಂದ ಬೇರೆಯಾಗಿರಬಹುದು? ಎಂದು ಆಲೋಚಿಸಿದಾಗ, ಇದು ಅಷ್ಟು ಸುಲಭದ ಪ್ರಶ್ನೆಯಲ್ಲ ಎನ್ನಿಸಿತು. ಈ ನಕ್ಷತ್ರಗಳೂ ಬೆಳೆಯುತ್ತವೆ ಎಂದು ಓದಿದ್ದೆ. ಹಾಗಾದರೆ, ಈ ನಕ್ಷತ್ರಗಳು ಹೇಗೆ ಬೆಳೆಯಬಹುದು? ಬೆಳೆದಾಗ ಹೇಗೆ ಕಾಣಬಹುದು? ಬೆಳೆದು ಯಾವ ಕಡೆ ಚಲಿಸಿ ಬೆಳಕು ನೀಡಬಹುದು? ಎಷ್ಟು ಬೆಳಕು ನೀಡಬಹುದು? ಆಗ ನಾನು ಇವನ್ನು ಕಾಣಲು ಸಾಧ್ಯವೇ.... ಅಬ್ಬಬ್ಬಾ! ಏನೆಲ್ಲ ಪ್ರಶ್ನೆಗಳು ಮನಸ್ಸಿನಲ್ಲಿ ಬರುತ್ತಿವೆಯಲ್ಲಾ ಎಂದು ನನಗೇ ಆಶ್ಚರ್ಯವಾಗತೊಡಗಿತು.

ನಕ್ಷತ್ರಗಳೂ ಸಾಯುತ್ತವೆ ಎಂದು ಓದಿದ್ದೆ. ಕೆಲ ನಕ್ಷತ್ರಗಳಿಗೆ ಆಯಸ್ಸು ಕಡಿಮೆ ಇದ್ದು ಬೇಗನೇ ಸಾಯುತ್ತವಂತೆ. ಆದರೆ ಈ ನಕ್ಷತ್ರಗಳನ್ನು ನೋಡಿದಾಗ ಈ ಯಾವುದೂ ಬೇಗ ಸಾಯಬಾರದು ಎಂದು ಮನದಲ್ಲಿ ಪ್ರಾರ್ಥಿಸಿದೆ.

ಈ ನಕ್ಷತ್ರಗಳು ಈಗ ಇಲ್ಲಿ ನನ್ನೆದುರು ನೂರಾರು ಕನಸುಗಳನ್ನು ಕಟ್ಟಿಕೊಂಡಿರುವುದು ಕಾಣಿಸುತ್ತಿದೆ. ಆ ಕನಸುಗಳು ಏನಾಗಿರಬಹುದು? ಇಡೀ ವಿಶ್ವವನ್ನು ಕಲ್ಪನಾ ಲೋಕದಲ್ಲಿಯೇ ನೋಡುತ್ತಾ, ಸಂಚರಿಸುತ್ತಾ ತಮ್ಮದೇ ಒಂದು ರಂಗು ರಂಗಿನ ಲೋಕ ನಿರ್ಮಾಣ ಮಾಡುತ್ತಿರಬಹುದೇ? ಆ ಲೋಕವನ್ನು ನಾನು ನೋಡಲು ಸಾಧ್ಯವೇ? ಆ ಲೋಕವನ್ನು ಬೇಧಿಸಿ ನಾನು ಕೂಡ ಅದರ ಒಂದು ಅಂಗವಾಗಲು ಸಾಧ್ಯವೇ? ಎಂಬಂತಹ ಆಲೋಚನೆಗಳು ಕ್ಷಣ ಮಾತ್ರದಲ್ಲಿ ಸುಳಿದವು. ನನ್ನನ್ನೇ ದಿಟ್ಟಿಸುತ್ತ ಒಂದೇ ಸಮನೆ ನಗು ಮೊಗದಿಂದ ನೋಡುತ್ತಿದ್ದ ನಕ್ಷತ್ರಗಳನ್ನು ಕಂಡಾಗ ನಾನು ಸಮ್ಮೋಹಿತಳಾದೆ. ನನ್ನನ್ನೇ ಮರೆತು ಆ ನಕ್ಷತ್ರಗಳ ಗುಂಪಿನಲ್ಲಿ ನಾನೂ ಒಂದು ನಕ್ಷತ್ರವಾಗುವ ಬಯಕೆ ಹೊಂದಿದೆ.

ಕಳೆದ ವಾರ ನಾನು ದಾವಣಗೆರೆಗೆ ಹೋಗಿದ್ದೆ. ನಾನು ಮೂರು ವರ್ಷ ಕಲಿತ, ಸುಮಾರು ಇಪ್ಪತ್ತೇಳು ವರ್ಷಗಳಷ್ಟು ಸುದೀರ್ಘ ಕಾಲ ಕಲಿಸುತ್ತಾ ಕಲಿತ, ನನ್ನ ಶಾಲೆಗೆ ಆಹ್ವಾನಿತಳಾಗಿ ಹೋಗಿದ್ದೆ. ಸಮಾರಂಭದಲ್ಲಿ ಮಾತನಾಡಲು ವೇದಿಕೆಯ ಮೇಲೆ ನಿಂತು ಕೆಳಗೆ ಶಿಸ್ತಿನಿಂದ ಕುಳಿತು ನನ್ನನ್ನೇ ದಿಟ್ಟಿಸುತ್ತಿದ್ದ ಪ್ರೌಢಶಾಲಾ ಮಕ್ಕಳ ಹೊಳೆ ಹೊಳೆವ ಜೋಡಿ ಕಣ್ಣುಗಳ ಸಮೂಹ ನೋಡಿದಾಗ ಒಂದು ಕ್ಷಣದಲ್ಲಿ ಮೂಡಿದ ಭಾವ ಲಹರಿಯನ್ನು ಇಲ್ಲಿ ಸಣ್ಣ ಲೇಖನವಾಗಿಸಿದ್ದೇನೆ.

***

ರೈಲು

– ರಾಧಿಕಾ ವಿ. ಗುಜ್ಜರ್

ಚುಕು ಬುಕು ಚುಕು ಬುಕು
ಕುಬ್ಬದ ಕಬ್ಬೊಗೆಯ ರೈಲು
ಅದಕ್ಕದರದೇ ಪಥಚಲನೆಯು
ನಿಗದಿತ ವೇಗ, ಗಮ್ಯ, ನಿಲುಗಡೆಯು

ಅವೇ ಎರಡು ಸರಳ ರೇಖೆಗಳು
ಅದೇ ಸಮತಟ್ಟಾದ ದಾರಿಯು
ಅದೇ ಮುರಿಯದ ಒಪ್ಪಂದವು
ಹಸಿರಿಗೆ ನಡೆ, ಕೆಂಪಿಗೆ ತಡೆಯು

ಮುಖಭಾವದಲ್ಲಿಲ್ಲ ಬದಲಾವಣೆ
ಮಾತಿರದ ಅಳತೆಯದ್ದೇ ಕೂಗು
ಒಡಲಿನ ಸುಡುವಾಗ್ನಿಗೋ ಏನೋ
ಒಮ್ಮೊಮ್ಮೆ ನಿಟ್ಟುಸಿರುಸುರುವುದು

ಹನ್ನೆರಡೇನು ನಲವತ್ತೆರಡು
ಹೊರೆಯ ಹೊತ್ತೊಯ್ಯುವುದು
ತನ್ನ ಜೀವಕೆ ಕೊಂಡಿಯಾದವರ
ನಂಟನೆಂದೂ ತಾ ಬಿಡಿಸಿಕೊಳ್ಳದು

ಹೇರಿ ಹೋಗುವವರೇ ಬಳಗವು
ಏರಿ ಕುಳಿತವರೇ ಆಪ್ತೇಷ್ಟರು
ತನ್ನದೇ ಕಟ್ಟುಪಾಡಿನ ನೀತಿಗೆ
ಹೊಂದುವ ರಿಕಾಪು ತೊಟ್ಟಿರುವುದು

ಕರ್ತವ್ಯನಿರತ ಮಿತ್ರನಿಗೆ
ಹಾನಿಗೈಯದಿರೆ ಅದೇ ಉಪಕಾರವು
ಓರೆಕೋರೆಗಳು ನಮ್ಮಲ್ಲಿರೆ
ಒರೆಗಾರರಾಗುವುದು ತರವಲ್ಲವು

ಕಠಿಣ ಹೊರಮೈಯಿದ್ದರೂ
ಕಾಣದೆಂದೂ ಬರ್ಬರತೆಯು
ವೃತ್ತಿಪರತೆಗೆ ಉಪಮೆಯಿದು
ರಾಷ್ಟ್ರವೆಂಬ ಕಾಯದ ನರನಾಡಿಯು


***

ಪುಸ್ತಕ ಪರಿಚಯ

'ನೀಲಾಂಜನೆ ಮತ್ತು ಇತರ ಕತೆಗಳು' – ನಾ ಕಂಡಂತೆ

ಪುಸ್ತಕ: ನೀಲಾಂಜನೆ ಮತ್ತು ಇತರ ಕತೆಗಳು – ಸಣ್ಣಕಥಾ ಸಂಕಲನ
ಲೇಖಕಿ: ಶ್ರೀಮತಿ ಎಲ್.ಗಿರಿಜಾರಾಜ್. ಪ್ರಕಾಶಕರು: ಗಿರಿಜಾ ಪ್ರಕಾಶನ, ಬೆಂಗಳೂರು.
ಪ್ರಕಟನೆ: ಅಕ್ಟೋಬರ್, 2023.

– ಎನ್.ವಿ. ರಘುರಾಂ



ಶ್ರೀಮತಿ ಎಲ್. ಗಿರಿಜಾ ರಾಜ್‌ರವರು ಜೀವನೋತ್ಸಾಹಿ ಲೇಖಕಿ. ಬೆಂಗಳೂರಿನ ವಿವೇಕಾನಂದ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕಿಯಾಗಿ ನಿಸ್ಪೃಹ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಇವರು ಕವನ ಸಂಕಲನಗಳು, ಕಥಾ ಸಂಕಲನಗಳು, ನಗೆ ಲೇಖನಗಳನ್ನು ಒಳಗೊಂಡಂತೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಹನ್ನೊಂದು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. 'ಅಮೃತ ಚೇತನಾ', 'ರೂಪದರ್ಶಿ', 'ಒಲವೆಂಬ ಸುಂದರ ಒಗಟು' ಈಗಾಗಲೇ ಪ್ರಕಟವಾಗಿರುವ ಕಥಾ ಸಂಕಲನಗಳು. 2015ರಲ್ಲಿ 'ರೂಪದರ್ಶಿ' ಪುಸ್ತಕಕ್ಕೆ ಕರ್ನಾಟಕ ಲೇಖಕಿಯರ ಸಂಘದಿಂದ 'ತ್ರಿವೇಣಿ ದತ್ತಿ' ಪ್ರಶಸ್ತಿ, 2020ರಲ್ಲಿ 'ಒಲವೆಂಬ ಸುಂದರ ಒಗಟು' ಪುಸ್ತಕಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ 'ಜಯಲಕ್ಷ್ಮೀ ಮತ್ತು ಬಾಪು ರಾಮಣ್ಣ' ದತ್ತಿ ಪ್ರಶಸ್ತಿ ಜೊತೆಗೆ ಇನ್ನೂ ಅನೇಕ ಪ್ರಶಸ್ತಿಗಳು ಇವರಿಗೆ ದೊರಕಿವೆ.

ಇವರ ಹನ್ನೆರಡನೇ ಕೃತಿ 'ನೀಲಾಂಜನೆ ಮತ್ತು ಇತರ ಕತೆಗಳು' ಎಂಬ ಕಥಾ ಸಂಕಲನವನ್ನು ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ವೇದಿಕೆಯಲ್ಲಿ 2023ರ ಆಕ್ಟೋಬರ್ 8ನೆಯ ತಾರೀಖಿನಂದು ಬಿಡುಗಡೆ ಮಾಡಿರುತ್ತಾರೆ. ಶುದ್ಧ ಭಾಷೆ, ಲವಲವಿಕೆ, ವಿಭಿನ್ನ ಕಲ್ಪನೆ, ವಿವಿಧ ತಂತ್ರಗಾರಿಕೆ ಇವರ ಕಥಾಸಂಕಲನಗಳಲ್ಲಿ ಕಾಣುವ ಗುಣಗಳು ಎಂದು ಶ್ರೀಮತಿ ವಿಜಯಲಕ್ಷ್ಮಿ. ಕೆ.ಎಂ.ರವರು ಬೆನ್ನುಡಿಯಲ್ಲಿ ಹೇಳಿದ್ದಾರೆ. ಈ ಕಥಾಸಂಕಲನದ ಬಗ್ಗೆ 'ನಾನು ಕಂಡಂತೆ' ಚಿಕ್ಕ ಪರಿಚಯ ಲೇಖನವನ್ನು ಬರೆಯಲು ಪ್ರಯತ್ನಪಟ್ಟಿದ್ದೇನೆ.

'ನೀಲಾಂಜನೇಯ ನೃತ್ಯ ಪ್ರಸಂಗ' ಪಂಪರಚಿತ 'ಆದಿ ಪುರಾಣ'ದಲ್ಲಿ ಒಂದು ಮಹತ್ವವಾದ ಪ್ರಸಂಗ. ಪಂಪ ರಚಿಸಿದ ಎರಡು ಮಹಾ ಕೃತಿಗಳಲ್ಲಿ 'ಆದಿ ಪುರಾಣ'ವೂ ಒಂದು. ಇದು 'ಜಿನ ಪುರಾಣ' ವನ್ನು ಆಧರಿಸಿ ರಚಿಸಿದ ಕೃತಿ. ಭೋಗವನ್ನು ನಿರಾಕರಿಸಿ ಮುಕ್ತಿಯ ಪಥದಲ್ಲಿ ನಡೆಯುವುದು ಅಥವಾ ಬಹುಶಃ ಜಿನ ಧರ್ಮದ ತಾತ್ವಿಕತೆ ಪ್ರತಿಪಾದನೆಯನ್ನು ಸುಂದರವಾದ ಕಾವ್ಯತ್ಮಕೆಗಳ ಮೂಲಕ ಕಟ್ಟಿಕೊಟ್ಟಿರುವುದು ಈ ರಚನೆಯಲ್ಲಿ ಕಂಡುಬರುತ್ತದೆ ಎಂದು ಪ್ರಾಜ್ಞರು ಹೇಳುತ್ತಾರೆ.

ಈ ಕಾವ್ಯದ ಕೇಂದ್ರ ಪಾತ್ರವೇ 'ಪುರುದೇವ'(ವೃಷಭನಾಥ). ಈಗಾಗಲೇ ಒಂಭತ್ತು ಜನ್ಮಗಳನ್ನೆತ್ತಿ ನಾನಾ ಸುಖ ಭೋಗಗಳನ್ನು ಅನುಭವಿಸಿ ಕೊನೆಗೆ 'ನಾಭಿರಾಜ'ನ ಪುತ್ರ 'ಪುರುದೇವ'ನಾಗಿ ಜನಿಸಿದ್ದಾನೆ. ಈ ಜನ್ಮದಲ್ಲೂ ಪರಿನಿಷ್ಕ್ರಮಣ ಕಾಲ ಸನ್ನಿಹಿತವಾದಾಗ, ಇಂದ್ರನೇ ಅತನನ್ನು ಸಂತುಷ್ಟಿಗೊಳಿಸಲು, ಅವನ ಅನುಮತಿಯೊಂದಿಗೆ

ಸಂಗೀತ ಮತ್ತು ನೃತ್ಯ ಕಾರ್ಯಕ್ರಮ ಏರ್ಪಡಿಸುತ್ತಾನೆ. ದೇವಲೋಕದ ಸುಂದರಿ ನೀಲಾಂಜನೆಯೇ ನೃತ್ಯಕ್ಕೆ ನಿಯೋಜನೆಗೊಂಡಿರುತ್ತಾಳೆ. ಈ ಪ್ರಸಂಗವನ್ನು ಆಧರಿಸಿ ಮೊದಲ ಕಥೆ 'ನೀಲಾಂಜನೆ'ಯಾಗಿ ಮೂಡಿ ಬಂದಿದೆ. ನೃತ್ಯಕ್ಕೆ ಹೊರಡುವ ಸಂದರ್ಭದಲ್ಲಿ ನೀಲಾಂಜನೆ ತನ್ನ ಸಖಿಯೊಡನೆ ನಡೆಸುವ ಸಂಭಾಷಣೆಯೊಂದಿಗೆ ಕಥೆ ಪ್ರಾರಂಭವಾಗುತ್ತದೆ.

ದೇವಸುಂದರಿಯ ರಂಗಪ್ರವೇಶ, ಸಭಾಭವನದಲ್ಲಿ ಉಂಟಾದ ಸಂಚಾರ, ಆಕೆಯ ನೃತ್ಯ, ಇವೆಲ್ಲವೂ ಕಾವ್ಯಾಭಿವ್ಯಕ್ತ ಮಾಡುವ ಸಮಯ. ಕಥೆಯಲ್ಲಿ ಸುಂದರವಾಗಿ ಮೂಡಿಬಂದಿವೆ. ಭೋಗದ ತುತ್ತ ತುದಿಯಲ್ಲಿ ಇರುವಾಗಲೇ 'ನೀಲಾಂಜನೆ'ಯ ಕಾಲ ಮುಗಿಯುತ್ತದೆ. ಆಗ ರಸಭಂಗವಾಗುವುದನ್ನು ತಪ್ಪಿಸಲು ಇಂದ್ರನೇ ಮಾಯಾ ನೀಲಾಂಜನೆಯನ್ನು ಸೃಷ್ಟಿಸಿ ನೃತ್ಯ ಮುಂದುವರೆಯುವಂತೆ ಮಾಡುತ್ತಾನೆ. ಈ ಬದಲಾವಣೆ ಪುರುದೇವ ನಿಗೆ ಮಾತ್ರ ಗೊತ್ತಾಗುತ್ತದೆ. ಇಲ್ಲಿ ಸಾವಿನ ಸಾರ್ವಭೌಮತ್ವದ ಜೊತೆಗೆ ಅದರ ನಿಗೂಢತೆ ಕೂಡ ಅತ್ಯಂತ ಪರಿಣಾಮಕಾರಿಯಾಗಿ ಅನಾವರಣಗೊಂಡಿದೆ. ಆ ಸಮಯದಲ್ಲಿ ಇಂದ್ರನ 'ಸಮಯ ಪ್ರಜ್ಞೆ' ಅನಾವರಣ ಆಗುವುದರ ಜೊತೆಗೆ ಪುರುದೇವನ ಕೈವಲ್ಯ ಜ್ಞಾನದ ಬಾಗಿಲನ್ನು ತೆರೆಯುತ್ತದೆ. ಆದರೆ ಈ ಅನುಭವ ಅಲ್ಲಿರುವ ಇತರರಿಗೆ ನಿಲುಕದೆ ಇರುವ ಅರಿವು ಕೂಡ ನಮಗಾಗುತ್ತದೆ. ನೀಲಾಂಜನೆಯ ರೂಪ ಕರಗಿಹೋಗಿ ಲೋಕದ ಬದುಕಿನ ಅನಿತ್ಯತೆ ಅನಾವರಣವಾದಾಗ ಲೌಕಿಕ ಮೋಹದ ವಜ್ರ ಕಠೋರ ಬೇಡಿಯನ್ನು ಕ್ಷಣಮಾತ್ರದಲ್ಲಿ ಕಿತ್ತೊಗೆದು ಮುಕ್ತಿ ಪಥದಲ್ಲಿ ಪುರುದೇವ ಹೊರಟಿದ್ದು ಕಾಣುತ್ತದೆ. ಲೌಕಿಕ, ಭೋಗ, ಸಂಪತ್ತುಗಳ ಕ್ಷಣ ಭಂಗುರತೆ, 'ತನು ರೂಪ, ಯವ್ವನ, ವಿಭವ, ಧನ, ಸೌಭಾಗ್ಯ ಎಲ್ಲವೂ ಬೊಬ್ಬುಳಕೆಗಳಂತೆ ನಶ್ವರ'ವೆಂದು ತಿಳಿಯುತ್ತದೆ ಎಂದು ಲೇಖಕಿ ಹೇಳಿದ್ದಾರೆ. ಇದನ್ನು ಓದಿದಾಗ, ಮುಖಪುಟ ಕೂಡ ಅರ್ಥಪೂರ್ಣವಾಗಿ ಮೂಡಿಬಂದಿರುವುದರ ಅರಿವಾಗುತ್ತದೆ.

ಈ ಪ್ರಸಂಗ ಬೇರೆ ಬೇರೆ ರೂಪದಲ್ಲಿ ಈಗಾಗಲೇ ಬಂದಿದೆ. ಆದರೆ ಇಲ್ಲಿ ಲೇಖಕಿ 'ನೀಲಾಂಜನೆ'ಯನ್ನು 'ಹೆಣ್ಣಿನ ರೂಪದ ಯಂತ್ರ' ಎಂದು ಕರೆಯದೇ ಇರುವುದು ಗಮನಾರ್ಹ. ಮೂಲದಲ್ಲಿ ಹೇಗಿದೆಯೋ ನನಗೆ ಗೊತ್ತಿಲ್ಲ. ಆದರೆ ಎರಡನೆಯ ಪಿ.ಯು.ಸಿ. ಐಚ್ಛಿಕ ಕನ್ನಡ ಪಠ್ಯ ಪುಸ್ತಕದಲ್ಲಿ ಈ ರೀತಿಯ ಪದ ಪ್ರಯೋಗವಿರುವುದು ನಾನು ಕೆಲವು ದಿನಗಳ ಹಿಂದೆ ಒಂದು ಸಂದರ್ಭದಲ್ಲಿ ಓದಿದ ನೆನಪಿದೆ.

> 'ನಾರೀ ರೂಪದ ಯಂತ್ರಂ
> ಚಾರುತರಂ ನೋಡೆ ನೋಡೆ ಕರಗೀದುಧೀ ಸಂ
> ಸಾರದನಿತ್ಯತೆ....... '

ಹಾಗಾಗಿ ಕಥೆಯನ್ನು ಹೇಳುವಾಗ ಅದರ ಮೂಲ ಕಥೆಯ ಪ್ರಭಾವದಲ್ಲಿ ಬಂದಿಯಾಗದೆ ತಮ್ಮತನವನ್ನು ಮೆರೆದಿದ್ದಾರೆ. ಹಾಗಾಗಿ ನನಗೆ ಈ ಕಥೆ, ಲೇಖಕಿ ಹೇಳಿರುವ ರೀತಿ ಇಷ್ಟವಾಯಿತು.

ನಮ್ಮ ಮುಂದೆ ನಡೆಯುವ ಘಟನೆಯೊಂದರಿಂದ ನಮ್ಮ ಮನಃಪರಿವರ್ತನೆಯಾಗುವ ಪರಿಯೊಂದನ್ನು ಈ ಕಥೆ ಹೇಳುತ್ತದೆ. ಈ ಕಥಾ ಸಂಕಲನದಲ್ಲಿ ನೀಲಾಂಜನೆಯ ಕಥೆ ಮೊದಲ ಕಥೆಯಾಗಿ ಬಂದು, ಮುಂದೆ ಬರುವ ಕಥೆಗಳ ಬಗ್ಗೆ ಒಂದು ಸುಳಿವು ಸಿಗುತ್ತದೆ. ಹಾಗೆಂದು ಊಹಿಸಿಕೊಂಡು ಉಳಿದ ಕಥೆಗಳನ್ನು ಓದಿದರೆ ಮನಃಪರಿವರ್ತನೆಗೆ ಒಳಗಾಗುವ ಅನೇಕ ಕಥೆಗಳು ಕಾಣಸಿಗುತ್ತವೆ. ಹಾಗಾದರೆ ಎಲ್ಲಾ ಕಥೆಗಳು ಅಲೌಕಿಕ ಅನುಭವಗಳಿಂದ ಕೂಡಿದ ಮುಕ್ತಿ ಮಾರ್ಗದಲ್ಲಿ ನಡೆಯುವ ಕಥೆಗಳು ಇರಬಹುದೇ ಎಂದು ಅನುಮಾನಿಸುವುದು ಬೇಡ. ಏಕೆಂದರೆ, ಉಳಿದ ಎಲ್ಲಾ ಕಥೆಗಳು ನಡೆಯುವುದು ಈಗಿನ ವರ್ತಮಾನದ ಕಾಲದಲ್ಲಿ. ಇಲ್ಲಿ ಪುರುವೂ ಇಲ್ಲ, ಹಾಗಾಗಿ ಇಂದ್ರನೂ

ಅಪ್ಸರೆ ಸ್ತ್ರೀಯರನ್ನು ಕಳುಹಿಸುವುದಿಲ್ಲ! ಆದರೆ ದೇವರನ್ನು ನಂಬಿ ಸನ್ಮಾರ್ಗದಲ್ಲಿ ನಡೆದರೆ ಆತ ಕೈಬಿಡುವುದಿಲ್ಲ ಎಂಬ ಭರವಸೆ ಕೊಡುವ ಕಥೆಗಳು ಇವೆ. ಇಲ್ಲಿರುವ ಕಥೆಗಳಲ್ಲಿ ಕಥಾನಾಯಕಿ ಅಥವಾ ಕಥಾನಾಯಕನ ಮುಂದೆ ನಡೆಯುವ ಘಟನೆಯೋ ಅಥವಾ ಸಂಗತಿಯೋ, ಅವಳ/ನ ತಿಳುವಳಿಕೆಯ ಪರಿಧಿಯನ್ನು ವಿಸ್ತರಿಸಿ ಅರಿವಿನಕಡೆ ಮುಖ ಮಾಡುವ ಅಥವಾ ಆ ದಾರಿಯಲ್ಲಿ ಕೆಲ ಹೆಜ್ಜೆಗಳನ್ನು ಇಡುವ ಅಥವಾ ಜ್ಞಾನ ಸಂಪಾದಿಸುವುದನ್ನು ಕಾಣುತ್ತೇವೆ. ಆದರೆ ಅವೆಲ್ಲವೂ ಸಾರ್ವತ್ರಿಕವಾಗಿಲ್ಲ. ಕೆಲವು ಕಥೆಗಳಲ್ಲಿ ಘಟನೆಗಳು ಕೆಲವರಲ್ಲಿ ಬದಲಾವಣೆ ಮಾತ್ರ ತಂದರೆ, ಕೆಲವೆಡೆ ಮನಃಪರಿವರ್ತನೆ ಆಗಿರುವುದು ಕಾಣುತ್ತದೆ. ಕೆಲವು ಕಥೆಗಳಲ್ಲಿ ನಡೆಯುವ ಘಟನೆಗಳು ಯಾವುದೇ ಪ್ರಭಾವ ಬೀರದೆ ಹಳೆಯ ಮನಸ್ಥಿತಿಯಲ್ಲೇ ಮುಂದುವರಿಯುವ ಪಾತ್ರಗಳೂ ಇವೆ. ಹಾಗಾಗಿ ಇಲ್ಲಿ ಸಮಾಜದ ಎಲ್ಲಾ ರೀತಿಯ ಪಾತ್ರಗಳ ಚಿತ್ರಣವಿದೆ. ಹಲವು ದೇವರುಗಳು ತುಂಬಿದ್ದ ಸಭೆಯಲ್ಲೂ ಜ್ಞಾನ ಮೂಡಿದ್ದು ಪುರುದೇವನಿಗೆ ಮಾತ್ರ. ಹಾಗಾಗಿ ಈ ಕಥೆಗಳಿಗೆ ಕಲಶಪ್ರಾಯವಾಗಿ ನೀಲಾಂಜನೆ ಕಥೆ ಮೊದಲಿಗೆ ಮೂಡಿ ಬಂದಿರುವುದು ಸರಿಯಾಗಿದೆ.

'ಹೂವು ಚೆಲ್ಲಿದ ಹಾದಿ' ಕಥೆಯಲ್ಲಿ ಅಜ್ಞಾತ ಕಲಾವಿದನ ಶೋಷಣೆಗೆ ಬಳಸಿದ ದಾರಿಯಿಂದ ಕಥೆ ಪ್ರಾರಂಭ ವಾಗುತ್ತದೆ. 'ತೀರ್ಮಾನ' ಕಥೆಯಲ್ಲಿ ಮನದ ಸೆಳೆತ ತೀವ್ರವಾಗಿ ದುಡುಕಿನ ನಿರ್ಧಾರ ಮಾಡಿದ ಕಥಾ ನಾಯಕಿಯ ಪಾತ್ರದಿಂದ ಕಥೆ ಪ್ರಾರಂಭವಾಗುತ್ತದೆ. 'ನಿರಸನ' ಕಥೆಯಲ್ಲಿ ರೈಲಿನಲ್ಲಿ ಅರಳುವ ಪ್ರೀತಿಯ ಕಥೆ ಇದೆ. ಕಥೆ ಯಾವುದೇ ಆಗಿರಲಿ, ಅಲ್ಲೊಂದು ನಡೆಯುವ ಘಟನೆಯೋ ಅಥವಾ ಸಂಗತಿಯೋ ಜೀವನದ ದಿಕ್ಕನ್ನು ತಿರುಗಿಸುತ್ತದೆ. ಆ ಘಟನೆಗಳು ಯಾವುವು ಎಂದು ಪುಸ್ತಕ ಓದಿಯೇ ತಿಳಿದುಕೊಳ್ಳಬೇಕು. ಆ ಘಟನೆಗಳು ಅಯಾ ನಾಯಕ ಅಥವಾ ನಾಯಕಿಯನ್ನು ಸ್ವಲ್ಪ ಮಟ್ಟಿಗಾದರೂ ಪುನರುತ್ಥಾನ ಮಾಡುತ್ತವೆ. ಆ ಮಟ್ಟಿಗೆ ಆ ಕಥೆಗಳಿಗೆ 'ನೀಲಾಂಜನ' ಕಥೆಯನ್ನು ಹಿಂಬಾಲಿಸುವ ಅರ್ಹತೆ ಗಳಿಸಿಕೊಳ್ಳುತ್ತವೆ.

ಈ ಕಥಾ ಸಂಕಲನದಲ್ಲಿ ಬರುವ 'ಗಂಗಾ' ಸಣ್ಣ ಕಥೆ ವಿಶೇಷವಾಗಿದೆ. ಭೋಗದ ಸಂಕೇತವಾಗಿ ಬಂದ ಹೆಣ್ಣಿನ ಮನಃಪರಿವರ್ತನೆಯ ಕಥೆಯಿದು. ಚೆಲುವಯ್ಯನ ಮಾತಿನಂತೆ ಗಂಗಾ ಎಂಬಾಕೆ ಆಶ್ರಮ ಸೇರಿದ ಮೇಲೆ ನಾಲ್ಕು ವರ್ಷದಲ್ಲಿ ಪೂಜನೀಯ ಗುರುಮಾತೆಯೇ ಆಗುತ್ತಾಳೆ. ಈ ಕಥೆಯನ್ನು ಓದಿದಾಗ ಆಕೆ ಗುರುಮಾತೆಯಾಗಲು ತೆಗೆದುಕೊಂಡ ನಾಲ್ಕು ವರ್ಷಗಳ ಅವಧಿ ಸ್ವಲ್ಪ ಕಡಿಮೆ ಆಯಿತೇನೋ ಎಂದು ನನಗೆ ಅನಿಸಿತು. ಬದಲಾವಣೆಗೆ ಬಹುಶಃ ನಾಲ್ಕು ವರ್ಷ ಸಾಕೇನೋ, ಆದರೆ ಮನಃಪರಿವರ್ತನೆಗೆ ಕನಿಷ್ಠ ಹತ್ತು ವರ್ಷಗಳಾದರೂ ಬೇಡವೇ ಅನಿಸಿದ್ದು ನಿಜ. ಆದರೆ ನೀಲಾಂಜನೆ ಕಥೆಯ ಹಿನ್ನೆಲೆಯಲ್ಲಿ ಈ ಕಥೆ ಓದಿದರೆ ಮನಃಪರಿವರ್ತನೆ ಆಗಲು ನಾಲ್ಕು ವರ್ಷ ಕಡಿಮೆಯ ಅವಧಿ ಅನಿಸಲಿಲ್ಲ. ನೀಲಾಂಜನೆಯಲ್ಲೂ ಲೇಖಕಿ ಬಳಸಿರುವ ಪದ 'ಮೊದಲೇ ಸಂಸ್ಕಾರಭರಿತವಾಗಿದ್ದ ಜೀವಕ್ಕೆ...' ಎಂದು ಪುರುದೇವನ ಬಗ್ಗೆ ಹೇಳುತ್ತಾರೆ. ಅದೇ ರೀತಿಯಲ್ಲಿ ಗಂಗಾಳ ಮನೆಗೆ ಹೋದ ಚೆಲುವಯ್ಯ ನವರಿಗೆ ಕಂಡಿದ್ದು ಆಕೆಯ ಸುಸಂಸ್ಕೃತ ನಡವಳಿಕೆ. ಆತ ಆ ಸಂಸ್ಕಾರ ಕಂಡಿದ್ದು ಪಾರದರ್ಶಕವಾದ ಪರದೆಯ ಹಿಂದಿನ ರೀತಿಯಲ್ಲಿ. '... ನಿರ್ಮಲ ಪರಿಸರದಲ್ಲಿ ಅದು ಇನ್ನಷ್ಟು ಅನಾವರಣಗೊಳ್ಳುತ್ತದೆ....' ಎಂದ ಚೆಲುವಯ್ಯನ ಮಾತು ನಿಜವಾಗುತ್ತದೆ. ನೀಲಾಂಜನೆ ಕಥೆಯ ಹಿನ್ನೆಲೆಯಲ್ಲಿ ಈ ಮಾತುಗಳನ್ನು ಮನನ ಮಾಡಿಕೊಂಡಾಗ ನಾಲ್ಕು ವರ್ಷದ ಅವಧಿ ಕಡಿಮೆ ಅನಿಸಲಿಲ್ಲ.

ಅದೇ ರೀತಿ, ನೀಲಾಂಜನೆಯಲ್ಲಿ ಬರುವ 'ತನು ರೂಪ' ಪದದ ಕಥೆಯ ಭಾಗವಾಗಿ 'ನಿರಸನ' ಕಥೆಯನ್ನೂ 'ಯವ್ವನ' ಪದಕ್ಕೆ 'ಈ ಸಾವು ನ್ಯಾಯವೇ?' ಕಥೆಯನ್ನು ಬಹುಶಃ ನೋಡಬಹುದು. ಇದೇ ರೀತಿ ನೀಲಾಂಜನೆಯಲ್ಲಿ

ಬರುವ ವಿಭವ, ಧನ, ಸೌಭಾಗ್ಯ ಪದಗಳಿಗೂ ಹೊಂದಿಕೆಯಾಗುವ ಕಥೆಗಳೋ ಅಥವಾ ಪಾತ್ರಗಳೋ ಇರುವ ಕಥೆಗಳಿವೆ. ಹಾಗಾಗಿ ಇತರ ಹದಿನಾಲ್ಕು ಕಥೆಗಳು ಒಂದರ ಹಿಂದೆ ಒಂದು ನೀಲಾಂಜನೆಯನ್ನು ಹಿಂಬಾಲಿಸಿರುವುದು ಸಮಂಜಸವಾಗಿದೆ.

ಹಾಗೆ ನೋಡಿದರೆ ನೀಲಾಂಜನೆಯಲ್ಲಿ ಬಂದಿಯಾಗದೇ ಎಲ್ಲಾ ಕಥೆಗಳನ್ನು ಸ್ವತಂತ್ರವಾಗಿ ಕೂಡ ನೋಡಲು ಸಾಧ್ಯವಿದೆ. ಒಂದು ಕಥೆಯಲ್ಲಿ ನಾಯಕಿ ಸಂಸಾರ ಬಂಧನವಾದಾಗ ಬಿಡಿಸಿಕೊಳ್ಳುವ ಅವಕಾಶ ಬಂದಾಗ ಏನು ಮಾಡಿದಳು ಎನ್ನುವ ವಿಷಯವಿದ್ದರೆ, ಮನೆಬಿಟ್ಟು ಹೊರಟ ನಾಯಕಿ ಘಟನೆಯೊಂದು ನಡೆದಾಗ ಏನು ಮಾಡಿದಳು ಎನ್ನುವ ವಿಷಯ ಇನ್ನೊಂದು ಕಥೆಯಲ್ಲಿದೆ. ತಿನ್ನುವ ಆಹಾರವನ್ನು ವ್ಯರ್ಥ ಮಾಡದಿರುವ ಬಗ್ಗೆ ಕಥೆಯೊಂದರಲ್ಲಿ ಹೇಳಿದೆ. ಹಾಗಾಗಿ ಸಮಾಜದಲ್ಲಿರುವ ವಿವಿಧ ಪಾತ್ರಗಳನ್ನು ಅರ್ಥಪೂರ್ಣವಾದ ಶೀರ್ಷಿಕೆಗಳಿರುವ ಕಥೆಗಳ ಮೂಲಕ ನಮ್ಮ ಮುಂದೆ ತಂದಿದ್ದಾರೆ.

ನೀಲಾಂಜನೆಯಲ್ಲಿ 'ಯಂತ್ರ' ಪದ ಕೈಬಿಟ್ಟಿದ್ದರೂ 'ವಿದ್ಯುಲ್ಲತೆ' ಪದ ಕೈಬಿಟ್ಟಿಲ್ಲ. ಅದಕ್ಕೆ ಅನುಗುಣವಾಗಿ ಇಲ್ಲಿ ಬರುವ ಕಥೆಗಳಲ್ಲಿ ಲೇಖಕಿ ಯಾವುದೇ ಲಿಂಗದ ಪರ ಅಥವಾ ವಿರೋಧದ ನಿಲುವುಗಳಲ್ಲಿ ಬಂದಿಯಾಗಿಲ್ಲ. ಹಾಗಾಗಿ ಮಾಡಿರುವ ತಪ್ಪು ಅರಿಯುವ ಪಾತ್ರಗಳಲ್ಲಿ ಮತ್ತು ತಪ್ಪು ಮಾಡುವ ಪಾತ್ರಗಳಲ್ಲಿ ಹೆಣ್ಣು ಮತ್ತು ಗಂಡು ಪಾತ್ರಗಳೂ ಸಮಾನವಾಗಿವೆ. ಹಾಗಾಗಿ ತನ್ನಿಂದ ದೂರವಾಗಲು ಹೊರಟಿದ್ದ ಪ್ರೀತಿ ಹಿಂದಿರುಗಿ ಬಂದಾಗ ಮನಸಾರೆ ಅಪ್ಪಿಕೊಳ್ಳುವ ಗಂಡು ಪಾತ್ರ ಇರುವ ಕಥೆಯಿದೆ. ಅದರ ಮುಂದಿನ ಕಥೆಯಲ್ಲೇ ತಾನೇ ಪ್ರೀತಿಸಲು ಪ್ರಾರಂಭಿಸಿದ ಹುಡುಗಿಯ ಭೌತಿಕ ರೂಪಕ್ಕೆ ಪ್ರಾಮುಖ್ಯತೆ ಕೊಡುವ ಬೇರೊಂದು ಗಂಡು ಪಾತ್ರವಿದೆ. ತನ್ನ ಗಂಡನ ಅಸ್ಥಿಯ ಜೊತೆ ಪಾತ್ರ ವಿರುವ ಒಂದು ವ್ಯಥೆಯ ಕಥೆಯಿದೆ. ಅದರ ಜೊತೆಗೆ 'ಸ್ವಭಾವತಃ ಸೂಕ್ಷ್ಮ ಮತ್ತು ಮೆದು ಸ್ವಭಾವದ ಹೆಣ್ಣುಮಕ್ಕಳು ಸುಲಭವಾಗಿ ಶೋಷಣೆಯ ಹಿಡಿತಕ್ಕೆ ಸಿಗುತ್ತಾರೆ' ಎಂದು ಹೇಳುತ್ತಾ ಶೋಷಣೆಗೆ ಸಿಲುಕಿದ ಹೆಣ್ಣೊಂದನ್ನು ಬಂಧನ ದಿಂದ ಬಿಡಿಸಿದ ಕಥೆಯಿದೆ.

ನೀಲಾಂಜನೆ ತನ್ನ ನೃತ್ಯದಲ್ಲಿ ನಾಟ್ಯ ಶಾಸ್ತ್ರದ ಸಕಲ ಸೂತ್ರಗಳನ್ನು ಅಳವಡಿಸಿಕೊಂಡು ರಂಗಸ್ಥಳದಲ್ಲಿ ವಿಜೃಂಭಿಸಿ ದಳು ಎಂದಿದ್ದಾರೆ ಲೇಖಕಿ. ಸಣ್ಣ ಕಥೆ ಬರೆಯುವುದರಲ್ಲಿ, ನಾಟ್ಯಶಾಸ್ತ್ರದ ರೀತಿ ಸಿದ್ಧಸೂತ್ರಗಳು ಇಲ್ಲದೇ ಇದ್ದರೂ, ಅನೇಕ ಅಲಿಖಿತ ನಿಯಮಗಳಿವೆ. ಬಹುಶಃ ಆ ಅಲಿಖಿತ ನಿಯಮಗಳನ್ನು ಬಿಟ್ಟು ವಿವಿಧ ಗಾತ್ರಗಳ ಕಥೆಗಳು ಸಮಯೋಚಿತವಾದ ಮತ್ತು ವಿವಿಧ ರೀತಿಯ ನಿರೂಪಣೆಯ ಶೈಲಿಯಲ್ಲಿ ಮೂಡಿಬಂದಿವೆ.

ಈ ಕಥೆಗಳಲ್ಲಿ ಮಾನವೀಯತೆಯ ಕಳಕಳಿಯ ಸೆಲೆ, ನವಿರಾದ ಹಾಸ್ಯ, ಪ್ರೀತಿಯ ಮಿಂಚು, ಆದರ್ಶಗಳ ಹಂಬಲ, ಯಥೇಚ್ಛವಾದ ಕಲ್ಪನಾ ಸಂಭ್ರಮವಿದೆ ಎಂದು ಮುನ್ನುಡಿಯಲ್ಲಿ ಶ್ರೀಮತಿ ರತ್ನಾಮೂರ್ತಿಯವರು ಹೇಳಿರುವುದು ಅತಿಶಯೋಕ್ತಿಯಲ್ಲವೆಂದು ಅನಿಸುತ್ತದೆ.

ಪುಸ್ತಕ ಎಷ್ಟೇ ಚೆನ್ನಾಗಿದೆ ಅನಿಸಿದರೂ ಕೆಲವೊಮ್ಮೆ ಇನ್ನಷ್ಟು ಬೇಕಿತ್ತು ಎಂದು ಅನಿಸುವುದುಂಟು. ಹಾಗಾಗಿ ಆದಷ್ಟು ಬೇಗ ಒಂದು ಒಂದು ದೊಡ್ಡ ಕಾದಂಬರಿಯೇ ಇವರ ಲೇಖನಿಯಿಂದ ಮೂಡಿಬರಲಿ ಎಂದು ಆಶಿಸುತ್ತಾ, ಶ್ರೀಮತಿ ಗಿರಿಜಾರಾಜ್‌ರವರಿಗೆ ಮತ್ತೊಮ್ಮೆ ಅಭಿನಂದನೆ ಸಲ್ಲಿಸುತ್ತಿದ್ದೇನೆ.

***

ಬಂಗಾರದೊಡವೆ ಬೇಕೆ?

– ಕಮಲಾಕ್ಷಿ ಸಿ.ಆರ್.



'ಬಂಗಾರ' ಎಂಬ ಶಬ್ದದಲ್ಲಿ ಅದೇನೋ ಸೆಳೆತ. ಕಂಡೊಡನೆ ಕಣ್ತುಂಬಿಕೊಳ್ಳುವ, ಕೈಗಳಿಂದ ಸ್ಪರ್ಶಿಸುವ ತವಕ ಮೂಡುತ್ತದೆ. ಸ್ತ್ರೀ ಪುರುಷರೆನ್ನದೆ, ವಯಸ್ಸಿನ ತಾರತಮ್ಯವಿಲ್ಲದೆ ಎಲ್ಲರನ್ನೂ ತನ್ನತ್ತ ಸೆಳೆವ ಮಾಯಾವಿ ಈ ಬಂಗಾರ.

ಚಿನ್ನ, ಸುವರ್ಣ, ಕನಕ, ಹೇಮ, ಕಾಂಚನ, ಹೊನ್ನು ಎಂಬೆಲ್ಲ ಸಮಾನಾರ್ಥಕ ಪದಗಳು ಬಂಗಾರಕ್ಕಿದೆ. ಬಂಗಾರಕ್ಕೆ ಹಲವು ಹೆಸರು ಗಳಿರುವಂತೆ, ವಿವಿಧ ರೂಪಗಳಲ್ಲಿ ಇದನ್ನು ಬಳಸಲಾಗುತ್ತೆ. ನೀರನ್ನು ಸಾರ್ವತ್ರಿಕ ದ್ರಾವಣವಾಗಿ ಬಳಸುವಂತೆ, ಅಂಗಾಂಗಳಿಗೆ ಒಪ್ಪುವಂತೆ ವಿನ್ಯಾಸಗೊಳಿಸಿ ಸಿಂಗರಿಸಲು ಇಚ್ಛಿಸುವ ಲೋಹ ಬಂಗಾರ.

ಕೈಗೆ– ಬಳೆ, ಕಡಗ, ತೋಳ್ಬಂಧಿ, ಕಿವಿಗೆ– ಓಲೆ, ಮಾಟಿ, ತಲೆಯಿಂದ ಹಣೆಯವರೆಗೆ– ಬೈತಲೆ ಬೊಟ್ಟು, ಕುತ್ತಿಗೆಗೆ– ಕಂಠೀಹಾರ, ಬೆರಳಿಗೆ– ಉಂಗುರ, ಸೊಂಟಕ್ಕೆ– ಒಡ್ಯಾಣ, ಜಡೆಗೆ– ನಾಗರು.. ಓಹ್! ಅದೆಷ್ಟು ರೂಪಗಳಲ್ಲಿ ಬಂಗಾರವನ್ನು ಆಭರಣವಾಗಿ ವಿನ್ಯಾಸಗೊಳಿಸಿ ಸಿಂಗರಿಸಬಹುದು! ದೇಹದ ಯಾವುದೇ ಭಾಗಕ್ಕೆ ಬಳಸಿದರೂ ಬಂಗಾರ ಮಾತ್ರ ಎಲ್ಲೆಡೆಯ್ಯೆ ಸಮಾನವಾಗಿ ಫಳ ಫಳ ಹೊಳೆಯುತ್ತ ಮಿನುಗುವ ನಿಷ್ಪಕ್ಷಪಾತಿ!

ಬಂಗಾರದ ಒಡವೆಗಳಲ್ಲಿ ಅತಿ ಹೆಚ್ಚಿನ ಪ್ರಾಶಸ್ತ್ಯ ಮಾಂಗಲ್ಯಕ್ಕೆ. ಗುರುಹಿರಿಯರಿಂದ ಆಶೀರ್ವದಿಸಿ, ಸುಮೂಹರ್ತದಿ ಅಗ್ನಿ ಸಾಕ್ಷಿಯಾಗಿ ವರನು ಮಂಗಳ ಸೂತ್ರವಿರುವ ಅರಿಶಿನ ದಾರವನ್ನು ಮೂರು ಗಂಟುಗಳನ್ನು ಹಾಕಿ ವಧುವಿನ ಕೊರಳಿಗೆ ಕಟ್ಟುತ್ತಾನೆ. ಆ ಕ್ಷಣದಿಂದ ವಧೂವರರು ಮಾಂಗಲ್ಯ ಬಂಧನದಿಂದ ಸತಿಪತಿಗಳಾಗಿ ಬಾಳ ಪಯಣಕ್ಕೆ ಜೊತೆಯಾಗುತ್ತಾರೆ. ಇದು ದಾಂಪತ್ಯಕ್ಕೆ ಪಾವಿತ್ರ್ಯತೆಯನ್ನು ತಂದುಕೊಡುವುದು.

ಚಿನ್ನ, ಬೆಳ್ಳಿ, ಪ್ಲಾಟಿನಂ, ರೇಡಿಯಂ.. ಇವುಗಳನ್ನು ಉತ್ಕೃಷ್ಟ ಲೋಹಗಳೆಂದು ಪರಿಗಣಿಸಲಾದರೂ ಚಿನ್ನಕ್ಕೇ ಹೆಚ್ಚು ಮಣೆ. ಚಿನ್ನವು ಹೊಂಬಣ್ಣದಿ ಹೊಳೆಯುವುದರಿಂದ ಇತರ ಲೋಹಗಳಿಗಿಂತ ಹೆಚ್ಚಾಗಿ ಸೆಳೆಯುತ್ತದೆ. ಬಂಗಾರವು ತನ್ನ ಹೊಳಪನ್ನು ಕಳೆದುಕೊಳ್ಳುವುದಿಲ್ಲ ಎಂಬುದೇ ಇದರ ಮತ್ತೊಂದು ವಿಶಿಷ್ಟ ಗುಣ. ವಾತಾವರಣದ ಉಷ್ಣತೆ, ತೇವ, ಆಮ್ಲಜನಕ ಮತ್ತು ಇತರ ರಾಸಾಯನಿಕ ಅಂಶಗಳು ಚಿನ್ನದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಈ ಗುಣಗಳು ಚಿನ್ನವನ್ನು ಆಭರಣದಲ್ಲಿ ಬಳಸುವುದು.

ಜಗತ್ತಿನ ಆರ್ಥಿಕತೆಯ ಏರಿಳಿತಗಳಿಗೆ, ಬಡತನ ಮತ್ತು ಸಿರಿವಂತಿಕೆಗೆ ಚಿನ್ನವೇ ಕಾರಣ. ಹೆಚ್ಚು ಚಿನ್ನವಿರುವ ದೇಶವೇ ಹೆಚ್ಚು ಸಿರಿವಂತ ದೇಶವೆಂದು ಭಾವಿಸಲಾಗುತ್ತೆ. ಇತಿಹಾಸದಲ್ಲಿ ಹೆಚ್ಚು ಚಿನ್ನವಿರುವ ರಾಜರ ವಿರುದ್ಧ ಇತರ ರಾಜರು ಯುದ್ಧಕ್ಕೆ ನಿಲ್ಲುತ್ತಿರಲಿಲ್ಲವಂತೆ. ಈಜಿಪ್ಟ್ ಪಿರಮಿಡ್‌ಗಳಲ್ಲಿ ಮೃತ ದೇಹದೊಂದಿಗೆ ಚಿನ್ನವನ್ನೂ ಇಡಲಾಗುತ್ತಿತ್ತಂತೆ. ಜನ್ಮಾಂತರಕ್ಕೆ ನಂಬಿಕೆಯಿದ್ದ ಈಜಿಪ್ಟಿಯನ್ನರು ಅಮರತ್ವಕ್ಕೆ ಚಿನ್ನವನ್ನು ಜೊತೆಯಾಗಿಸಿಕೊಂಡಿದ್ದರು.

ಇತಿಹಾಸದಲ್ಲಿ ನಾಣ್ಯಗಳ ತಯಾರಿಕೆಯಲ್ಲಿ ಚಿನ್ನವನ್ನು ಬಳಸುತ್ತಿದ್ದರು ಎಂಬುದು ಪ್ರತಿಷ್ಠೆಯ ಸಂಕೇತವಾಗಿತ್ತು. ರಾಜಮನೆತನಗಳು ರತ್ನಖಚಿತ ಚಿನ್ನದ ಸಿಂಹಾಸನದ ಮೇಲೆ ಆಳ್ವಿಕೆ ನಡೆಸುತ್ತಿದ್ದವು ಎಂಬುದು ರೋಚಕವೆನಿಸುತ್ತದೆ. ಮೈಸೂರು ಸಂಸ್ಥಾನದ ಚಿನ್ನದ ಅಂಬಾರಿ ಇಂದಿಗೂ ಜೀವಂತ ದಂತ ಸಾಕ್ಷಿಯಾಗಿದೆ. ಪ್ರತಿವರ್ಷ ಚಿನ್ನದ ಅಂಬಾರಿಯಲ್ಲಿ ದೇವಿ ಚಾಮುಂಡೇಶ್ವರಿಯ ಉತ್ಸವ ಕಣ್ತುಂಬಿಕೊಳ್ಳಲು ಜನತೆ ವಿಶ್ವದಾದ್ಯಂತ ಕಾತುರದಿಂದ ತುದಿಗಾಲಅನಲ್ಲಿ ಕಾದಿರುವರು.

"ಬಂಗಾರದೊಡವೆ ಬೇಕೆ ನೀರೇ, ಅಂಗನೆ ನಿನ್ನಂಗ ಸಿಂಗಾರಕೊಪ್ಪುವ.." ಎನ್ನುವ ಗೀತೆಯ ಸಾಹಿತ್ಯವು ಬಂಗಾರಕ್ಕಿಂತಲೂ ಮಿಗಿಲಾದವು. ನಿನ್ನ ಸಿಂಗರಿಸಿರಲು ಬಂಗಾರ ನಿನಗೇಕೆ?

ಬಂಗಾರ ಸಿಂಗಾರಕ್ಕೆ, ಪ್ರತಿಷ್ಠೆಗೆ ಎಂದು ಎಷ್ಟು ನಿಜವೋ ಆಪತ್ಕಾಲದ ಬಂಧು ಎಂಬುದೂ ಅಷ್ಟೇ ನಿಜ. ಹೆಣ್ಣಿಗೆ ವಿವಾಹ ಸಮಯದಲ್ಲಿ ಬಂಗಾರದ ಒಡವೆ ಹಾಕುತ್ತಿದ್ದದ್ದು ಆಪತ್ಕಾಲಕ್ಕೆ ರಕ್ಷಣೆಗಿರುವುದು ಎಂದು. ಕಷ್ಟಕಾಲದಲ್ಲಿ ಬಂಗಾರವನ್ನು ಮಾರಾಟ ಮಾಡಿ ಪರಿಹಾರ ಕಂಡುಕೊಳ್ಳಲು ಸಹಾಯವಾಗುತ್ತಿತ್ತು. ಇದು ಜನಸಾಮಾನ್ಯರಿಂದ ರಾಜ ಮನೆತನದವರವರೆಗೆ ನಡೆದುಬಂದಿತ್ತು.

ಮೈಸೂರಿನ ಅರಸರು ವಾಣಿವಿಲಾಸ ಸಾಗರ ಜಲಾಶಯ ಕಟ್ಟಿಸುವಾಗ ಆರ್ಥಿಕ ಸಂಕಷ್ಟ ಎದುರಾದಾಗಿತ್ತು. ಆಗ ಮಹಾರಾಣಿ ಕೆಂಪನಂಜಮ್ಮಣ್ಣಿಯವರು ತಮ್ಮಲ್ಲಿದ್ದ ಬಂಗಾರವನ್ನು ಮಾರಾಟ ಮಾಡಿ ಆ ಯೋಜನೆಯನ್ನು ಪೂರ್ಣಗೊಳಸಿದ್ದರು. ಬಂಗಾರಕ್ಕಿಂತಲೂ ಮಿಗಿಲಾದ ವ್ಯಕ್ತಿತ್ವ ಕೆಂಪನಂಜಮ್ಮಣ್ಣಿಯ ಗುಣ ಅನಾವರಣವಾಗಿ ವಾಣಿ ವಿಲಾಸ ಜಲಾಶಯ ಇಂದಿಗೂ ಅಜರಾಮರವಾಗಿ ಕಂಗೊಳಸುತ್ತಿದೆ.

ಬಂಗಾರವೆಂದರೆ ಅಚಲ, ಸ್ಥಿರ. ಹಾಗೆಂದೇ ಶ್ರೇಷ್ಠ ವ್ಯಕ್ತಿತ್ವವನ್ನು ಬಂಗಾರಕ್ಕೆ ಹೋಲಿಸಿ, 'ಬಂಗಾರದ ಮನುಷ್ಯ' ಎನ್ನುವುದು. ಮಕ್ಕಳನ್ನು, ಸಂಗಾತಿಯನ್ನು ಬಂಗಾರ, ಚಿನ್ನ ಎಂದೇ ಕರೆದು ಪ್ರೀತಿ ತೋರುವುದು.

ಹಬ್ಬ, ಸಮಾರಂಭಗಳಲ್ಲಿ ಬಂಗಾರ ಕೊಳ್ಳವುದು ಶುಭವೆಂದೇ ಪರಿಗಣಿಸಲಾಗುತ್ತದೆ. ಬಂಗಾರವನ್ನು ಲಕ್ಷ್ಮೀ ರೂಪವೆಂದೇ ಭಾವಿಸಿ, ಜತನದಿಂದ ಕಾಪಾಡಿಕೊಳ್ಳುತ್ತಾರೆ.

ಕನಕದಾಸರು ಭೂಮಿ ಅಗೆಯುವಾಗ, ಸಿಕ್ಕ ಬಂಗಾರವನ್ನು ತನಗಾಗಿ ಉಳಸಿಕೊಳ್ಳದೆ ಜನರ ಹಿತಕ್ಕಾಗಿ ಬಳಸಿದ ಕಾರಣ ತಿಮ್ಮಪ್ಪ ಆಗಿದ್ದವರು ಕನಕರಾದದ್ದು.

ಸೀತಾಮಾತೆ ಮಾಯಾವಿ ಬಂಗಾರದ ಜಿಂಕೆಗೆ ಮರುಳಾಗಿ, ಅದನ್ನು ತಂದು ಕೊಡುವಂತೆ ರಾಮನನ್ನು ಒತ್ತಾಯಿಸಿದ್ದರು. ಇಲ್ಲಿ ರಾಜಮನೆತನದವರೂ ಬಂಗಾರದ ಮೋಹದಿಂದ ಹೊರತಲ್ಲ ಎಂದು ತೋರಿಸುತ್ತದೆ.

ವಚನಕಾರ ಅಲ್ಲಮಪ್ರಭುಗಳು ಬಂಗಾರದ ಮೋಹ ಸಲ್ಲದು ಎನ್ನುತ್ತ, "ಭೂಮಿ ನಿನ್ನದಲ್ಲ, ಹೇಮಿ ನಿನ್ನವಳಲ್ಲ, ಕಾಮಿನಿ ನಿನ್ನವಳಲ್ಲ" ಎನ್ನುತ್ತಾರೆ.

ಹೇಮರೆಡ್ಡಿ ಮಲ್ಲಮ್ಮನ ಮೂಗಿನಲ್ಲಿದ್ದ ಬಂಗಾರದ ನತ್ತನ್ನು ಮೈದುನ ವೇಮನನ ವೇಶ್ಯೆ ಬಯಸುತ್ತಾಳೆ. ವೇಮನರು ಅತ್ತಿಗೆಗೆ ಬಂಗಾರದ ನತ್ತನ್ನು ಕೊಡುವಂತೆ ಪೀಡಿಸುತ್ತಾರೆ. ಸಾಧ್ವಿ ಹೇಮರೆಡ್ಡಿಯ ಬಂಗಾರದ ನತ್ತು, ವೇಮನರು ತತ್ವಜ್ಞಾನಿಯಾಗಿ ಪರಿವರ್ತನೆಯಾಗಲು ಕಾರಣವಾಯಿತು.

'ಬದುಕು ಬಂಗಾರವಾಗಲಿ' ಎಂದರೆ ಬದುಕು ಸಿರಿ, ಸಂತೋಷಗಳಿಂದ ತುಂಬಿರಲಿ ಎಂದರ್ಥ. ಬಂಗಾರದ ಉಡುಗೊರೆಗಳನ್ನು ಆಶೀರ್ವಾದ ರೂಪದಲ್ಲಿ ನೀಡುವುದು ಆ ಕಾರಣಕ್ಕಾಗಿಯೇ. ವಿಜಯದಶಮಿಯಂದು ಬನ್ನಿ ಪತ್ರೆಗೆ ಬಂಗಾರದಷ್ಟೇ ಮೌಲ್ಯ, ಬನ್ನಿ ಪತ್ರೆಯನ್ನು ಪರಸ್ಪರ ವಿನಿಮಯ ಮಾಡಿಕೊಂಡು ಬಂಗಾರದಂತೆ ಬಾಳಿ ಎಂದು ಶುಭ ಕೋರುವರು.

ಇಷ್ಟೆಲ್ಲ ಉನ್ನತ ಮೌಲ್ಯಗಳಿರುವ ಬಂಗಾರದ ಬೆಲೆ ಹೆಚ್ಚುತ್ತಲೇ ಇದೆ. ಚಿನ್ನವನ್ನು ನಗದಾಗಿಯೂ, ನಗದನ್ನು ಚಿನ್ನದ ಗಟ್ಟಿಯಾಗಿಯೂ ಮಾರ್ಪಡಿಸುವುದು ಅಂದಿನಿಂದ ನಡೆದು ಬಂದಿದೆ. ಇದರಿಂದ ಚಿನ್ನ ಸಂಗ್ರಹಣೆ ಕಾಳರೂಪದಲ್ಲಿ ಸಂಗ್ರಹವಾಗುವುದು ಹೆಚ್ಚಾಗಿ, ಆದಾಯ ತೆರಿಗೆ ವಂಚನೆ ಪ್ರಕರಣಗಳು ದಾಖಲಾಗುತ್ತವೆ. ಆಡಂಬರವಾಗಿ ಆಭರಣ ಧರಿಸುವವರು ಹಾಗೆಯೇ ಮನೆಯಲ್ಲಿಟ್ಟ ಚಿನ್ನಾಭಾರಣವನ್ನು ದರೋಡೆ ಮಾಡುವವರು ಹೊಂಚು ಹಾಕುತ್ತಾರೆ. ಕೆಲವೊಮ್ಮೆ ಮಾರಣಾಂತಿಕವಾಗಿ ಹಲ್ಲೆ ಮಾಡುವುದು ಉಂಟು.

ಬಂಗಾರವನ್ನು ಪ್ರತಿಷ್ಠೆ ಎಂದು ಪರಿಗಣಿಸಿ, ಚಿನ್ನಾಭರಣ ಖರೀದಿಸಿ ಪ್ರದರ್ಶನ ಮಾಡುವವರು ಇದ್ದಾರೆ. ಗಂಡನನ್ನು, ಪೋಷಕರನ್ನು ಬಂಗಾರಕ್ಕಾಗಿ ಪೀಡಿಸುವುದನ್ನೂ ನೋಡಿದ್ದೇವೆ. ವಿವಾಹ ಸಂದರ್ಭಗಳಲ್ಲಿ ವಧುವಿನ ಮೈಮೇಲೆ ಇಂತಿಷ್ಟೇ ತೂಕದ ಬಂಗಾರ ಹಾಕಬೇಕೆಂದು ಪೀಡನೆ ಇಂದಿಗೂ ಇದೆ.

ಹೆಣ್ಣನ್ನು ಬಂಗಾರಕ್ಕೆ ಹೋಲಿಸಿ, ಚಿನ್ನದ ಮಲ್ಲಿಗೆ ಹೂವೆ ಎಂದು ರಮಿಸಲು ಬಳಸಲಾಗಿದೆ.

ಈಗಂತೂ ಬಂಗಾರ ಖರೀದಿಗೆ ಮುಗಿಬಿದ್ದು ಸಾಲ ಕೊಡುವ ಬ್ಯಾಂಕುಗಳಿವೆ. ಹಾಗೆಯೇ ಗಿರಿವಿ ಇಟ್ಟ ಬಂಗಾರವನ್ನು ಬಿಡಿಸಿಕೊಂಡು ಪುನಃ ಖರೀದಿಸುವ ಕಂಪನಿಗಳೂ ಇವೆ. ಬಂಗಾರ ಒಂದು ರೀತಿಯಲ್ಲಿ ಸ್ನೇಹಿತನಂತೆ ಬದುಕಿನುದ್ದಕ್ಕೂ ಜೊತೆಯಾಗಿಯೇ ಸಾಗುತ್ತದೆ. ಹಾಗಾಗಿಯೇ, ಚಿನ್ನ ಉಳಿತಾಯಕ್ಕೆ ಹಲವು ಯೋಜನೆಯನ್ನು ರೂಪಿಸಿ, ಜನಸಾಮಾನ್ಯರನ್ನು ಬಂಗಾರದ ಅಂಗಡಿ ಮಾಲೀಕರು ಸಿಲುಕಿಸಿ ಬಿಡುವರು.

ಸೂರ್ಯೋದಯ ಹಾಗೂ ಸೂರ್ಯಾಸ್ತ ಕಾಲದಲ್ಲಿ ನೀರಿನ ಮೇಲೆ ಸೂರ್ಯನ ಬೆಳಕು ಬಿದ್ದಾಗ ಜಲರಾಶಿ ಚಿನ್ನದ ಹೊಂಬಣ್ಣದಲ್ಲಿ ನೋಡುವುದೇ ಚೆನ್ನ.

'ಬಂಗಾರ ನೀರ ಕಡಲಾಚೆಗೀಚೆಗಿದೆ ನೀಲ ನೀರ ತೀರ ...' ಎಂಬ ಗೀತೆ ಗುನುಗುವುದೇ ಅಪ್ಯಾಯಮಾನ. ಹಾಗೆ ಬಂಗಾರದ ವಿಚಾರ ಕೂಡ. ಅಗ್ನಿಯಲ್ಲಿ ಕಾಯಿಸಿದಷ್ಟೂ ಬಂಗಾರ ಹೊಳೆವುದು ಎನ್ನುವುದು ಕಷ್ಟಕಾಲದಲ್ಲಿ ಮನುಜನ ವ್ಯಕ್ತಿತ್ವ ಕೂಡ ಒರೆಗೆ ಹಚ್ಚಬಹುದು.

ಬಂಗಾರ ಕಳೆದರೆ ಭಂಗ ಕಳೆವುದು ಎಂಬ ಮಾತು ಏಕೆ ಬಂತೋ? ಬಹುಶಃ ಬಂಗಾರ ಕಡಿಮೆಯಾದಷ್ಟೂ ಅಪಾಯ ಕಡಿಮೆ ಎಂದಿರಬಹುದು.

ಬಂಗಾರ ಯಾವುದೇ ಸನ್ನಿವೇಶದಲ್ಲಿಯೂ ತನ್ನ ಮೌಲ್ಯವನ್ನು ಉಳಿಸಿಕೊಂಡು ಅಸ್ತಿತ್ವ ಕಾಪಾಡಿಕೊಳ್ಳುವುದೋ ಹಾಗೆಯೇ ಮನುಜನೂ ಬಂಗಾರದ ವ್ಯಕ್ತಿತ್ವ ಉಳಿಸಿಕೊಳ್ಳುತ್ತ ಘನವಾಗಿ ಬದುಕುವಂತಾಗಬೇಕು ಅಲ್ಲವೆ?

***

ವಿಜ್ಞಾನ ಮತ್ತು ಸಿದ್ದಣ್ಣ

– ವಿಠ್ಠಲ್ ಇಜೇರಿ

ಸಿದ್ದಣ್ಣನ ತರಗತಿಯಲ್ಲಿ 36 ವಿದ್ಯಾರ್ಥಿಗಳಿದ್ದರು. ತರಗತಿಯ ಗುರುಗಳಿಗೆ 35 ವಿದ್ಯಾರ್ಥಿಗಳನ್ನು ಸಂಭಾಳಿಸುವುದು ಕಷ್ಟವಾಗಿರಲಿಲ್ಲ, ಒಬ್ಬ ಸಿದ್ದಣ್ಣನಿಗೆ ಹೆದರುತ್ತಿದ್ದರು. ಅವನು ಹಿಂಸೆ ಏನೂ ಕೊಡ್ತಾ ಇರಲಿಲ್ಲ. ಆದರೆ ಪ್ರತಿಯೊಂದು ಪಾಠದಲ್ಲಿ ಹುಳುಕು ಹುಡುಕುವುದು ಮತ್ತು ಏನಾದರೂ ಪ್ರಶ್ನೆ ಕೇಳುವುದು ಅವನ ಸ್ವಭಾವವಾಗಿತ್ತು. ಪ್ರಸಿದ್ಧ ವಿಜ್ಞಾನಿಗಳ ಸಂಶೋಧನೆಗಳನ್ನು ದೈನಂದಿನ ಚಟುವಟಿಕೆಗಳಿಗೆ ಸಮೀಕರಿಸಿ ಗುರುಗಳಿಗೆ ತಲೆನೋವು ತರುತ್ತಿದ್ದ. ಸಿದ್ದಣ್ಣನ ಮೇಸ್ಟ್ರು ಮುಖ್ಯ ಅಧ್ಯಾಪಕರಿಗೆ "ಸಾರ್, ನನ್ನ ತರಗತಿಯಲ್ಲಿ 36 ವಿದ್ಯಾರ್ಥಿಗಳಿದ್ದಾರೆ. ನನ್ನ ತರಗತಿಗೆ 63 ವಿದ್ಯಾರ್ಥಿಗಳನ್ನು ಕೊಡಿ, ಸಿದ್ದಣ್ಣನನ್ನು ಮಾತ್ರ ಬೇರೆ ತರಗತಿಗೆ ವರ್ಗಾವಣೆ ಮಾಡಿ" ಎಂದು ಬೇಡಿಕೊಂಡರು. ಮುಖ್ಯ ಅಧ್ಯಾಪಕರು ನಕ್ಕು ಸುಮ್ಮನಾದರು.

ಒಮ್ಮೆ ಶಾಲೆಗೆ ಬಂದ ಮುಖ್ಯ ತಪಾಸಣೆ ಅಧಿಕಾರಿಗಳು ಸಿದ್ದಣ್ಣನ ತರಗತಿಗೆ ಬಂದರು. ಮೇಸ್ಟ್ರು ವಿಜ್ಞಾನದ ಪಾಠ ಮಾಡುತ್ತಿದ್ದರು. ಮಕ್ಕಳಿಗೆ ಅವರು "ಅರ್ಕಿಮೆಡಿಸ್ ಸಿದ್ಧಾಂತ ಏನು?" ಎಂದು ಪ್ರಶ್ನಿಸಿದರು. ಹಲವರು ಕೈ ಎತ್ತಿದರು. ಎತ್ತರದ ಕೈ ಸಿದ್ದಣ್ಣನದು, ಅವನಿಗೆ "ಉತ್ತರ ಹೇಳು" ಅಂದರು.

ಸಿದ್ದಣ್ಣ : ಸಾರ್, ನಮ್ಮ ಶಾಲೆಯ ಒಬ್ಬ ಹುಡುಗ ಒಬ್ಬ ವಿದ್ಯಾರ್ಥಿನಿಯೊಂದಿಗೆ ಪ್ರೇಮ ಸಾಗರದಲ್ಲಿ ಮುಳುಗಿದರೆ, ಅವನ ತಲೆಯಿಂದ ಒಂದಿಷ್ಟು ಜ್ಞಾನ ಹೊರಗೆ ಹೋಗುವುದು,. ಹೀಗೆ ಹೊರಗೆ ಹೋದ ಜ್ಞಾನದ ಪ್ರಮಾಣ, ಆ ಹುಡುಗಿ ಅವನನ್ನು ಪ್ರೀತಿಸಿದ ಪ್ರೀತಿಯ ಪ್ರಮಾಣದಷ್ಟಿರುತ್ತದೆ.

ಇನ್ಸ್ಪೆಕ್ಟರರಿಗೆ ಅರ್ಥವಾಗಲಿಲ್ಲ. ಮೇಷ್ಟ್ರ ಮುಖ ನೋಡಿದರು. ಮೇಸ್ಟ್ರು "ಅವನು ವಿಜ್ಞಾನ ನಮ್ಮ ಬದುಕಿನ ಭಾಗ ವಾಗಬೇಕು ಎಂದು ಆಧುನಿಕ ಜೀವನಕ್ಕೆ ಅಳವಡಿಸಿ ಹೇಳಿದ್ದಾನೆ. ನೀವು ಸಿದ್ದಣ್ಣ ಹೇಳಿದ ತಲೆಯನ್ನು ಅರ್ಕಿಮಿಡಿಸ್ ಸ್ನಾನ ಮಾಡಿದ ಆ ದೊಡ್ಡ ಪಾತ್ರೆಗೆ, ಪ್ರೇಮ ಸಾಗರಕ್ಕೆ ಇಳಿದುದನ್ನು ಅರ್ಕಿಮೆಡಿಸ್ ಆ ಪಾತ್ರೆಗೆ ಸ್ನಾನಕ್ಕೆ ಇಳಿದ ಹಾಗೆ, ಸಿದ್ದಣ್ಣ ಕಳೆದುಕೊಂಡ ಬುದ್ಧಿಯನ್ನು ಅರ್ಕಿಮೆಡಿಸನ ಪಾತ್ರೆಯಿಂದ ಹೊರ ಚೆಲ್ಲಿದ ನೀರು ಎಂದು ತಿಳಿದರೆ ಅರ್ಕಿಮೆಡಿಸ್ ಸಿದ್ಧಾಂತ ಸರಿಯಾಗುವುದು" ಅಂದರು. ಶಾಲಾ ತನಿಖಾಧಿಕಾರಿಗಳಿಗೆ ಅಷ್ಟು ವ್ಯವಧಾನವಿರಲಿಲ್ಲ. ಮುಂದಿನ ಪ್ರಶ್ನೆ ಕೇಳಿದರು, "ನ್ಯೂಟನ್ನನ ನಿಯಮಗಳನ್ನು ವಿವರಿಸಿರಿ?"

ಎಲ್ಲ ವಿದ್ಯಾರ್ಥಿಗಳಿಗೆ ಒಮ್ಮೆಲೇ ಮೂರು ನಿಯಮಗಳನ್ನು ಹೇಳಲಿಕ್ಕೆ ಬಾರದು, ಒಂದೊಂದೇ ನಿಯಮದ ಬಗ್ಗೆ ಕೇಳಿ? ಎಂದು ಹೇಳಲು ಧೈರ್ಯ ಸಾಲದು. ಯಾರೂ ಕೈ ಎತ್ತಿರಲಿಲ್ಲ. ಆದರೆ ಸಿದ್ದಣ್ಣ ಎದ್ದು ನಿಂತದ್ದು ಮಾತ್ರವಲ್ಲ, ಕೈ ಕೂಡ ಎತ್ತಿದ್ದ. ಇನ್ಸ್ಪೆಕ್ಟರರಿಗೆ ಸಿದ್ದಣ್ಣನ ಉತ್ತರ ಬೇಡವಾಗಿದ್ದವು, ಆದರೆ ಕೇಳದೆ ವಿಧಿಯಿಲ್ಲ. ಸಿದ್ದಣ್ಣ ನ್ಯೂಟನ್ನನ ಮೊದಲನೇ ನಿಯಮ ಹೇಳಿದ.

"ಒಬ್ಬ ಹುಡುಗ ಒಂದು ಗತಿಯಲ್ಲಿರುತ್ತಾನೆ. ಹೊರಗಡೆಯ ಒತ್ತಡಕ್ಕೆ ಒಳಪಡುವವರೆಗೆ ಅದೇ ಗತಿಯಲ್ಲಿರುತ್ತಾನೆ. ಒಬ್ಬ ಹುಡುಗಿ ಉತ್ತೇಜನ ನೀಡಿದರೆ ಅವನ ಗತಿಯಲ್ಲಿ ಬದಲಾವಣೆಯಾಗುತ್ತದೆ. ಹೀಗೆ ಉಂಟಾದ ಬದಲಾವಣೆಯ ಪ್ರಮಾಣ, ಆ ಹುಡುಗಿಯು ನೀಡಿದ ಉತ್ತೇಜನಕ್ಕೆ ಸಮನಾಗಿರುತ್ತದೆ".

ತಪಾಸಣೆ ಅಧಿಕಾರಿಗಳು 'ಸಿದ್ದಣ್ಣನ ಉದಾಹರಣೆಗಳನ್ನು ನ್ಯೂಟನ್ ನಿಯಮಕ್ಕೆ ಹೇಗೆ ಅಳವಡಿಸಿಕೊಳ್ಳಬೇಕು' ಎಂದು ತಲೆ ಕೆರಿದುಕೊಳ್ಳುವಾಗಲೇ ಸಿದ್ದಣ್ಣ, "ಸಾರ್, ನ್ಯೂಟನ್ ಎರಡನೇ ನಿಯಮ ಹುಡುಗ ಹುಡುಗಿಯೊಬ್ಬಳನ್ನು ಚುಡಾಯಿಸಿದರೆ, ಅದು ಆಕೆಗೆ ಇಷ್ಟವಾಗದೆ ಹುಡುಗನ ಕೆನ್ನೆಗೆ ಏಟು ಕೊಟ್ಟರೆ, ಆಕೆಯ ಏಟಿನ ವೇಗ ಬಿದ್ದ ಪೆಟ್ಟಿನಷ್ಟು. ಇನ್ನು ಮೂರನೇ ನಿಯಮ ಆ ಹುಡುಗ ಛೇಡಿಸಿದ ಪ್ರಕ್ರಿಯೆಗೆ ಹುಡುಗಿ ಏಟು ಕೊಟ್ಟರೆ, ಕೆನ್ನೆಗೆ ಬಿದ್ದ ಏಟಿನ ನೋವು ಹುಡುಗ ಛೇಡಿಸಿದ ಪ್ರಕ್ರಿಯೆಗಳು ಎರಡೂ ಸಮನಾಗಿ ಮತ್ತು ವಿರುದ್ಧ ಪ್ರಕ್ರಿಯೆಗಳು..

ತನಿಖಾಧಿಕಾರಿಗಳು ಪುನಃ ವಿಚಾರ ಮಾಡುವಂತೆ ಆಯಿತು. ಅವರು ಗೊಂದಲದಲ್ಲಿ ಬಿದ್ದು ಈ ವಿಜ್ಞಾನದ ತಂಟೆಯೇ ಬೇಡ ಎಂದು ಲೆಖ್ಖ ಕೇಳಿದರು.

ಮದುವೆ ಮಂಟಪದಲ್ಲಿ ವರನು ಹೋಮ ಕುಂಡದ ಒಂದು ಸುತ್ತು ಹಾಕಲು ಹತ್ತು ಸೆಕೆಂಡುಗಳು ಸಾಕು. ಹತ್ತು ಸುತ್ತು ಹಾಕಲು ಎಷ್ಟು ಸಮಯ ತೆಗೆದುಕೊಳ್ಳುತ್ತಾನೆ. ಒಬ್ಬ ಎದ್ದು ಹತ್ತರ ಮಗ್ಗಿ ಹೇಳಲು ಪ್ರಾರಂಭ ಮಾಡಿದ. ಕೂಡಲೇ ಸಿದ್ದಣ್ಣ ಎದ್ದು ಅದನ್ನು ನಿಲ್ಲಿಸಿ, "ಸಾರ್, ಒಂದು ಎರಡನೇ ತರಗತಿ ಮಕ್ಕಳ ಹಾಗೆ ಕಂಠಪಾಠದ ಉತ್ತರ ಸರಿ ಅಲ್ಲ. ನಾವು ವಾಸ್ತವ ಅರ್ಥ ಮಾಡಿಕೊಂಡು ಉತ್ತರ ಹೇಳಬೇಕು. ಮದುವೆಯ ವೇಳೆ ಮಂಗಳಸೂತ್ರ ಕಟ್ಟುತ್ತಲೇ ವರ ಸ್ವಾತಂತ್ರ್ಯ ಕಳೆದುಕೊಂಡು ಬಿಡುತ್ತಾನೆ. ವರನ ಪಂಚೆಗೆ ವಧುವಿನ ಸೀರೆಗೆ ಗಂಟು ಹಾಕುತ್ತಾರೆ. ವಧುವಿಗೆ ವರ ಇಷ್ಟವಾಗಿದ್ದರೆ ಅವನ ವೇಗಕ್ಕೆ ತಕ್ಕ ಹೆಜ್ಜೆ ಹಾಕುತ್ತಾಳೆ. ವರನ ಬಗ್ಗೆ ಅಷ್ಟಕ್ಕಷ್ಟೇ ಇದ್ದರೆ ಮೆಲ್ಲಗೆ ನಡೆದು ವರನ ವೇಗ ಕುಂಠಿಸಿಬಿಡುತ್ತಾಳೆ. ಆದುದರಿಂದ ನಿಮ್ಮ ಪ್ರಶ್ನೆ ದೋಷದಿಂದ ಕೂಡಿದೆ" ಅಂದ.

ಶಾಲೆಗೆ ಬಂದ ತನಿಖಾಧಿಕಾರಿಗಳು ಜೇಬಿನಿಂದ ಕೈವಸ್ತ್ರ ತೆಗೆದು ಮುಖದ ಮೇಲಿನ ಬೆವರು ಒರೆಸಿಕೊಳ್ಳುತ್ತ ಹೊರ ನಡೆದರು.

***



ಬೆಳಗು ಬಾ ಹಣತೆಯನು

ಸಾಮಾಜಿಕ ಜಾಲತಾಣಗಳು ಮತ್ತು ಉಪಯೋಗಗಳು

– ಪೂರ್ಣಿಮ ಭಗವಾನ್

ಜಾಲತಾಣಗಳನ್ನು ಮೊಟ್ಟ ಮೊದಲಿಗೆ ಜಗತ್ತಿಗೆ ಪರಿಚಯಿಸಿದ್ದು ಸಿ.ಈ.ಆರ್.ಎನ್. ಎಂಬ ಜಾಗತಿಕ ಸಂಸ್ಥೆ.

ಭೌತ ವಿಜ್ಞಾನದ ಅಣು ಸಂಶೋಧನೆಗಾಗಿ (ನ್ಯೂಕ್ಲಿಯರ್ ರಿಸರ್ಚ್) ನೂತನ ಆವಿಷ್ಕಾರಗಳಿಗಾಗಿ ರೂಪುಗೊಂಡ ಯುರೋಪಿಯನ್ ಸಂಸ್ಥೆಯಲ್ಲಿ ಸಾವಿರದ ಒಂಬೈನೂರ ಎಂಬತ್ತನೇ ಇಸವಿಯಲ್ಲಿ ಅಂತರ್ಜಾಲವನ್ನು ಕಂಡು ಹಿಡಿದರು. CERN ಅಂತರ್ ಸರ್ಕಾರಿ ಸಂಸ್ಥೆಯಾಗಿದೆ. ವಿಶ್ವದ ಅತಿದೊಡ್ಡ ಕಣ ಭೌತಶಾಸ್ತ್ರ ಪ್ರಯೋಗಾಲಯವನ್ನು ಹೊಂದಿದೆ. ಇದು 23 ಸದಸ್ಯ ರಾಷ್ಟ್ರಗಳನ್ನು ಹೊಂದಿದೆ. ಅಂತರ್ಜಾಲದಲ್ಲಿನ ವ್ಯಾಪಕ ಮಾಹಿತಿ ವ್ಯವಸ್ಥೆಯನ್ನು ಕಂಡುಹಿಡಿದು ಅದರ (world wide web) ಜನ್ಮ ಸ್ಥಳವೂ ಆಗಿದೆ. 1990ರಲ್ಲಿ ಪ್ರಥಮ ಜಾಲತಾಣವನ್ನು ರೂಪಿಸಿದ ಹೆಗ್ಗಳಿಕೆಗೆ ಪಾತ್ರವಾಗಿದೆ. 30ನೇ ಏಪ್ರಿಲ್ 1993ರಂದು ತನ್ನ ಸ್ವಾಮ್ಯವನ್ನು ಇತರರಿಗೆ ಬಿಟ್ಟುಕೊಟ್ಟಿದೆ. ಯಾರು ಬೇಕಾದರೂ ಅದನ್ನು ಉಚಿತವಾಗಿ ಬಳಸಬಹುದು.

ಜಾಲತಾಣವು ಒಂದು ಒಂಟಿ ಪ್ರಭಾವಕ್ಷೇತ್ರ (Domain) ಹೆಸರಿನಿಂದ ಸೇವೆ ಪಡೆಯುವ ಸಂಬಂಧಿತ ಜಾಲಪುಟಗಳ ಸಮೂಹ. ಸಾಮಾಜಿಕ ಜಾಲತಾಣ ಎನ್ನುವುದು ವಿಶ್ವವ್ಯಾಪಿ ಜಾಲದಿಂದ ಜನರನ್ನು ಸಂಪರ್ಕಿಸುವ ಸಾಮಾಜಿಕ ಸಂಬಂಧದ ಗುಂಪು.

ಜಾಲತಾಣಗಳಲ್ಲಿ ಮುಖ್ಯವಾಗಿ ಮೂರು ವಿಧ. ಸಾಮಾಜಿಕ ಜಾಲತಾಣಗಳು, ಸರ್ಕಾರಿ ಜಾಲತಾಣಗಳು, ವೈಯಕ್ತಿಕ ಜಾಲತಾಣಗಳು.

ಜಗತ್ತಿನ ಅದ್ಭುತ ವೈಜ್ಞಾನಿಕ ಆವಿಷ್ಕಾರಗಳಲ್ಲಿ ಅಂತರ್ಜಾಲ, ಜಾಲತಾಣಗಳು ಸಹ ಸೇರಿವೆ. ಸಾಮಾಜಿಕ ಜಾಲತಾಣಗಳು ಚಿರಪರಿಚಿತವಾಗಿವೆ. ಅದರಲ್ಲಿಯೂ ಗೂಗಲ್, ಫೇಸ್ಬುಕ್, ವಾಟ್ಸಾಪ್, ಟ್ವಿಟರ್, ಲಿಂಕ್ಡಿನ್, ಇನ್ಸ್ಟಾಗ್ರಾಮ್, ಯೂಟ್ಯೂಬ್‌ಗಳು ಜನರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿವೆ. ಸಾಮಾಜಿಕ ಜಾಲತಾಣಗಳು ತುಂಬಾ ಪ್ರಯೋಜನಕಾರಿ. ಸಾಮಾಜಿಕ ಜಾಲತಾಣಗಳ ಬಳಕೆಯಿಂದ ಅತ್ಯಂತ ವಿಶಾಲವಾದ ಪ್ರಪಂಚವು ಇಂದು ಕಿರಿದಾಗಿ ತೋರುತ್ತದೆ. ಅಂಗೈನಲ್ಲೇ ಬಹುತೇಕ ವಿಷಯಗಳನ್ನು ಅರಿಯುವ, ಅರಿತು ಬೆಳೆಯುವ, ಕಲಿತು ಕಲಿಸುವ ಅವಕಾಶ. ಹೊಸ ಹೊಸ ಸಂವಹನ ಆಧಾರಿತ ಜಾಲತಾಣಗಳ ಬಳಕೆಯಿಂದ ಬಹಳ ದೂರವಿರುವವರೂ ಸಹ ಹತ್ತಿರವೇ ಇದ್ದಂತೆ ಭಾಸವಾಗುತ್ತದೆ. ಜನರು ತಮ್ಮ ಪ್ರೀತಿಪಾತ್ರರನ್ನು ಸಂಪರ್ಕಿಸಲು ಸಾಮಾಜಿಕ ಜಾಲತಾಣಗಳು ಉತ್ತಮ ವೇದಿಕೆಯಾಗಿದೆ. ಇದು ಸಂವಹನವನ್ನು ಹೆಚ್ಚಿಸಲು ಮತ್ತು ಪ್ರಪಂಚದಾದ್ಯಂತದ ಜನರೊಂದಿಗೆ ಸಂಪರ್ಕವನ್ನು ಮಾಡಲು ಸಹಾಯ ಮಾಡುತ್ತದೆ. ಸಾಮಾಜಿಕ ತಾಣಗಳು ಪ್ರಪಂಚದಾದ್ಯಂತ ಜನರು ಹೆಚ್ಚು ತೊಂದರೆಯಿಲ್ಲದೆ ಕ್ಷಣಾರ್ಧದಲ್ಲಿ ಪರಸ್ಪರ ಸಂಪರ್ಕ ಸಾಧಿಸಲು ಅನುಕೂಲಕರವಾಗಿವೆ. ಪ್ರತಿಭಾ ಪ್ರದರ್ಶನಕ್ಕೆ, ವ್ಯಾಪಾರ ವಿಸ್ತರಣೆಗೆ, ಮನರಂಜನೆಗೆ, ಬೌದ್ಧಿಕ ಮಟ್ಟವನ್ನು ಹೆಚ್ಚಿಸಿಕೊಂಡು ಸಮಾಜದ ಆಗುಹೋಗುಗಳಿಗೆ ಹೆಚ್ಚು ಹೆಚ್ಚಾಗಿ ಸ್ಪಂದಿಸಿ ಸಮಾಜದ ಬೆಳವಣಿಗೆಯಲ್ಲಿ ಭಾಗವಹಿಸಲು, ತಮ್ಮನ್ನು ತಾವು ತೊಡಗಿಸಿಕೊಳ್ಳಲು ಸಹಾಯವಾಗುತ್ತವೆ. ಸಾಮಾಜಿಕ ಸಂಬಂಧಗಳನ್ನು ಗಟ್ಟಿಗೊಳಿಸುತ್ತವೆ. ಒಂದೇ ಅಭಿರುಚಿಯುಳ್ಳ ಆಸಕ್ತ ಜನರನ್ನು ಒಗ್ಗೂಡಿಸಲು ನೆರವಾಗುತ್ತವೆ.

ಅಂತರ್ಜಾಲದ ದರವು ಜನಸಾಮಾನ್ಯರ ಕೈಗೆಟುಕುವಷ್ಟು ಅಗ್ಗವಾದ ನಂತರ ಸಾಮಾಜಿಕ ಜಾಲತಾಣಗಳ ಬಳಕೆ ಅಂತರಿಕ್ಷಕ್ಕೆ ಜಿಗಿದಿದೆ. ಕರೊನಾ ಮಹಾಮಾರಿ ವಿಶ್ವವನ್ನೇ ಅಲುಗಾಡಿಸಿದಾಗ ಸಾಮಾಜಿಕ ಜಾಲತಾಣಗಳು ಬಹಳಷ್ಟು ಉಪಕಾರ ಮಾಡಿವೆ. ಬೇಸರ ನೀಗುವ ಸಂಗಾತಿಯಾಗಿ, ಮಾರ್ಗದರ್ಶಕನಾಗಿ, ಗುರುವಾಗಿ, ಹಿತೈಷಿಯಾಗಿ, ಅನೇಕ ಪಾತ್ರಗಳ ನಿರ್ವಹಣೆ ಮಾಡಿವೆ.

ದೇಶದ ಪ್ರಗತಿಪಥದಲ್ಲಿ, ಅಭಿವೃದ್ಧಿಯಲ್ಲಿ, ಆರ್ಥಿಕತೆಯಲ್ಲಿ ಸಾಮಾಜಿಕ ಜಾಲತಾಣಗಳು ಮಹತ್ವದ ಪಾತ್ರ ವಹಿಸಿವೆ. ಹಲವಾರು ಪ್ರಮುಖ ಜಾಲತಾಣಗಳ ಸಂಸ್ಥೆಗಳಲ್ಲಿ ಭಾರತೀಯ ಸಂಜಾತ ಅಭಿಯಂತರರು ಅತ್ಯುನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಭಾರತೀಯರ ಬೌದ್ಧಿಕ ಸಾಮರ್ಥ್ಯವನ್ನು ಇಡೀ ವಿಶ್ವಕ್ಕೇ ಪರಿಚಯಿಸಿ ಭಾರತಮಾತೆಯ ಮುಕುಟ ಮಣಿಗಳಾಗಿದ್ದಾರೆ. ಆತ್ಮನಿರ್ಭರ ಭಾರತದ ಕನಸು ನನಸಾಗುವ ಕಾಲ ಸನ್ನಿಹಿತವಾಗಿದೆ.

'ಅತಿಯಾದರೆ ಅಮೃತವೂ ಸಹ ವಿಷ' ಎಂಬಂತೆ ಹಿತಮಿತವಾದ ಬಳಕೆಯು ಸೂಕ್ತ.

ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವ ವಿಷಯಗಳನ್ನು ಪರಿಚಿತರು, ಅಪರಿಚಿತರು ಎಲ್ಲರೂ ವೀಕ್ಷಿಸುವ ಸಾಧ್ಯತೆ ಇದೆ. ವಿಷಯವೂ ಸಹ ಕ್ಷಣಮಾತ್ರದಲ್ಲಿ ಒಂದೆಡೆಯಿಂದ ಇನ್ನೊಂದೆಡೆಗೆ ರವಾನೆಯಾಗುತ್ತದೆ. ಆದ್ದರಿಂದ ಸಾಮಾಜಿಕ ಜಾಲತಾಣಗಳಲ್ಲಿ ವಿಷಯ ಹಂಚಿಕೊಳ್ಳುವ ಮೊದಲು ಬಹಳ ಮುನ್ನೆಚ್ಚರಿಕೆ ವಹಿಸಬೇಕು. ಬಹಳ ಸಲ ಪರಿಶೀಲನೆ ನಡೆಸಿ ನಂತರ ರವಾನಿಸಬೇಕು.

ಮುಂದಿನ ದಿನಗಳಲ್ಲಿ 'ನಹಿ ಜ್ಞಾನೇನ ಸದೃಶಂ' ಜೊತೆಗೆ 'ನಹಿ ಜಾಲತಾಣೇನ ಸದೃಶಂ' ಎಂದು ಸೇರಿದರೆ ಅಚ್ಚರಿಯಿಲ್ಲ.

'ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ' ಜೊತೆ ಜೊತೆಗೆ 'ಅಜ್ಞಾನ ತಿಮಿರಾಂಧಸ್ಯ ಜಾಲತಾಣ ಶಲಾಕಯಾ' ಕೂಡ ಸೇರಬಹುದು.

ಜನಸಾಮಾನ್ಯರಿಗೆ ಮೂಡಿಸುವುದು ಅಚ್ಚರಿ
ಜಾಲತಾಣಗಳ ಬಾಹುಳ್ಯ ಕಾರ್ಯ ವೈಖರಿ
ಜೀವನಾಡಿಯಂತೆ ಕೆಲಸ ಮಾಡುವ ಪರಿ
ಅನುಪಮ ಕಾರ್ಯಗಳಿಗೆ ವೈಶಿಷ್ಟ್ಯದ ರಹದಾರಿ

'ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ' ಎನ್ನುವಂತೆ ಇಂದಿನ ಪೀಳಿಗೆ ತಮ್ಮ ಪ್ರತಿಯೊಂದು ಹಂತದಲ್ಲೂ, ಉದಾಹರಣೆಗೆ ಓದಿ ಬರೆಯುವಾಗ ಅನುಮಾನ ಪರಿಹರಿಸಿಕೊಳ್ಳಲು, ಹೆಚ್ಚು ವಿಷಯ ತಿಳಿದುಕೊಳ್ಳಲು, ಮನರಂಜನೆಗೆಂದು ಆಟವಾಡಲು, ತಮ್ಮ ಸಂತೋಷ ಸಂಭ್ರಮ ಹಂಚಿಕೊಳ್ಳಲು, ಪ್ರತಿಭೆ ಪ್ರದರ್ಶಿಸಲು, ಜಾಹೀರಾತು ನೀಡಲು, ವ್ಯಾಪಾರ ವ್ಯವಹಾರ ಹೆಚ್ಚಿಸಿಕೊಳ್ಳಲು, ಇನ್ನೂ ಹತ್ತು ಹಲವು, ಎಲ್ಲದಕ್ಕೂ ಸಾಮಾಜಿಕ ಜಾಲತಾಣಗಳ ಮೊರೆ ಹೋಗುತ್ತಾರೆ. ಸಾಮಾಜಿಕ ಜಾಲತಾಣಗಳು ಸಾಂಸ್ಕೃತಿಕ, ಸಾಹಿತ್ಯಕ, ಸಾಮಾಜಿಕ ಬದಲಾವಣೆ, ಬೆಳವಣಿಗೆಗೆ ಪೂರಕ. ಆರೋಗ್ಯಕರ ಜೀವನಶೈಲಿಗೆ, ಮನೋಲ್ಲಾಸಕ್ಕೆ, ಸಾಮಾಜಿಕ ಸ್ವಾಸ್ಥ್ಯಕ್ಕೆ ನೀಡುತ್ತಿರುವ ಕೊಡುಗೆ ಅಪಾರ, ಅನನ್ಯ.

ನಮಗಿಷ್ಟವಾದ ಹವ್ಯಾಸದಲ್ಲಿ ತೊಡಗಿಸಿಕೊಂಡು ಕ್ಷಣಮಾತ್ರದಲ್ಲಿ ಅನುಮಾನ ಪರಿಹರಿಸಿಕೊಳ್ಳುವ ಸದವಕಾಶ ಈ ಸಾಮಾಜಿಕ ಜಾಲತಾಣಗಳಿಂದ ದೊರೆಯುತ್ತದೆ. ಆಸಕ್ತರು ಪರಿಣತರ ಸಹಾಯಪಡೆದು ಮತ್ತಷ್ಟು ಪರಿಣತಿ ಹೊಂದಲು ಸಮೂಹ ಮಾಧ್ಯಮಗಳು ಬಹಳ ಉಪಯುಕ್ತ. ಇಂದು ನಾವೆಲ್ಲ ಒಂದೆಡೆ ಸೇರಿ ಕನ್ನಡ ಸಾಹಿತ್ಯ ಸೇವೆಯಲ್ಲಿ ತೊಡಗಿಸಿಕೊಂಡಿರುವುದೂ ಸಹ ಸಾಮಾಜಿಕ ಜಾಲತಾಣದ ಕೃಪಾಕಟಾಕ್ಷದಿಂದ. ಸುದೀರ್ಘ ಪ್ರಯಾಣದಲ್ಲಿ ಇಷ್ಟವಾದ ಸಂಗತಿಗಳನ್ನು ಅರಿಯಲು, ಸಂಗೀತ, ಸಾಹಿತ್ಯ ವಿಷಯಗಳನ್ನು ಆನಂದಿಸಲು, ದೀರ್ಘ ಪ್ರಯಾಣವನ್ನು ಹ್ರಸ್ವವಾಗಿಸಲು, ಸಹಪ್ರಯಾಣಿಕರಿಗೆ ಬೇಸರವಾಗದಂತೆ ಪ್ರಯಾಣವನ್ನು ಹಿತಕರವಾಗಿಸಲು – ಹೀಗೆಯೇ ಪಟ್ಟಿಯನ್ನು ಹನುಮಂತನ ಬಾಲದಂತೆ ಬೆಳೆಸುತ್ತಲೇ ಇರಬಹುದು – ಒಟ್ಟಿನಲ್ಲಿ ಸಮಯದ ಸದುಪಯೋಗ ಮಾಡಲು ಸಾಮಾಜಿಕ ಜಾಲತಾಣಗಳು ಸಹಾಯಕಾರಿ.

ಸಾಮಾಜಿಕ ಜಾಲತಾಣಗಳು ಹರಿತವಾದ ಆಯುಧ ಇದ್ದ ಹಾಗೆ. ಹರಿತ ಆಯುಧವನ್ನು ಮಕ್ಕಳ ಕೈಗೆ ಕೊಡುವುದು ಅಪಾಯಕಾರಿ ಎನ್ನುವುದನ್ನು ಎಲ್ಲರೂ ಬಲ್ಲರು. ಸಾಕಷ್ಟು ಬೆಳೆದು ತಿಳವಳಿಕೆ ಹೊಂದಿನ ನಂತರ ಸರಿಯಾಗಿ ಬಳಸುವುದನ್ನು ತಿಳಿಸಿಕೊಡಬೇಕು. ಒಂದು ವಸ್ತುವಿನ ಉಪಯೋಗ ಆಯಾ ವ್ಯಕ್ತಿಗಳಿಗೆ ಸಂಬಂಧಪಟ್ಟಿದ್ದು. ಉದಾಹರಣೆಗೆ ಸಣ್ಣ ಚಾಕುವನ್ನೇ ತೆಗೆದುಕೊಳ್ಳಿ. ಚಾಕು ಹರಿತವಾಗಿದೆ, ಕೈಬೆರಳು ಕತ್ತರಿಸಿಹೋಗಬಹುದು ಎಂದು ಹೆದರಿ ಉಪಯೋಗಿಸದೆ ಇರಲಾಗದು. ಜನಸಾಮಾನ್ಯರು ಈ ಆಯುಧವನ್ನು ಸ್ವಲ್ಪ ಎಚ್ಚರಿಕೆಯಿಂದ ಹಣ್ಣು, ತರಕಾರಿಗಳನ್ನು ಕತ್ತರಿಸಲು ಬಳಸುತ್ತಾರೆ. ಆದರೆ ದುಷ್ಟರು ಅದೇ ಚಾಕುವನ್ನು ಉಪಯೋಗಿಸಿ ಕೋಪ ಬಂದಾಗ ಎದುರಿಗೆ ಇರುವವರನ್ನು ಇರಿಯಲೂಬಹುದು. ಚಾಕು ಒಂದು ನಿರ್ಜೀವ ವಸ್ತುವಾದರೂ ಅದಕ್ಕೆ ಒಬ್ಬರ ಜೀವನದ ದಿಕ್ಕನ್ನೇ ಬದಲಾಯಿಸಬಲ್ಲ ಶಕ್ತಿ ಇದೆ. ಮತ್ತೊಬ್ಬರ ಪ್ರಾಣವನ್ನೇ ತೆಗೆಯಬಹುದು. ಹಾಗೆಯೇ ಒಳಿತು ಕೆಡುಕುಗಳನ್ನು ಅರಿತು ಹಿತಮಿತವಾಗಿ ಜಾಲತಾಣಗಳನ್ನು ಬಳಸುವುದು ಸೂಕ್ತ.

***

ಮುಕ್ತಕ ಚತುಷ್ಟಯ

ಸಾಮಾಜಿಕ ಜಾಲತಾಣಗಳು

– ಪೂರ್ಣಿಮ ಭಗವಾನ್

ಸರಿಯಾಗಿ ಬಳಸಿದರೆ ಹಲವಾರು ಉಪಯೋಗ
ಕಿರಿಕಿರಿಯ ಮನಗಳಲಿ ಭರವಸೆಯ ಬೆಳಕು
ಹಿರಿಕಿರಿಯ ಭೇದ ತೋರದ ಜಾಲತಾಣಗಳು
ಅರಿವಿನಾ ಕಿರಣಗಳು ನೇತ್ರತನಯೆ.

ಯಾಂತ್ರಿಕತೆ ಬೆರೆತಿರುವ ಬೆಂಡಾದ ಬದುಕಿನಲಿ
ತಾಂತ್ರಿಕತೆ ಜಾಲತಾಣದ ನೆರವು ಬಹಳ
ಮಾಂತ್ರಿಕತೆ ಸೂಸುತಿಹ ಚೈತನ್ಯ ಬಲವದುವೆ
ಸಾಂತ್ವನವ ನೀಡುವುದು ನೇತ್ರತನಯೆ.

ಕಂಬನಿಯ ತೊಡೆಯುತ್ತ ಬೆಂಬಲವ ನೀಡುತಲಿ
ನಂಬಿಕೆಯ ಜೊತೆಯಲ್ಲಿ ವಿಶ್ವಾಸ ಬೆಳೆಸಿ
ತುಂಬುವುದು ಧೈರ್ಯವನು ಜಾಲತಾಣದ ಬಳಕೆ
ಅಂಬಿಗನು ನೆರವಿನಲಿ ನೇತ್ರತನಯೆ.

ಬಲವಾದ ಆಯುಧವು ಜಾಲತಾಣದ ಬಳಕೆ
ಕಲಿಯಲಿಕೆ ಸಹಕಾರಿ ಬಹಳಷ್ಟು ವಿಷಯ
ಹಲವಷ್ಟು ತಿಳಿಯುತಲಿ ಶಕ್ತಿಯುತ ಸಂವಹನ
ಕೆಲವಾರು ಬಿಡಬೇಕು ನೇತ್ರತನಯೆ.

***

ಕಾವ್ಯದೋಷ

– ಗಣಪತಿ ಹೆಗಡೆ

ಸಾಹಿತ್ಯದ ಕುರಿತಾಗಿ ಎಷ್ಟೋ ವಿವರಣೆಗಳನ್ನು ಲಾಕ್ಷಣಿಕರು ತಿಳಿಸಿದ್ದಾರೆ. ತಿಳಿಸುತ್ತಲೇ ಇದ್ದಾರೆ. ಕಾಲ ಹಾಗೂ ವ್ಯಕ್ತಿಗಳಿಗೆ ಅನುಗುಣವಾಗಿ ಕಾವ್ಯದ ವ್ಯಾಖ್ಯಾನ ಬದಲಾಗುತ್ತಲೇ ಇರುತ್ತದೆ.

ಆದರೆ 'ವಾಕ್ಯಂ ರಸಾತ್ಮಕಂ ಕಾವ್ಯಂ' ಇದು ಕಾವ್ಯದ ಕುರಿತಾಗಿ ಸಾಮಾನ್ಯ ಜನರೂ ಒಪ್ಪಿಕೊಂಡಂತಹ ವಾಕ್ಯ. ಕಾವ್ಯದ ಉದ್ದೇಶವೇ ರಸೋತ್ಪತ್ತಿ. ನಾಟಕ ಮೊದಲಾದ ದೃಶ್ಯಕಾವ್ಯವಾಗಿರಲಿ, ಲೇಖನ–ಬರಹಗಳಾದ ಶ್ರಾವ್ಯ ಕಾವ್ಯವಾಗಿರಲಿ, (ಓದುವ ಬರಹಗಳನ್ನು ಶ್ರಾವ್ಯ ಅಂತಲೇ ಗುರುತಿಸುತ್ತಾರೆ) ಕಾವ್ಯದ ಪರಮೋದ್ದೇಶ ರಸಾಸ್ವಾದನೆ.

ಮರ ಬೆಳೆಯುತ್ತದೆ, ನದಿ ಹರಿಯುತ್ತದೆ, ಬಿಸಿಲು ಒಣಗಿಸುತ್ತದೆ, ಮಗು ಅಳುತ್ತದೆ – ಇವೆಲ್ಲ ಕೇವಲ ಹೇಳಿಕೆಗಳು. 'ಶಬ್ದಾರ್ಥೌ ಸಹಿತೌ ಕಾವ್ಯಂ' ಎನ್ನುವದು ಕಾವ್ಯದ ಕುರಿತಾದ ಸ್ಥೂಲ ವಿವರಣೆ, ಅಷ್ಟೇ. ಅರ್ಥಪೂರ್ಣವಾದ ಅಕ್ಷರ ಸಮೂಹವನ್ನು ಶಬ್ದವೆಂತಲೂ, ಅರ್ಥಪೂರ್ಣವಾದ ಶಬ್ದ ಸಮೂಹವನ್ನು ವಾಕ್ಯವೆಂತಲೂ, ರಚನಾತ್ಮಕವಾಗಿ ಜೋಡಿಸಿದ ವಾಕ್ಯಗಳನ್ನು 'ಪ್ಯಾರಾ' ಎಂತಲೂ ತಿಳಿಯುತ್ತಾರೆ. ಪ್ರವಾಸ ಸಾಹಿತ್ಯ, ಜೀವನ ಚರಿತ್ರೆ ಮುಂತಾದ ಸರಳ ನಿರೂಪಣೆಗಳನ್ನು ಕಾವ್ಯ ಅಥವಾ ಸಾಹಿತ್ಯದ ಪೂರ್ಣಾರ್ಥದಲ್ಲಿ ಲಾಕ್ಷಣಿಕರು ಒಪ್ಪಿಕೊಳ್ಳುವದಿಲ್ಲ.

'ಸಹಿತಸ್ಯ ಭಾವಃ ಸಾಹಿತ್ಯಮ್'. (ಸಹಿತವೆಂದರೆ ಹಿತದಿಂದ ಕೂಡಿರುವುದು. ಸ–ಹಿತ.) ಮಾತಿಗೆ ಸಿಂಗಾರವನ್ನು ಮಾಡಿ ಬಳಸಿದರೆ ಅದೇ ಸಾಹಿತ್ಯವಾಗುತ್ತದೆ. ಕಾವ್ಯವು ಮನಸ್ಸಿಗೂ, ಬುದ್ಧಿಗೂ ಹಿತವನ್ನು ಉಂಟು ಮಾಡಬೇಕು. ಹಿತ ಅಂದರೆ ಸಂತೋಷ, ಆನಂದ. ಕಾವ್ಯಾನಂದವೆಂದರೆ ಬ್ರಹ್ಮಾನಂದಕ್ಕೆ ಸರಿ ಎನ್ನುವವರೂ ಇದ್ದಾರೆ.

ಆದರೆ ಕಾವ್ಯ ಅಂದರೆ ಇದೇ ಅಂತ ನಿಶ್ಚಯಾತ್ಮಕವಾಗಿ, ವೈಜ್ಞಾನಿಕವಾಗಿ ಸಿದ್ಧವಾಗಿ ಹೇಳಿದ ಹಾಗೆ, ಯಾವ ಲಾಕ್ಷಣಿಕರೂ ಹೇಳಿದವರಿಲ್ಲ. ಅವರವರ ಅನಿಸಿಕೆಗಳಿಗೆ ಸರಿತೂಗಿಸಿಕೊಂಡು ಕಾವ್ಯ ಅಥವಾ ಸಾಹಿತ್ಯದ ಕುರಿತು ವ್ಯಾಖ್ಯಾನವನ್ನು ಮಾಡಿದ್ದಾರೆ, ಅಷ್ಟೇ.

ಏನಿದ್ದರೂ ಕಾವ್ಯ, ಶ್ರಾವ್ಯವಾಗಿರಲಿ ಅಥವಾ ದೃಶ್ಯವಾಗಿರಲಿ, ಓದುಗರ ಅಥವಾ ನೋಡುಗರ ಮನಸ್ಸಿಗೆ ಹಿತವನ್ನು ಉಂಟುಮಾಡಬೇಕು. ಆದರೆ ಗುಣ ಹಾಗೂ ಅಲಂಕಾರಗಳ ಪ್ರಯೋಗದಿಂದಾಗಿ ಕಾವ್ಯದ ಪ್ರಯೋಜನ ಹೆಚ್ಚಾಗುತ್ತದೆ. ('ಕಾವ್ಯ ಶೋಭಾಯಃ ಕರ್ತಾರೋ ಧರ್ಮಃ ಗುಣಃ ತದತಿಶಯಹೇತವಸ್ತ್ವಲಂಕಾರಃ')

ಇದು ಕಾವ್ಯದ ಕುರಿತಾದ ಧನಾತ್ಮಕವಾದ ತಿಳುವಳಿಕೆ.

ಮಮ್ಮಟನು ಕಾವ್ಯದ ಗುಣವನ್ನು ಹೇಳುವಾಗ 'ತದದೋಷೌ ಶಬ್ದಾರ್ಥೌ ಸಗುಣಾವಲಂಕೃತೀ ಪುನಃ ಕ್ವಾಪಿ' (ಅದು, ಅಂದರೆ ಕಾವ್ಯವು, ದೋಷವಿಲ್ಲದ ಗುಣಸಹಿತವಾದ ಶಬ್ದಾರ್ಥಗಳಾಗಿರುತ್ತದೆ. ಇವುಗಳಲ್ಲಿ ಕ್ವಚಿತ್ತಾಗಿ ಅಲಂಕಾರವಿಲ್ಲದಿರುವದೂ ಉಂಟು) ಅಂತ ಹೇಳಿ ಗುಣ, ಅಲಂಕಾರಗಳನ್ನು ಹೊಂದುವದರ ಜೊತೆಗೆ, ಕಾವ್ಯದಲ್ಲಿ ಬಳಸಬೇಕಾದ ಶಬ್ದಗಳ ಕುರಿತಾಗಿ ಕೆಲವು ನಿಬಂಧನೆಗಳನ್ನೂ ಸೂಚಿಸಿದ್ದಾನೆ. ಇದೇ 'ಅದೋಷ'.

ಕಾವ್ಯದಲ್ಲಿ ಪ್ರಯೋಗಿಸಬೇಕಾದ ಶಬ್ದಗಳು ಹಾಗೂ ಸಂಬಂಧಿಸಿದ ಅರ್ಥಗಳು 'ದೋಷಪೂರಿತವಾಗಿರಬಾರದು' ಎನ್ನುವದೂ ಲಾಕ್ಷಣಿಕರ ಅಭಿಪ್ರಾಯ. ಇಂತಹ ದೋಷಗಳನ್ನು ಬೇರೆ ಬೇರೆ ಲಾಕ್ಷಣಿಕರು ಬೇರೆ ಬೇರೆ ಬಗೆಯಿಂದ ಗುರುತಿಸಿದ್ದಾರೆ.

'ಅಪಾರ್ಥಂ ವ್ಯರ್ಥಮೇಕಾರ್ಥಂ ಸಸಂಶಯಮಪಕ್ರಮಂ
ಶಬ್ದಹೀನಂ ಯತಿಭ್ರಷ್ಟಂ ಭಿನ್ನವೃತ್ತಂ ವಿಸಂಧಿಕಂ
ದೇಶಕಾಲಕಲಾಲೋಕ ನ್ಯಾಯಾಗಮ ವಿರೋಧಿ ಚ
ಇತಿ ದೋಷಾ ದಶೈವೇತೇ ವರ್ಜ್ಯಾಃ ಕಾವ್ಯೇಷು ಸೂರಿಭಿಃ'

ಹೀಗೆ ಹತ್ತು ವಿಧದ ಕಾವ್ಯದೋಷಗಳನ್ನು ದಂಡಿ ಹೇಳಿದ್ದಾನೆ.

ಗುಣಾಲಂಕಾರಗಳ ದೋಷಗಳು ಶಬ್ದಾರ್ಥಗಳ ದೋಷದಲ್ಲಿಯೇ ಅಂತರ್ಗತವಾದುದರಿಂದ 'ಶಬ್ದ ಹಾಗೂ ಅರ್ಥ' ಪ್ರಯೋಗದಲ್ಲಿಯ ದೋಷವೇ ಗಣ್ಯವೆನ್ನುತ್ತಾರೆ.

'ಕಾವ್ಯರಮಣೀಯತೆಗೆ ಕುಂದನ್ನು ಅಥವಾ ಹಾನಿಯನ್ನು ತರತಕ್ಕದ್ದೇ ದೋಷ.' ಅಂತ ಕಾವ್ಯದಲ್ಲಿಯ ದೋಷವನ್ನು ಸ್ಥೂಲವಾಗಿ ಗುರುತಿಸಬಹುದು.

ಕಾವ್ಯದೋಷಗಳ ಸಮೀಕ್ಷೆ ಸಂಸ್ಕೃತದ ಅಲಂಕಾರ ಶಾಸ್ತ್ರದ ಪ್ರಧಾನ ವಿಷಯಗಳಲ್ಲಿ ಒಂದಾಗಿದೆ. ಭರತನಿಂದ ಭೋಜ, ವಿಶ್ವನಾಥರವರೆಗೆ, ಪ್ರಾಯಃ ಪ್ರತಿಯೊಬ್ಬ ಲೇಖಕನೂ ಇದಕ್ಕಾಗಿ ತನ್ನ ಗ್ರಂಥದ ಒಂದೋ ಎರಡೋ ಅಧ್ಯಾಯಗಳನ್ನು ಮೀಸಲಾಗಿಟ್ಟಿರುವುದು ಕಂಡುಬರುತ್ತದೆ. 'ಸರ್ವಥಾಪದಮಪ್ಯೇಕಂ ನ ನಿಗಾದ್ಯಮವದ್ಯವತ್' (ಹೇಗೂ ದೋಷಯುಕ್ತವಾದ ಒಂದು ಪದವನ್ನೂ ಪ್ರಯೋಗಿಸಬಾರದು) ಎಂಬುದು ಅಲಂಕಾರಿಕರಲ್ಲಿ ಅತಿ ಪ್ರಾಚೀನನೆನಿಸಿರುವ ಭಾಮಹನ ಮತ. ಇದೇ ಅಂಶವನ್ನು 'ತದಲ್ಪಮಪಿನೋಪೇಕ್ಷ್ಯಂ ಕಾವ್ಯೇ ದುಷ್ಟಂ ಕಥಂಚನ' (ಕಾವ್ಯದಲ್ಲಿ ಅತ್ಯಲ್ಪವಾದ ದೋಷವನ್ನೂ ಉಪೇಕ್ಷ ಮಾಡಬಾರದು) ಎಂದು ದಂಡಿಯೂ ಹೇಳಿದ್ದಾನೆ. 'ಒಮ್ಮೆ ಕವಿಯಾಗದಿದ್ದಲ್ಲಿ ಅಧರ್ಮವಾಗಲೀ, ವ್ಯಾಧಿ, ದಂಡನೆಗಳಾಗಲೀ ಸಲ್ಲುವುದಿಲ್ಲ. ಆದರೆ ಕುಕವಿತ್ವವೆಂಬುದಿದೆಯಲ್ಲ, ಇದು ಸಾವಿಗೇ ಸಮನಾದದ್ದು' ಎಂದು ಹೇಳಿ ಭಾಮಹ ದೋಷಯುಕ್ತವಾದ ಕಾವ್ಯಗಳನ್ನು ರಚಿಸುವ ಕುಕವಿಗಳ ನಿಂದೆಯನ್ನು ಮಾಡಿದ್ದಾನೆ. ಇದಲ್ಲದೆ ಕಾವ್ಯವೆಂಬುದು ರಸಗರ್ಭಿತವಾಗಿದ್ದರೂ ಸಹ, ಅಸುಂದರವಾಗಿದ್ದು ಸುಲಭವಾಗಿ ಅರ್ಥವಾಗದಿದ್ದರೆ ಎಳೆಯ ಚೀಲದ ಕಾಯಂತೆ ಹಿತಕರವಲ್ಲವೆಂದೂ ಹೇಳಿದ್ದಾನೆ. ಈಚಿನ ಕೆಲವು ವಿಮರ್ಶಕರೂ ಕಾವ್ಯದಲ್ಲಿ ದೋಷಗಳ ಅಭಾವಕ್ಕೆ ಇದೇ ರೀತಿಯ ಪ್ರಾಶಸ್ತ್ಯವನ್ನು ಕೊಟ್ಟು ಈ ಅಂಶವನ್ನು ಕಾವ್ಯಲಕ್ಷಣದ ಮೊದಲಲ್ಲೇ ಸೇರಿಸಿರುವುದೂ ಉಂಟು. 'ತದದೋಷೌ ಶಬ್ದಾರ್ಥೌ'-ಇತ್ಯಾದಿಯಾದ ಮಮ್ಮಟನ ಕಾವ್ಯಲಕ್ಷಣವನ್ನು ಇಲ್ಲಿ ಗಮನಿಸಬಹುದು. ಹೀಗೆ ಕಾವ್ಯದೋಷಗಳ ಸಮೀಕ್ಷೆಗೆ ಮೊದಲಿನಿಂದಲೂ ವಿಶೇಷವಾದ ಪ್ರಾಶಸ್ತ್ಯ ದೊರಕಿದೆ.

ಗುಣವಿಪರ್ಯಯಾತ್ಮಾನೋ ದೋಷಃ (ದೋಷಗಳು ಗುಣಗಳಿಗೆ ವಿರುದ್ಧವಾದವು) ಎಂಬುದಾಗಿ ಮೊಟ್ಟಮೊದಲಿಗೆ ನಿರೂಪಿಸಿರುವುದೂ ಇದೇ ಕಾರಣಕ್ಕಾಗಿ.

ಈಗ ಸಾಮಾನ್ಯವಾಗಿ ಪ್ರಯೋಗಿಸಿರಬಹುದಾದ ಕಾವ್ಯ ದೋಷದ ಕುರಿತಾಗಿ ತಿಳಿಯೋಣ.

ಶ್ರುತಿಕಟು– ಪರುಷಾಕ್ಷರಗಳಿಂದ ಕೂಡಿ ಅಶ್ರಾವ್ಯವಾಗಿರುವದು. ವರ್ಗೀಯ ವ್ಯಂಜನಗಳ ಮೊದಲಿನ ಎರಡು ಅಕ್ಷರಗಳು ಹಾಗೂ ಶ, ಷ, ಸ, ಳ ಇವು ಕರ್ಕಶ ವರ್ಣಗಳು. ಈ ವರ್ಣಗಳ ಬಳಕೆಯಿಂದಾಗಿ ಕಾವ್ಯ ಕೇಳಲು ಹಿತವಾಗುವದಿಲ್ಲ. (ಕೇಳಲು ಕಟುವಾಗಿರುತ್ತದೆ). (ತಮಿಳನಲ್ಲಿ ಈ ಕರ್ಕಶ ವರ್ಣಗಳ ಜೊತೆ ಮೃದುವ್ಯಂಜನಗಳ ಮಹಾಪ್ರಾಣಗಳನ್ನೂ ಬಳಸುವದಿಲ್ಲ ಎನ್ನುತ್ತಾರೆ.)

ಚ್ಯುತಸಂಸ್ಕಾರ– ವ್ಯಾಕರಣಕ್ಕೆ ವಿರುದ್ಧವಾಗಿ ಶಬ್ದವನ್ನು ಬಳಸಬಾರದು. 'ರಾಮನು ಬಂದಳು' ಎನ್ನುವಲ್ಲಿ ಓದುಗ ರಾಮನ ಬರುವಿಕೆಯನ್ನು ತಿಳಿದರೂ ವಾಕ್ಯಪ್ರಯೋಗವು 'ಅವ್ಯಾಕರಣನಿಮಿತ್ತ' ಕೇಳಲು ಹಿತವೆನಿಸುವದಿಲ್ಲ.

ಅಪ್ರಯುಕ್ತ– ವ್ಯಾಕರಣಕ್ಕೆ ಒಪ್ಪಿಗೆಯಾದರೂ ಪ್ರಯೋಗದಲ್ಲಿ ಇರದೇ ಇರುವದು. ಸಂಖ್ಯೆ ಎನ್ನುವ ಶಬ್ದಕ್ಕೆ ಯುದ್ಧ ಎನ್ನುವ ಅರ್ಥವಿದ್ದರೂ ಅಂಕೆ–ಸಂಖ್ಯೆಗಳು ಎನ್ನುವ ಅರ್ಥದಲ್ಲಿಯೇ ಹೆಚ್ಚು ಪ್ರಯೋಗವಾಗುತ್ತದೆ.

ನಿಹತಾರ್ಥ– ಪ್ರಸಿದ್ಧವಾದ ಅರ್ಥವನ್ನು ಬಿಟ್ಟು ಬೇರೆ ಅರ್ಥದಲ್ಲಿ ಉಪಯೋಗಿಸುವುದು. ನಾಗ ಅಂದರೆ ಆನೆ ಅಂತಲೂ ಅರ್ಥವಿದೆ. ಆದರೆ ನಾಗ ಪದದ ಬಳಕೆ ಸರ್ಪವನ್ನು ಕುರಿತೇ ಅಂತ ಸಾಮಾನ್ಯ ತಿಳುವಳಿಕೆ.

ಅನುಚಿತಾರ್ಥ– ಹೇಳಬೇಕೆಂದಿರುವ ಅರ್ಥದ ಸ್ವಾರಸ್ಯವನ್ನು ಕೆಡಿಸುವದು. ಶುದ್ಧ ಎನ್ನುವ ಅರ್ಥದಲ್ಲಿ ಮಡಿ ಎನ್ನುವ ಶಬ್ದವನ್ನು ಬಳಸುವಾಗ 'ಆ ಮಡಿ ಹೆಂಗಸು' (ಅಕೇಶೀ ಮಹಿಳೆ) ಅಂತ ಬಳಸುವದು ಸರಿಯಲ್ಲ.

ನಿರರ್ಥಕ– ಪಾದಪೂರಣಕ್ಕೆ ಮಾತ್ರ ಹಾಕಿರುವುದು. ವ್ಯಾಸರ ಮೂರ್ತಿಯ ಹೊಟ್ಟೆಯನ್ನು ಮುಟ್ಟಿ ಒಮ್ಮೆ ಕಾಳಿದಾಸನು 'ಚಕಾರ ಜಠರಾಯ ನಮಃ' ಅಂತ ಹೇಳಿದ್ದನಂತೆ. ಅವಶ್ಯಕತೆಗಿಂತಲೂ ಹೆಚ್ಚಾಗಿ 'ಚ' ಕಾರವನ್ನು ಬಳಸಿದ್ದಾನೆ ಅಂತ. ಒಬ್ಬ ಕವಿ ಕೊನೆಯ ಸಾಲನ್ನು ಪೂರ್ತಿಗೊಳಿಸಲು ಸಾಧ್ಯವಾಗದೇ 'ಚವೈತುಹಿ ಚವೈತುಹಿ' ಅಂತ ಬರೆದು ಮುಗಿಸಿದ್ದಾನಂತೆ.

ಅಶ್ಲೀಲ– ಕೇಳಲು ನಾಚಿಕೆಗೊಳಿಸುವದು, ಅಸಹ್ಯವನ್ನುಂಟು ಮಾಡುವದು, ಅಮಂಗಲವನ್ನು ಹೇಳುವದು. ಅಶ್ಲೀಲವಾದ ಶಬ್ದಗಳನ್ನು ಕಾವ್ಯದಲ್ಲಿ ಹೇಳಲೇಬಾರದು ಅಂತ ಬಹಳಷ್ಟು ಜನರು ಅಭಿಪ್ರಾಯ ಪಡುತ್ತಾರೆ. ಓದುಗನಿಗೋ ಅಥವಾ ನೋಡುಗನಿಗೋ ಮುಜುಗರವಾಗಬಾರದು ಅಂತ. ಅತ್ಯಾಚಾರದಂತಹ ಸನ್ನಿವೇಶಗಳನ್ನು ಚಿತ್ರಿಸುವಾಗ ಹಕ್ಕಿಯ ಕತ್ತನ್ನು ಮುರಿದ ಹಾಗೋ ಅಥವಾ ಹಸಿಯಾದ ಮರ ಬಾಡಿದ ಹಾಗೋ ಕಾಣಿಸುವದನ್ನು ನಾವು ನೋಡುತ್ತೇವೆ.

ಸಂದಿಗ್ಧ– ಅರ್ಥ ಹಾಗೋ ಹೀಗೋ ಅಂತ ಸಂದೇಹ ಹುಟ್ಟುವದು.

ಅಪ್ರತೀತ– ಕೇವಲ ಶಾಸ್ತ್ರದಲ್ಲಿ ಬರುವದು

ಗ್ರಾಮ್ಯ– ಗಂಭೀರವಲ್ಲದ್ದು

ಕ್ಲಿಷ್ಟ– ಸುಲಭವಾಗಿ ಅರ್ಥವಾಗದಿರುವದು

ಅವಿಮೃಷ್ಟವಿಧೇಯಾಂಶ– ಹೇಳುವ ವಿಷಯದಲ್ಲಿ ಮುಖ್ಯ ಭಾಗಕ್ಕೆ ಪ್ರಾಶಸ್ತ್ಯ ಕೊಡದಿರುವದು.

ವಿರುದ್ಧಮತಿಕೃತ್– ಹೇಳಬೇಕೆಂದಿದ್ದ ಅರ್ಥಕ್ಕೆ ವಿರುದ್ಧವಾದ ಅರ್ಥವೂ ಆಗುವಂತಿರುವದು.

ಇನ್ನೂ ಅನೇಕ ರೀತಿಯ ದೋಷಗಳನ್ನು ತಿಳಿಸಿದ್ದಾರೆ ಲಾಕ್ಷಣಿಕರು. ಇದಕ್ಕೆ ಕೊನೆಯೆಂಬುದಿಲ್ಲ.

ಆದರೆ ಈ ರೀತಿಯ ದೋಷ ವಿಂಗಡಣೆ ಸರಿಯಲ್ಲ ಎಂತಲೂ ಹೇಳುವವರಿದ್ದಾರೆ. ಉದಾ: ಕರ್ಕಶ ವರ್ಣಗಳ ಬಳಕೆ ಶೃಂಗಾರದಲ್ಲಿ ವರ್ಜ್ಯ. ಆದರೆ ವೀರರಸ ಪ್ರದರ್ಶನದಲ್ಲಿ ಉಪಾದೇಯ.

ಆದರೂ ರಸಾಸ್ವಾದನೆಗೆ ಭಂಗವನ್ನುಂಟುಮಾಡುವ ಶಬ್ದ ಅಥವಾ ಅರ್ಥ ಪ್ರಯೋಗವನ್ನು 'ಕಾವ್ಯದೋಷ' ಅಂತ ನಿರುಮ್ಮಳವಾಗಿ ವ್ಯಾಖ್ಯಾನಿಸಬಹುದು.

***

ಕನಸು

– ಜಾನಕಿರಾಮ

ಕಣ್ಣೆವೆಯ ಹೊದಿಕೆಯೊಳ್ಮಲಗಿರುವ ಕನಸುಗಳೆ
ನಡುರಾತ್ರಿ ವೇದಿಕೆಯನೇರ ಬನ್ನಿ
ಭವ–ಭಾವ ಸಾಗರದ ಕಾಡು–ನಾಡಿನ ಸೊಗಡ
ಒಲವಿನಿಂದಲಿ ನಟಿಸಿ ತೋರ ಬನ್ನಿ

ಸತ್ಯ–ಮಿಥ್ಯಗಳಾಚೆ ರಂಗುರಂಗಿನ ಪರದೆ
ಕುಂಚದಲೆ ವ್ಯಾಮೋಹದಾ ರೂಪವು
ಗಗನ ಗಿರಿ ನವಿಲುಗರಿ ಹಸಿರ ಸಂತತಿ ಲೋಕ
ಎಲ್ಲೆಲ್ಲು ಸೌಂದರ್ಯದ ಧೂಪವು

ಹಾರಾಡುವ ಕುದುರೆ ಬಣ್ಣಬಣ್ಣದ ಕಾಗೆ
ಕಬ್ಬು ತಿನ್ನುವ ಹುಲಿಯ ಸೌಮ್ಯತನವು
ಮಾಯಮಾಳವಗೌಳದಾಲಾಪದಲಿ ಕತ್ತೆ
ಕಡಲ ಮೀನಿನ ಬಾಯಬಡುಕತನವು

ಚಲಿಸುವ ಹೊಂಗೆಮರ ಮುಳ್ಳಿಲ್ಲದಾ ಜಾಲಿ
ಸಿಹಿಹಣ್ಣಿನ ಬೇವು ಚಂದ್ರ ತುಲಸಿ
ನೀರ ಮೇಗಡೆ ಚಲನೆ ಹಸಿರು ಬಣ್ಣದ ಮೋಡ
ಗೂಡು ಕಟ್ಟಿಹ ಗೂಬೆ ಕೂಡಿ ನಲಿಸಿ

ಜಾಣನಾಗಿಹ ಮೂರ್ಖ ದಾನಮಾಡುವ ತಿರುಕ
ಧಾರಾಳ ಜಿಪುಣತನ ಕರುಣ ಕ್ರೂರಿ
ತೋರು ತೋರೆಲೆ ಕನಸೆ ವೈರುಧ್ಯಗಳ ಮೆರೆದು
ಸುಷುಪ್ತಿಯ ಸೀಳಿ ಸಾರಿ ಸಾರಿ

***

ಮತಾಂಧರ ಅಟ್ಟಹಾಸ

– ರೇಣುಕಾ ದೇಸಾಯಿ

ಧರ್ಮ ಧರ್ಮಗಳ ನಡುವೆ ನಡೆದಿದೆ ಯುದ್ಧ
ಧರ್ಮ ಉಳಿಸಿ ಬೆಳೆಸಲು ಹೇಯ ಕೃತ್ಯಕ್ಕೆ ಸಿದ್ಧ

ನೀಚ ಉಗ್ರರು, ಕೊಲೆಗಡುಕರು ಧರ್ಮ ಕಟ್ಟುತಿಹರು
ಅದೊಂದು ಧರ್ಮ ಹೇಗಾದೀತು ಎಂದರು ಸಂತರು

ಮತಾಂಧತೆ ಧರ್ಮಾಂಧತೆ ಮೆರೆದಿಹುದಿಲ್ಲಿ
ಬರ್ಬರ ಕೊಲೆಯಿಂದ ಹೆಣಗಳಾಗಿದ್ದಾರೆ ಜನ ಬೀದಿಯಲ್ಲಿ

ಕಣ್ಣ ಮುಂದೆ ಸಣ್ಣ ಮಕ್ಕಳ ಮಾರಣ ಹೋಮ
ಭವಿಷ್ಯದ ಕುಡಿ ಮುರುಟಿದರು ದುರುಳರು ರಾಮ ರಾಮ

ಸಾವಿನ ಸೌಧದ ಮೇಲೆ ಕಟ್ಟಿದ ಈ ಧರ್ಮ
ಅದು ಯಾರಿಗೂ ಒಳಿತನ್ನು ಬಯಸದ ಅಧರ್ಮ

ಅಳಿಯಬೇಕು ಸದಾ ಸರ್ವದಾ ಈ ನೀಚ ಜನಾಂಗ
ಭೂತಾಯಿಗೆ ಭಾರವಾಗಬೇಕೆ ಇಂತಹ ಪಾಪಿಗಳ ಸಂಘ

ತಾನುಳಿದು ಎಲ್ಲರೂ ಉಳಿಯಲಿ ಎನ್ನುವರು ಸಜ್ಜನರು
ತಾನುಳಿದು ಎಲ್ಲರೂ ಅಳಿಯಲಿ ಎನ್ನುವರು ದುರ್ಜನರು

ಅವರು ನನ್ನ ಬಂಧುಗಳು ಹೇಗೆ ಎತ್ತಲಿ ಗಾಂಡೀವ
ಅಧರ್ಮಿಗಳವರು ಮಿಡಿಯದಿರು ಮರುಗದಿರು ಜೀವ

ಅಧರ್ಮ ಅಂಧಕಾರ ಅಳಿಯಬೇಕು ಜಗದಲಿ
ಅದಕಾಗಿ ನಡೆಯಿತು ಯುದ್ಧ ಕೌರವ ಪಾಂಡವರಲಿ

ಅವರಂತೆ ಕೊಲೆಗೈಲಾರೆ ಅಮಾಯಕ ಜನರನ್ನ ಶ್ರೀ ಕೃಷ್ಣ
ಬಾರೈ ಹುಟ್ಟಿ ಬಾ ಭಗವಂತ, ತೆಗೆ ನಿನ್ನ ಶ್ರೀಚಕ್ರ ಶ್ರೀ ಕೃಷ್ಣ

***

ಮಾಡಿದ್ದುಣ್ಣೋ ಪತಿರಾಯ

– ಎಲ್. ಗಿರಿಜಾ ರಾಜ್

ಈ ಬಾರಿ ಕಿಟ್ಟಿ ಪಾರ್ಟಿಯ ಪಾಕಶಾಸ್ತ್ರ ಹೊಸ ರುಚಿ ಪ್ರಾವೀಣ್ಯತೆಯ ಸ್ಪರ್ಧೆಯಲ್ಲಿ ಬಹುಮಾನ ಗಿಟ್ಟಿಸಲೇಬೇಕು ಅಂತ ಪಾತು ಪ್ರತಿಜ್ಞೆ ಮಾಡಿಬಿಟ್ಟಿದ್ದಳು. ಅಡುಗೆಮನೆ ರಣರಂಗವಾಯಿತು. ನವೀನ ಪ್ರಯೋಗಗಳು ಶುರುವಾಯಿತು. ಆದರೆ ಪಾತು ತಾನು ಮಾಡಿದ ಹೊಸ ರುಚಿಯನ್ನು ಮೊದಲು ಸವಿ ನೋಡಲು ಹೆದರುತ್ತಿದ್ದಳು. ಗಂಡನ ಮೇಲೆ ಪ್ರಯೋಗ ಮಾಡಿ ಅದು ಚೆನ್ನಾಗಿದೆ ಎಂದು ಪತಿರಾಯ ಮೆಚ್ಚಿಕೊಂಡ ಮೇಲೆ ಧೈರ್ಯ ಮಾಡುತ್ತಿದ್ದಳು. 'ಮಾಡಿದ್ದುಣ್ಣೋ ಮಹಾರಾಯ' ಗಾದೆ ಪಾತುವಿನ ಪ್ರಕಾರ ಬದಲಾವಣೆಯಾಗಿ 'ಮಾಡಿದ್ದುಣ್ಣೋ ಪತಿರಾಯ' ಎಂದಿರಬೇಕಿತ್ತಂತೆ. ಬಹುತೇಕ ಪ್ರಯೋಗಗಳಲ್ಲಿ ಪತಿರಾಯನಿಂದ ಸಕಾರಾತ್ಮಕ ಉತ್ತರ ಬಾರದೆ ಬಲು ದುಃಖಗೊಳ್ಳುತ್ತಿದ್ದಳು. "ನೀನು ಹೀಗೆ ನನ್ನ ಮೇಲೆ ಪ್ರಯೋಗ ಮಾಡುತ್ತಿದ್ದರೆ, ನಾಲಗೆ, ರುಚಿ ನೋಡಿ ಚೆನ್ನಾಗಿದೆ ಇಲ್ಲವೇ ಎಂದು ಹೇಳುವ ಅರ್ಹತೆಯನ್ನು ಕಳೆದುಕೊಳ್ಳುವಷ್ಟು ಕುಲಗೆಟ್ಟು ಹೋಗುತ್ತಿದೆ ಮಹಾರಾಯ್ತಿ" ಎಂದು ಪಾತು ಗಂಡ ಪರಮಶಿವ ಎಷ್ಟು ವಟಗುಟ್ಟಿದರೂ ಪಾತು ಏನು ಜಗ್ಗುತ್ತಿರಲಿಲ್ಲ ಬಿಡಿ.

ಅಂದು ಭಾನುವಾರವಾದ್ದರಿಂದ ಪರಮಶಿವ ಪಾತುವಿನ ಪಾಕ ಪರೀಕ್ಷೆಗೆ ತಪ್ಪಿಸಿಕೊಳ್ಳದ ಹಾಗೆ ಸಿಕ್ಕಿಹಾಕಿಕೊಂಡ. ಗಂಡನಿಗೆ ಅಂದು ಪಾತು ಬಿಸಿ ಬಿಸಿ ಚಪಾತಿ ಜೊತೆ ಪಲ್ಯ ತಂದಿರಿಸಿ, ಕಾತುರದಿಂದ ತನ್ನ ಪಾಕ ಪಾಂಡಿತ್ಯದ ಪರಿಪಾಕ ಹೇಗೆ ಪತಿರಾಯರ ನಾಲಗೆಯ ಮೇಲೆ ಕೆಲಸ ಮಾಡುತ್ತದೆ ಎಂದು ಕಾಯುತ್ತಿದ್ದಳು. ಬಿಸಿ ಬಿಸಿ ಚಪಾತಿ ಪಲ್ಯ ನೋಡಿ ಹಸಿವು ಕೆರಳಿ ಖುಷಿಯಿಂದ ತಿಂಡಿ ತಿನ್ನಲು ಕುಳಿತ ಪರಮಶಿವ. ಚಪಾತಿ ಮುರಿದು ಪಲ್ಯ ನಂಚಿಕೊಂಡು ಬಾಯಲ್ಲಿ ಇಟ್ಟ. ಅರೆ! ಇದೇನು ಕಟುಂ ಎಂದು ಚಪಾತಿಯ ಮಧ್ಯ ಮಧ್ಯ ಅದೇನೋ ಕಲ್ಲಿನಂತೆ ಸಿಗುತ್ತಿದೆ.

"ಲೇ, ಪಾತು ಇದೇನೇ ನಾನು ಯಾವಾಗಲೂ ತರುವ ಗೋವಿಂದ ಶೆಟ್ಟರ ಅಂಗಡಿಯ ಗೋಧಿ ಅಲ್ವೇನೇ ಇದು? ಇದೇನೇ ಚಪಾತಿ ಮಧ್ಯೆ ಸಣ್ಣ ಸಣ್ಣ ಕಲ್ಲಿನ ಥರ ಸಿಗುತ್ತಿದೆ. ಯಾರೂ ಮಾಡಿರದ ಹೊಸ ರುಚಿ ಅಂತ ಸಣ್ಣ ಕಲ್ಲುಗಳನ್ನೇ ಹಿಟ್ಟಿಗೆ ಕಲಸಿ ಬಿಟ್ಟಿದ್ದೀಯೋ ಹೇಗೆ? ನನ್ನ ಹಲ್ಲುಗಳನ್ನು ಹೀಗಾದರೂ ಮುರಿಯಲು ಸಂಕಲ್ಪ ಮಾಡಿದ್ದೀಯಾ ಮಹರಾಯಿತಿ" ಎಂದ. ಹಲ್ಲು ಕಟುಂ ಎಂದು ಒಂದು ಸಲ ಅಂದಮಾತ್ರಕ್ಕೇ ಇಷ್ಟು ಕಟು ನುಡಿಗಳೇ? ಎಂದು ನೊಂದುಕೊಂಡು, "ಯಾಕ್ರೀ ಇಷ್ಟೊಂದು ಕೋಪ. ನಾನು ಹೊಸ ಪ್ರಯೋಗ ಮಾಡಿದ್ದೇನೆ ಗೊತ್ತಾ? ಸೀಬೆ ಹಣ್ಣಿನ ಚಪಾತಿ ಇದು. ಸೀಬೆ ಹಣ್ಣನ್ನು ಮಿಕ್ಸಿಯಲ್ಲಿ ರುಬ್ಬಿ ಚಪಾತಿ ಹಿಟ್ಟಿಗೆ ಕಲಸಿದ್ದೀನಿ. ಅದರ ಬೀಜಗಳು ಗಟ್ಟಿಯಲ್ಲವೇ? ಮಿಕ್ಸಿಯ ಹಲ್ಲಿಗೆ ಸರಿಯಾಗಿ ಸಿಗದೇ ಪೂರ್ತಿಯಾಗಿ ಪುಡಿ ಆಗಿಲ್ಲ, ಆದರೆ ನಿಮ್ಮ ಹಲ್ಲಿಗೆ ಸಿಗುತ್ತೆ, ಚೆನ್ನಾಗಿ ಅಗಿದು ತಿನ್ನಿ, ಒಳ್ಳೇದು" ಅಂದಳು, ಪ್ರಾಜ್ಞಳಂತೆ! ಮಿಕ್ಸಿ ಹಲ್ಲುಗಳಿಗಿಂತ ತನ್ನ ಹಲ್ಲು ಗಟ್ಟಿ ಅಂದದ್ದು ಪ್ರಶಂಸೆಯೋ, ಅಣಕವೋ ಗೊತ್ತಾಗದೆ ಕಣ್ಣು ಕಣ್ಣು ಬಿಟ್ಟರು ಪತಿದೇವ.

"ಅದೇನೋ ಮಧ್ಯ ಮದ್ಯ ಕೆಂಪಗೆ ಬೇರೆ! ಏನದು?" ಎಂದು ಸಿಟ್ಟಿನಿಂದ ಕೇಳಿದ. ಚಪಾತಿ ಸ್ವಲ್ಪ ಕಲರ್‌ಫುಲ್ ಆಗಿ ಕಾಣಿಸಲಿ ಅಂತ ಕ್ಯಾರೆಟ್ ಸಣ್ಣಗೆ ಹೆಚ್ಚಿ ಹಾಕಿದ್ದೇನೆ. ಅದು ಹೆಲ್ತ್‌ಗೆ ಒಳ್ಳೇದೇ ರೀ!" "ಬೀದಿಗೆ ಹೋಗಿ ಒಂದಿಷ್ಟು ಮಣ್ಣು ತಂದು ಬೆರೆಸಬೇಕಿತ್ತು" ಎಂದ ಕೋಪದಲ್ಲಿ! ಪಾತು ನಗಲು ಯತ್ನಿಸುತ್ತ "ಅದನ್ನು ಇನ್ನೊಂದು ದಿನ ಮಾಡೋಣ ಬಿಡ್ರಿ! ಇದು ಹೇಗಿದೆ ಗೊತ್ತಾ? ಅದೇರೀ ಪಕ್ಷಗಳು ಹೆಚ್ಚಾಗಿ, ಚುನಾವಣೆಯಲ್ಲಿ ಯಾವ ಪಕ್ಷಕ್ಕೂ

ಬಹುಮತ ಬಾರದೆ ಆಡಳಿತ ನಡೆಸಲು 2-3 ಪಕ್ಷಗಳು ಸೇರಿ ಮೈತ್ರಿ ಮಾಡಿಕೊಳ್ಳುವುದಿಲ್ಲವೇ? ಹಾಗೆ ಕ್ಯಾರೆಟ್ ಗೋಧಿ ಹಿಟ್ಟು, ಸೀಬೆ ಒಟ್ಟಿಗೆ ಸೇರಿವೆ ಇಲ್ಲಿ" ಹೆಮ್ಮೆಯಿಂದ ಹೇಳಿದಳು. "ಹೌದೌದು! ಅಲ್ಲಲ್ಲಿ ಕಲ್ಲು ಸಿಗುತ್ತದಲ್ಲ ಅದು ಆ ಮೈತ್ರಿಕೂಟದ ಕಲಹದ ಸಂಕೇತ ಅಲ್ವಾ?" ಎಂದ ಪರಮಶಿವ ಸಿಡಿಯುತ್ತಾ! "ನಿಜ ನಿಜ, ಚೆನ್ನಾಗಿ ಹೇಳಿದಿರಿ ಬಿಡಿ" ಎಂದು ಮನಸಾರೆ ನಕ್ಕಳು ಪಾತು. "ಹೋಗಲಿ ಮೆತ್ತಗೆ ತೆಳ್ಳಗಾದರೂ ಇದೆಯಾ? ಒಳ್ಳೆ ರಟ್ಟಿನ ಥರ ಇದೆ, ಇನ್ನು ಯಾವತ್ತೂ ಈ ಸೀಬೆ ಚಪಾತಿ ಮಾಡಬೇಡ ಗೂಬೆ! ನಿನ್ನ ಪ್ರಯೋಗಗಳಿಗೆ ನನ್ನ ಬಾಯಿ, ಶರೀರ ಒಡ್ಡಿ ಒಡ್ಡಿ ಜೀರ್ಣಾಂಗ ವ್ಯವಸ್ಥೆ ಎಲ್ಲ ಏರುಪೇರಾಗಿ ಹೋಗಿದೆ, ಇನ್ನಾರ ಮೇಲಾದರೂ ಪ್ರಯೋಗ ಮಾಡಿಕೋ" ಎಂದ. "ಏನ್ರೀ ನನಗೆ ಸಿಗುವವರೇ ನೀವು! ಮಕ್ಕಳು ನನ್ನ ರುಚಿ ಅಡುಗೆಗಳಿಂದ ತಪ್ಪಿಸಿಕೊಂಡು ದೂರ ಹೋಗಿ ತಪ್ಪಿಸುತ್ತಿದ್ದಾರೆ. ನಿಮ್ಮನ್ನು ಬಿಟ್ಟರೆ ಇನ್ನಾರಿದ್ದಾರೆ? ಬೇರೆಯವರ ಮೇಲೆ ಹಾಗೆಲ್ಲ ಪ್ರಯೋಗ ಮಾಡಬಾರದು, ಏನಾದರೂ ಹೆಚ್ಚು ಕಡಿಮೆಯಾದರೆ ಪಾಪ" ಎಂದಳು. ಪತಿ ಪರಮೇಶ್ವರ "ಹಾಗಾದ್ರೆ ನನಗೆ ಹೆಚ್ಚು ಕಡಿಮೆಯಾಗಿದ್ದರೆ ಪರವಾಗಿಲ್ಲವಾ?" ಎಂದ.

ಮತ್ತೆ ಒಂದು ಕ್ಷಣ ಬಿಟ್ಟು "ನಿನ್ನ ಪ್ರಾಣ ಗೆಳತಿ ಇದ್ದಾಳಲ್ಲ, ಅವಳನ್ನು ಕರೆದು ಇನ್ಮೇಲೆ ರುಚಿ ತೋರಿಸು" ಎಂದ. ಪಾತು ತಕ್ಷಣ "ಆದರೆ ಅವಳು ನನ್ನ ಆತ್ಮೀಯ ಗೆಳತಿ ಅಂತಾನೆ ಅವಳು ರುಚಿ ನೋಡುವುದು ಬೇಡ ಎನ್ನುತ್ತಿರುವುದು" ಎಂದಳು. "ಯಾಕೆ ಬೇಡ?" ಅಂದ ಪರಮಶಿವ. "ಯಾಕೆಂದರೆ ಅವಳನ್ನ ಆಸ್ಪತ್ರೆಯಲ್ಲಿ ನೋಡಲು ನಾನು ಇಷ್ಟಪಡಲ್ಲ" ಎಂದಾಗ ಕುರ್ಚಿಯ ಬೆನ್ನಿಗೊರಗಿ ಸುಧಾರಿಸಿಕೊಂಡ. "ಒಟ್ಟಿನಲ್ಲಿ ನನ್ನನ್ನು ಬಿಡಲಾರೆ ನೀನು?" ಎಂದ. ಪಾತು "ಅದು ಹೇಗೆ ಸಾಧ್ಯ? ಬಿಟ್ಟರೆ ಕೆಟ್ಟೆ! ನನ್ನ ಹೊಸ ರುಚಿಗಳ ಗತಿಯೇನು? ಸಾಮಾನ್ಯವಾಗಿ ಹತ್ತು ಪ್ರಯೋಗಗಳಲ್ಲಿ ಒಂದಾದರೂ ಯಶಸ್ವಿಯಾಗುತ್ತದೆ ತಾನೇ? ಈ ಸಲ ಕಿಟ್ಟಿ ಪಾರ್ಟಿಯಲ್ಲಿ ಅಡುಗೆ ಸ್ಪರ್ಧೆ ಇದೆ, ರುಚಿ ನೋಡುವುದಿಲ್ಲ ಎಂದು ಬಿಡಬೇಡಿ!" ಎಂದಳು ಆಶಾವಾದಿ ಪಾತು. ಪತಿದೇವ ಕಂಪಿಸುವ ದನಿಯಲ್ಲಿ "ನಾಳೆ ಏನು ಹೊಸ ರುಚಿ?" ಎಂದ. "ನಾಳೆ ಪೈನಾಪಲ್ ಚಪಾತಿ ಮಾಡೋಣ ಅಂತಿದ್ದೇನೆ" ಎಂದಳು. "ಸರಿ, ನೀನು ಫೈನಾಗಿ ಮಾಡಿಕೋ, ಆಫೀಸಿನಿಂದ ನಾನು ಟೂರು ಕಾರ್ಯಕ್ರಮ ಏರ್ಪಾಡು ಮಾಡಿಕೊಂಡು ಹೋಗುತ್ತೇನೆ" ಎಂದ.

"ರೀರೀ, ಹಾಗೆ ಮಾಡಬೇಡ್ರೀ, ನನಗೆ ನಿರಾಸೆಯಾಗುತ್ತೆ. ಎದುರು ಮನೆ ಅಂಬುಜಮ್ಮ ನೋಡಿ, ಐದಾರು ಕಿಟ್ಟಿ ಪಾರ್ಟಿಗೆ ಮೆಂಬರ್ ಆಗಿದ್ದಾರೆ, ಪ್ರತಿ ಸಲ ಪಾಕ ಸ್ಪರ್ಧೆಯಲ್ಲಿ ಅವರೇ ಗೆಲ್ತಾರೆ! ಅವರು ಪಾಪ ಅವರ ಯಜಮಾನರ ಮೇಲೆ ಪ್ರಯೋಗ ಮಾಡೋದು, ಪ್ರಾಣಿ ಕಮಕ್, ಕಿಮಕ್ ಅನ್ನದೆ ಸಹಿಸಿಕೊಳ್ಳುತ್ತಾರೆ, ಹೆಂಡತಿಗೆ ಬಹುಮಾನ ಬರಲಿ ಅಂತ. ನೀವು ಇದ್ದೀರಲ್ಲ ಬರೀ ಗಲಾಟೆ" ಎಂದಳು ಕೋಪದಿಂದ, ಮುಖ ಉಬ್ಬಿಸುತ್ತಾ. ಪರಮಶಿವ "ಪಾತು ಯಾಕೆ ಬಹುಮಾನ ಅವರಿಗೇ ಪ್ರತಿ ಬಾರಿ ಬಹುಮಾನ ಬರುತ್ತೆ ಅಂತ ಯೋಚನೆ ಮಾಡು, ಅವರು ರುಚಿಯಾಗಿ ಮಾಡ್ತಾರೆ ಅವರ ಗಂಡ ಅದೃಷ್ಟವಂತನೇ ಸರಿ. ದೇವರು ಬಳಿ ಬೇಡ್ಕೋತೀನಿ ಮುಂದಿನ ಜನ್ಮದಲ್ಲಾದರೂ, ಅಂಬುಜಮ್ಮನ ಕೈ ರುಚಿ ಸಿಕ್ಕಲಿ ಅಂತ" ಎಂದು ಕೊನೆಯ ವಾಕ್ಯವನ್ನು ಮೆಲ್ಲಗೆ ಗೊಣಗಿದ. "ಏನ್ರೀ ಅದು ನೀವು ಹೇಳಿದ್ದು" ಎಂದು ಕೂಗಿದಳು. "ಏನಿಲ್ಲ ಪಾತು, ನೀನು ಯಾಕೆ ಅಂಬುಜಮ್ಮನವರಿಂದ ಅಡುಗೆ ಸರಿಯಾಗಿ ಕಲಿಯಬಾರದು ಅಂತ" ಎಂದು ಪ್ಲೇಟ್ ಚೇಂಜ್ ಮಾಡಿದ. "ಹೋಗ್ರಿ ನಾನು ಯಾರ ಬಳಿಯೂ ಹೋಗಿ ಕಲಿಯುವುದಿಲ್ಲ" ಎಂದು ಮುನಿಸು ತೋರಿದಳು. "ಹಾಗಾದರೆ ನಿನ್ನ ಗಂಡನೆಂಬ ಪ್ರಾಣಿಗೆ ನಿನ್ನ ರಸ ಕವಳವೇ ಗತಿ!" ಎಂದು ಸುಮ್ಮನಾದ.

ಪಾತು ಪ್ರಯೋಗಗಳೆಲ್ಲ ಟುಸ್ಸೆನ್ನ ತೊಡಗಿದವು. ಏನೋ ಮಾಡಕ್ಕೆ ಅಂತ ಹೋದರೆ ಅದು ಇನ್ನೇನೋ ಆಗುತ್ತಿತ್ತು. ಕಿಟ್ಟಿ ಪಾರ್ಟಿಯ ಸ್ಪರ್ಧೆಯ ದಿನಗಳು ಓಡೋಡುತ್ತಾ ಬಂದೇಬಿಟ್ಟಿತು. ಇದ್ದದ್ದರಲ್ಲೇ ಒಂದು ನವೀನ ಪಾಕ ತಯಾರಿಸಿ, ಪರಮಶಿವ ತನ್ನ ನಾಲಿಗೆ ಮೆಚ್ಚಿಕೊಳ್ಳದಿದ್ದರೂ ಬೇರೆ ವಿಧಿ ಇಲ್ಲದೆ 'ಚೆನ್ನಾಗಿದೆ' ಎಂದು ಹೇಳಿದ ನಂತರ ಪಾತು ಹೆಮ್ಮೆಯಿಂದ ಸ್ಪರ್ಧೆಗೆ ಹೋದಳು.

ಬೆಳಗ್ಗೆ ನಗುನಗುತ್ತಾ ಹೋದ ಪಾತು ಮುಖ ಬಾಡಿಸಿಕೊಂಡು ಅಳುತ್ತಾ ಬಂದಳು. ಎಷ್ಟೇ ಆದರೂ ಪ್ರೀತಿಯ ಮಡದಿ, ಪರಮಶಿವನ ಕರುಳು ಚುರುಕ್ ಎಂದಿತು. ಆದರೆ ಅಳುವ ಪಾತು ಕೈಯಲ್ಲಿ ಬಹುಮಾನ ಹೇಗೆ? ಅಚ್ಚರಿಯಾಯಿತು! "ಪಾತು ಏನಾಯಿತು? ಕೈಯಲ್ಲಿ ಬಹುಮಾನ ಇಟ್ಕೊಂಡು ಅಳ್ತಾ ಬರ್ತಿದ್ದಿಯಲ್ಲೇ?" ಪಾತು ಕಣ್ಣೀರನ್ನು ಸೆರಗಿನಿಂದ ಒರೆಸಿಕೊಂಡು ಮುಸುಮುಸು ಮಾಡುತ್ತಾ "ಈ ಸಲಾನೂ ಅಂಬುಜಮ್ಮಂಗೆ ಬಹುಮಾನ ಸಿಕ್ಕಿತು" ಎಂದಳು. "ಸರಿ, ಆದರೆ ಬಹುಮಾನ ನಿನ್ನ ಕೈಯಲ್ಲಿದೆ" ಎಂದ. "ಇದು... ಇದು... ತುಂಬಾ ಕೆಟ್ಟ ಪಾಕ ಮಾಡಿದವರಿಗೂ ಸ್ಪರ್ಧೆ ಇಟ್ಟಿದ್ದರು. ಅದರಲ್ಲಿ ನಂಗೆ ಮೊದಲ ಬಹುಮಾನ. ಹಾಗೇ ಮತ್ತೆ ಒಳ್ಳೆ ಪಾಕದ ಸ್ಪರ್ಧೆಯಲ್ಲಿ ಸದ್ಯಕ್ಕಂತೂ ಭಾಗವಹಿಸಬೇಡಿ, ಚೆನ್ನಾಗಿ ಕಲಿತು ಬನ್ನಿ ಮೊದಲು ಎಂದು ಕಿವಿಮಾತು ಹೇಳಿದರು. ಸ್ವಲ್ಪ ಕೆಡಿಸಿದ್ದವರಿಗೆ ಎರಡನೇ ಬಹುಮಾನ ತುಂಬಾ ಹಸಿವಾಗಿದ್ದಾಗ ವಿಧಿ ಇಲ್ಲದೆ ತಿನ್ನಬೇಕಾಗಿ ಬಂದರೂ ಸಹಿಸಿಕೊಂಡು ತಿನ್ನಬಹುದಾದ ಕೆಟ್ಟ ಪಾಕಕ್ಕೆ ತೃತೀಯ ಬಹುಮಾನ ಅಂತೆ, ಎಷ್ಟು ಕಷ್ಟಪಟ್ಟರೂ ನನಗೆ ಅಡುಗೆ ಬರಲೇ ಇಲ್ಲ" ಎಂದು ಅಳತೊಡಗಿದಳು.

ಬಹುಮಾನದ ಪ್ಯಾಕೆಟ್ ಬಿಚ್ಚಿ ನೋಡಿದನು ಪರಮಶಿವ. ಅಡುಗೆ ಮಾಡುವುದು ಹೇಗೆ? ಎಂದು ವಿವರಿಸುವ ನಾಲ್ಕೈದು ಪುಸ್ತಕಗಳಿದ್ದವು. ನಗು ಬರುತ್ತಿದ್ದರೂ ತಡೆದುಕೊಂಡು, "ನಾನೊಂದು ಒಳ್ಳೆ ಮಾತು ಹೇಳ್ತೀನಿ ಕೇಳ್ತಿಯಾ? ಎಂದ. "ಏನು?" ಎಂದಳು ಅಳುತ್ತಲೇ... "ಈಗಲಾದರೂ ಎದುರು ಮನೆ ಅಂಬುಜಮ್ಮನವರ ಬಳಿಗೆ ಹೋಗು, ಆಕೆ ಒಳ್ಳೆಯವರು, ಜಂಭ ಗಿಂಬ ಇಲ್ಲ, ಚೆನ್ನಾಗಿ ಹೇಳಿಕೊಡುತ್ತಾರೆ. ಒಣ ಹಮ್ಮು ಬಿಟ್ಟು ಶ್ರದ್ಧೆಯಿಂದ ಕಲಿ ಪಾತೂ. ಒಂದಿನ ನೀನು ಗೆದ್ದೇ ಗೆಲ್ತೀಯ, ಖಂಡಿತ" ಎಂದ. ಈ ಬಾರಿ ಪಾತು ಮಾತಾಡಲಿಲ್ಲ. ಯಾವಾಗಲೂ ಗಲಾಟೆ ಮಾಡುತ್ತಿದ್ದವಳು ಸುಮ್ಮನೆ ಇರುವುದನ್ನು ನೋಡಿ, ಪಾತು ಮನಸ್ಸಿನಲ್ಲಿ ಯಾವುದೋ ಸಂಚಲನ, ಸಂಕಲ್ಪ ಮೂಡುತ್ತಿದೆ ಎಂದು ಅನಿಸತೊಡಗಿತು. ಪರಮಶಿವನ ಮನಸ್ಸು ಕರಗಿತು. ಹತ್ತಿರ ಹೋಗಿ ಪಾತುವಿನ ಗದ್ದ ಹಿಡಿದು ಮುಖವೆತ್ತಿ ಕಣ್ಣೀರು ಒರೆಸಿದನು. "ಪಾತು ಮನಸ್ಸು ಮಾಡು, ನನ್ನ ನಾಲಿಗೆಯೂ ಬಹಳ ನೊಂದಿದೆ, ಈಗಲಾದರೂ ಕರುಣೆ ತೋರೆ" ಎಂದ. ಪಾತು ಗಂಡನ ಪ್ರೀತಿಗೆ ಇನ್ನಷ್ಟು ಅಳುತ್ತಾನೆ ಅವನ ಎದೆಯ ಮೇಲೆ ಒರಗಿ "ಆಯ್ತು ರೀ! ಅಂಬುಜಮ್ಮ ಅವರ ಬಳಿಗೆ ಹೋಗಿ ಎಲ್ಲ ಕಲಿತುಕೊಳ್ಳುತ್ತೇನೆ, ಒಂದಿನ ಗೆದ್ದೇ ಗೆಲ್ತೀನಿ" ಎನ್ನುತ್ತಾ ಅಳುವಿನಲ್ಲೂ ನಕ್ಕಳು. ಪರಮಶಿವ ಬಚಾವಾದೆಯಾ ಬಡಪ್ರಾಣಿ! ಎಂದು ನಾಲಿಗೆ ಸವರಿಕೊಂಡ!

***

ಅಮೃತ ಸ್ವರೂಪಿಗಳು

– ರೇಣುಕಾ ದೇಸಾಯಿ

ನಾವೆಲ್ಲಾ ಸಾವೆಂದರೆ ಹೆದರುವದೇಕೆ?
ಸಾವೆಂದರೆ ಮೈಯೆಲ್ಲಾ ಬೆವರುವದೇಕೆ?

ಸಾವಿನ ಕುರಿತು ಮಾತನಾಡಿದರೆ ಅಪಶಕುನ
ಸಾವು ಜಯಿಸಲು ಮೃತ್ಯುಂಜಯ ಜಪ ಪಠಣ

ವೀರ ಪುರುಷರು ಸಾವನ್ನು ವೀರಮರಣವೆಂದರೆ
ಆಧ್ಯಾತ್ಮವಾದಿಗಳು ಸಾವನ್ನು ಸ್ವಾಗತಿಸುತ್ತಾರೆ

ಸಾವೆಂದರೆ ನಮ್ಮ ಅಸ್ತಿತ್ವದ ಕೊನೆ ಎನ್ನುತ್ತಾರೆ
ಜಗತ್ತಿನಲ್ಲಿ ನಾವಿಲ್ಲವೆಂದು ಕೆಲವರು ಬಣ್ಣಿಸುತ್ತಾರೆ

ಸಾವು ನಮ್ಮ ಕಲ್ಪನೆಗೆ ಮೀರಿದ್ದು ಎನ್ನುವರು ಕೆಲವರು
ಮರುಹುಟ್ಟು ಮರು ಮರಣ ಎನ್ನುವರು ಹಲವರು

ಶ್ರೀಕೃಷ್ಣ ಪರಮಾತ್ಮ ಸಾವೆಂದರೆ ಹೀಗೆ ಹೇಳುತ್ತಾನೆ
ಮನುಜ ಹಳೆಬಟ್ಟೆ ಬಿಟ್ಟು ಹೊಸಬಟ್ಟೆ ತೊಡುತ್ತಾನೆ

ಜೀವಾತ್ಮ ಹಳೆಯ ದೇಹ ತ್ಯಜಿಸುತ್ತಾನೆ
ಮರುಜನ್ಮವೆಂದು ಹೊಸ ದೇಹ ಪಡೆಯುತ್ತಾನೆ

ನಾವೇ ದೇಹವೆಂದರೆ ಭಯವಿರುವುದು ಸಹಜ
ದೇಹವಲ್ಲ, ಬುದ್ಧಿಯಲ್ಲ, ಮನಸ್ಸಲ್ಲ ಇದು ನಿಜ

ದೇಹಸ್ವರೂಪಿ ಎಂದಾದರೆ ದೇಹ ಬರಿ ಉಪಕರಣ
ನಾವೆಲ್ಲ ಆತ್ಮಸ್ವರೂಪಿಗಳೆಂದು ಅರಿಯೋಣ

***

‘ನಾನೂ, ನನ್ನ ಸಹಪಾಠಿ ಮಿತ್ರನೂ’ ಲೇಖನಮಾಲೆ-10

ಪ್ರಶ್ನೆಗಳೂ, ಊಹೆಗಳೂ

– ಮಾಧುರಿ ಕೃಷ್ಣ

ಎಂದಿನಂತೆ ಆ ಭೇಟಿಯಲ್ಲೂ ಕಾಲೇಜು ದಿನಗಳ ರಸಮಯ ಸಂದರ್ಭಗಳನ್ನು ಜ್ಞಾಪಿಸಿಕೊಳ್ಳುತ್ತ, 50 ವರ್ಷಗಳ ಹಿಂದಿನ ಆ ಮುಗ್ಧ ಶುದ್ಧ ವಾತಾವರಣದ ಪುಳಕಕ್ಕೆ ಜಾರಿ ಹೋಗಿದ್ದೆವು ನಾನೂ, ನನ್ನ ಸಹಪಾಠಿ ಮಿತ್ರನೂ!

ಅವನ ಇಬ್ಬರೂ ಹೆಣ್ಣುಮಕ್ಕಳು ಬಹುಶ: ನಾನು ಬರುವುದನ್ನು ಮೊದಲಾಗೇ ತಿಳಿಸಿದ್ದರಿಂದ ತಂತಮ್ಮ ಕೆಲಸಗಳನ್ನು ಮುಗಿಸಿ ಕಾಯುತ್ತ ಕುಳಿತಿದ್ದರು. ಮಿತ್ರನ ಮಡದಿಯೂ ದಿವಾನ್ ಮೇಲಿದ್ದಳು. ತೆರೆದಿಟ್ಟ ಮುಂಬಾಗಿಲಿಂದ ತೆಂಗಿನ ಗರಿಗಳನ್ನು ಹಾದುಬಂದ ಗಾಳಿ ತಂಪಾಗಿ ಆಹ್ಲಾದಕರವಾಗಿತ್ತು. ಒಂದರೆ ಗಳಿಗೆಯಷ್ಟೆ. ಮಿತ್ರ ಇದ್ದಕಿದ್ದಂತೆ ಆರಂಭಿಸಿದ "ಮತ್ತೇ ...?”

ಅರೆಕ್ಷಣ ನನಗೂ ಏನೂ ತೋಚಲಿಲ್ಲ. "ನೀನೇ ಹೇಳಬೇಕು ಮಾರಾಯಾ..."

ಬರೇ ಮೂರೇ ಮೂರು ವರ್ಷ ಪದವಿಯಲ್ಲಿ ಮಾತ್ರ ಒಟ್ಟಿಗೆ ಕಲಿತದ್ದು ನಾವು. ಆಮೇಲೆ ಅವನೆಲ್ಲೋ ನಾನೆಲ್ಲೋ! ಈಗ ಒಬ್ಬರಿಗೊಬ್ಬರನ್ನು ಕಾಲ ಭೇಟಿ ಮಾಡಿಸುತ್ತಿದೆ! ನಾನಾದರೂ ಅದೇ ಕಾಲೇಜಿನಲ್ಲಿ ಪಿ.ಯು.ಸಿ ಮಾಡಿದವಳು. ಅವನು ಬೇರೆಲ್ಲೋ ಪಿ.ಯು. ಮಾಡಿಬಂದು ಸೇರಿಕೊಂಡವನು! ಅಂದಿನ ದಿನಗಳನ್ನು ನೆನೆದರೆ ನಗು ಬರುತ್ತದೆ ಈಗ.

ನಾವು ಬರೇ ಹನ್ನೆರಡು ಮಂದಿ ವಿದ್ಯಾರ್ಥಿಗಳು ಒಂದು ತರಗತಿಯಾಗಿ ಸೇರಿಕೊಂಡು ಮೂರು ವರ್ಷ ಅಭ್ಯಾಸ ನಡೆಸಿ ಪದವಿ ಗಳಿಸಿದವರು. ಅದರಲ್ಲಿಯೂ ಒಬ್ಬಳು ಮದುವೆಯಾಗಿ ಮರುವರ್ಷ ಕಾಲೇಜು ತೊರೆದರೂ ಕೂಡ! ಎಂಥಹ ವಿಚಿತ್ರ ಸಂಯೋಗವಾಗಿತ್ತದು. ಕಾಮರ್ಸ್ ಮತ್ತು ಸೈನ್ಸ್ ಮಾತ್ರವಿದ್ದ ಒಂದು ವರ್ಷದ ಪಿ.ಯೂ. ನಲ್ಲಿ ಕಾಮರ್ಸ್ ತೆಗೆದುಕೊಂಡು ಪಾಸಾಗಿದ್ದ ನಾವು ಮೂವರು ವಿದ್ಯಾರ್ಥಿನಿಯರು ನಮಗೆ ಬಿ.ಕಾಂ. ಬೇಡ, ಬಿ.ಎ. ಡಿಗ್ರಿಯೇ ಬೇಕು ಎಂದು ಹಠ ಹಿಡಿದು ಶುಲ್ಕದ ಅಮೌಂಟ್ ತಂದು ಕಟ್ಟದೇನೇ ಓಡಾಡುತ್ತಿದ್ದೆವು. ಬಾಕಿ ಡಿಗ್ರಿಯವರಿಗೆ ತರಗತಿಗಳು ಶುರುವಾಗಿ ಎರಡು ವಾರವಾಗುತ್ತಾ ಬಂದಿತ್ತು. ಅಕಾಡೆಮಿಯವರೋ ಕನಿಷ್ಠ 15 ವಿದ್ಯಾರ್ಥಿಗಳಿಲ್ಲದೆ ಇನ್ನೊಂದು ಪದವಿ ಕೋರ್ಸ್ ಶುರು ಮಾಡಲ್ಲ ಎನ್ನುತ್ತಿದ್ದರು. ನಮ್ಮೊಂದಿಗೆ ಬಿ.ಯೆಸ್ಸಿ ಸೇರಿಕೊಂಡ ಇನ್ನೂ ಮೂವರು ವಿದ್ಯಾರ್ಥಿನಿಯರಿದ್ದರೂ ಸೇರಿಕೊಳ್ಳುವ ಹುಡುಗರು ಎಷ್ಟಿರಬಹುದೆಂದು ತಿಳಿದಿರಲಿಲ್ಲ. 2ನೇ ವಾರದ ಕೊನೆಯ ದಿನವೂ ನಕಾರಾತ್ಮಕ ಉತ್ತರವೇ ದೊರಕಿ, ನಾವು ಮೂವರೂ ನಿರಾಶರಾಗಿ ವಾಪಾಸು ಹೊರಟಾಗ, ಹೊಸದಾಗಿ ಹುಡುಗನೊಬ್ಬನ ಅಡ್ಮಿಷನ್ ಆಗಿ, ಮ್ಯಾನೇಜ್ಮೆಂಟ್ ಆರ್ಟ್ ಪದವಿ ತೆರೆಯಲು ಒಪ್ಪಿಕೊಂಡಿತು.

ಮರು ಸೋಮವಾರದಿಂದಲೇ ಕ್ಲಾಸ್ ಶುರು. ನಾವು ಆರು ಜನ ವಿದ್ಯಾರ್ಥಿನಿಯರು ಯುದ್ಧ ಗೆದ್ದ ಹುರುಪಿನಿಂದೆಂಬಂತೆ ನಮ್ಮ ಕ್ಲಾಸ್ ರೂಂ ನಂಬರ್ ಹುಡುಕಿಕೊಂಡು ಬಂದೆವು. ಇನ್ನೇನು ಕ್ಲಾಸ್ ಒಳಗೆ ಕಾಲಿಡಬೇಕು ಎನ್ನುವಷ್ಟರಲ್ಲಿ ಕೆಂಪನೆಯ ಉದ್ದದ ವ್ಯಕ್ತಿಯೊಬ್ಬ ಮೊದಲ ಡೆಸ್ಕಿನ ಮೇಲೆ ಎರಡೂ ಕೈಗಳನ್ನು ಊರಿ ಕುಳಿತಿದ್ದುದು ಕಾಣಿಸಿತು. ಅವನ ಮುಂದೆ ಕೆಂಪು ಜಾಕೆಟ್ಟಿನ ದೊಡ್ಡ ಡೈರಿಯೊಂದಿತ್ತು. ಅಚ್ಚ ಶ್ವೇತ ಶುಭ್ರ ವಸನ ಬೇರೆ ಧರಿಸಿದ್ದ ಆ ವ್ಯಕ್ತಿ. ಯಾಕೋ ನಮಗೆ ಗಾಬರಿಯಾಯಿತು. ’ಯಾರಿವನು? ರೂಂ ನಂಬರೂ ಸರಿಯಿದೆ, ಬ್ಲ್ಯಾಕ್ ಬೋರ್ಡ್ ಮೇಲೆ ‘ವೆಲ್‌ಕಮ್ ಟು ಆರ್ಟ್ಸ್ ಸೆಕ್ಷನ್’ ಎಂದೂ ಬರೆದಿದೆ. ಯಾಕೆ ಒಬ್ಬನೇ ಒಬ್ಬ ಹುಡುಗನೂ ಇಲ್ಲಿ ಕಾಣಿಸುತಿಲ್ಲ! ಏನು ಮಾಡುವುದೀಗ? ನಾವು ಒಳಗೆ ಹೋಗದೆ ನಿಂತುಬಿಟ್ಟೆವು.

ಆ ದೈತ್ಯಾಕಾಯವೋ ಓರೆಗಣ್ಣಲ್ಲಿ ನಮ್ಮನ್ನೇ ನೋಡುತ್ತ ತುಟಿಯಲ್ಲಿ ನಗು ಕೊಂಕಿಸುತಿತ್ತು. ಏನೇ ಆಗಲಿ, ಒಳಗೆ ಹೋಗಿ ಕುಳಿತುಬಿಡೋಣ ಎಂದು ಕಣ್ಣಲ್ಲೇ ಮಾತಾಡಿಕೊಂಡು ಒತ್ತೊತ್ತಾಗಿ ಒಂದೇ ಬೆಂಚಲ್ಲಿ ಕುಳಿತುಬಿಟ್ಟೆವಾ, ಅದೆಲ್ಲಿದ್ದರೋ ನಾಲ್ಕೈದು ಹುಡುಗರು ದಡಬಡ ಎನ್ನುತ್ತ ಆ ಕಡೆಯ ಪ್ರವೇಶ ದ್ವಾರದಿಂದ ಒಳ ನುಗ್ಗಿದರಾದರೂ ಒಬ್ಬರೂ ಆ ದೈತ್ಯ ಕುಳಿತಿದ್ದ ಬೆಂಚಿಗೆ ಹೋಗದೇ ಹಿಂದಿನ ಬೆಂಚುಗಳಲ್ಲೇ ಜಮೆಯಾದರು. ಇದು ನಮಗೂ ಅಚ್ಚರಿ ಹುಟ್ಟಿಸುವಷ್ಟರಲ್ಲಿ "ಗುಡ್ ಮಾರ್ನಿಂಗ್ ಬಾಯ್ಸ್ ಆಂಡ್ ಗರ್ಲ್ಸ್" ಎನ್ನುತ್ತ, ವೈಟ್ ಪ್ಯಾಂಟು ಮೇಲೆ ಕಡು ನೀಲಿ ಕೋಟ್ ಹಾಕಿ ಕೈಯಲ್ಲಿ ಚಾಕ್‌ಪೀಸ್ ಹಾಗೂ ಡಸ್ಟರ್ ಹಿಡಿದ ಲೆಕ್ಚರರ್ ಒಳಬಂದು ಫ್ಲಾಟ್ ಫಾರ್ಮ್ ಹತ್ತಿದರು.

ಈಗ ನಾವು ವಿದ್ಯಾರ್ಥಿನಿಯರಿಗೆ ಉಸಿರು ಬಂತು. ಉಪನ್ಯಾಸಕರು ಇಡೀ ತರಗತಿಯನ್ನು ವೀಕ್ಷಿಸುತ್ತಾ, "ವೈ ಯೂ ಟಾಲ್ ಗೈ ಸಿಟ್ಟಿಂಗ್ ಹೀಯರ್ ಆಂಡ್ ದೋಸ್ ಸ್ಮಾಲ್ ಗೈಸ್ ಆರ್ ಸಿಟ್ಟಿಂಗ್ ಇನ್ ದ ಬ್ಯಾಕ್? ಕಮ್ ಟು ದ ಫ್ರಂಟ್ ಐ ಸೇ" ಎಂದು ಕೈ ತೋರಿಸಿದರು. ಒಬ್ಬೊಬ್ಬರಾಗಿ ಹಿಂದೆ ಕುಳಿತಿದ್ದ ಹುಡುಗರು ಮುಂದೆ ಬಂದರೂ ಆ ದೈತ್ಯಾಕಾಯದ ಬಳಿಗೆ ಹೋಗಿ ಕೂರುವ ಧೈರ್ಯ ಮಾಡದೇ, ನಮ್ಮಂತೇ ಎರಡನೇ ಸಾಲಿನ ಬೆಂಚಿನಲ್ಲಿ ಒತ್ತಿಕೊಂಡೇ ಕುಳಿತರು.

ಅಲ್ಲಿಗೆ ನಾನು ಮಾತು ನಿಲ್ಲಿಸಿದೆ. ಆ ತನಕ ಒಂದೂ ಮಾತನಾಡದೆ ಕೇಳಿಸಿಕೊಳ್ಳುತಿದ್ದ ಮಿತ್ರ ಈಗ ದೊಡ್ಡದಾಗಿ ಬಾಯಿ ತೆರೆದು, 'ಹ್ಹಹ್ಹಾಹ್ಹಾ' ಎಂದು ಜೋರಾಗಿ ನಗೆಯಾಡಿದ.

"ಅದೂ.. ಅದೂ... ನಮ್ಮಪ್ಪನೇ ಇರಬೇಕು ಮಾರಾಯ್ತೀ..." ಎಂದು ಮಿತ್ರನ ಮಗಳೊಬ್ಬಳು ಇನ್ನೊಬ್ಬಳಿಗೆ ಜೋರಾಗಿಯೇ ಹೇಳಿದಳು. "ಯಾರು... ಯಾರು? ಎಲ್ಲಿ... ಎಲ್ಲಿ?" ಎನ್ನುತ್ತ ಮಿತ್ರನ ಮೊಮ್ಮಗನೂ ಓಡಿ ಬಂದ.

ಸಹಪಾಠಿ ಮಿತ್ರ ಮತ್ತು ನಾನು ಬಾಯಿ ಬಿಗಿದುಕೊಂಡು ಸುಮ್ಮನೆ ಕುಳಿತಿದ್ದೆವು.

"ಅಲ್ಲವೇ ಅಪ್ಪಾ, ಅಲ್ಲವೇ ಆಂಟೀ" ಎನ್ನುತ್ತಿದ್ದ ಮಕ್ಕಳನ್ನು ನೋಡಿ, ಮತ್ತೊಮ್ಮೆ ಗಹಗಹಿಸಿ ಮಿತ್ರ ದೇಹಕ್ಕಾಗುವ ಹಿಂಸೆಯನ್ನೂ ನಿರ್ಲಕ್ಷ್ಯಿಸಿ, "ಹೌದು ಮಕ್ಕಳೇ ಹೌದು, ಆ ಬಚ್ಚಾ ನನ್ನ ಮಕ್ಕಳು ಈ ಗರ್ಲ್ಸ್‌ಗಳಿಗಿಂತಲೂ ಹೆದರು ಪುಕ್ಕಲುಗಳಾಗಿ, ಕ್ಲಾಸಲ್ಲಿ ಮೊದಲು ಬಂದು ಕುಳಿತಿದ್ದ ನನಗೆ ಹೆದರಿ, ಕ್ಲಾಸೊಳಗೆ ಬರದೇ ಪದ್ರಾಡ್ ಮಾಡಿದ್ದರು. 'ಇರಲಿ, ಮುಂದೇನಾಗುತ್ತೋ ನೋಡೋಣ ಅಂದುಕೊಳ್ಳುವಷ್ಟರಲ್ಲಿ ಈ ಗರ್ಲ್ಸ್ ಬಂದು ಮಜಾ ಹೆಚ್ಚಿಸುತ್ತಿರುವಾಗಲೇ ಎಕನಾಮಿಕ್ಸ್ ಲೆಕ್ಚರರ್ ನನಗಿಂತ ಹೈಟು ವೈಟಲ್ಲಿ ಜೋರಾಗಿರುವವರು ಬಂದು ಎಲ್ಲ ತಲೆಕೆಳಗಾಗಿ ಹೋಯ್ತು" ಎಂದು ಬಾಯಲ್ಲಿ ಥತ್ ಥಚ್ಚೆಂದು ನಿರಾಶೆಯ ಸೋಗು ಹೊರ ಹಾಕಿದ್ದೂ ಅಲ್ಲದೇ ಆ 50 ವರ್ಷಗಳ ಹಿಂದಿನ ನೆನಪಿಗೆ ಜಾರಿಕೊಂಡೂ ಬಿಟ್ಟ.

ಹೌದು, ಈ ಮಿತ್ರನದ್ದು ಆ ಕಾಲಕ್ಕೇ ಆರಡಿಗೂ ಮೀರಿದ ಭಾರೀ ದೈತ್ಯ ಕಾಯ. ಅದಕ್ಕೂ ಮೀರಿದ ದಾರ್ಷ್ಟ್ಯ ಬೇರೆ! ಅಸಲು ಸಂಗತಿಯೆಂದರೆ ಜಿಲ್ಲೆಯ ಮುಖ್ಯ ಪಟ್ಟಣದಲ್ಲಿ ಪಿ.ಯೂ.ಗೆ ಸೇರಿ ಪಕ್ಕದಲ್ಲೇ ಇದ್ದ ಎಂಜಿನೀಯರಿಂಗ್ ಹಾಗೂ ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳೊಂದಿಗೆ ಸ್ನೇಹ ಬೆಳೆಸಿಕೊಂಡುದರ ಪರಿಣಾಮವಾಗಿ ನಾಲ್ಕನೇದೋ ಐದನೇದೋ ಪ್ರಯತ್ನದಲ್ಲಿ ಪಾಸಾಗಿ ಮನೆಯವರ ಒತ್ತಾಯದಿಂದ ಇಲ್ಲಿಗೆ ಬಂದು ಸೇರಿಕೊಂಡದ್ದು. ಅವನ ಈ ಅಸಾಧಾರಣ ಎಕ್ಸ್‌ಪೀರಿಯನ್ಸಲ್ಲಿ ಬಾಯಿ ತುಂಬಾ ಚೆನ್ನಾಗಿ ಇಂಗ್ಲೀಷ್ ಫಟ್ ಫಟಾಯಿಸುತಿತ್ತು. ಧೈರ್ಯವೋ ಬಂಡಿಗಟ್ಟಲೆ ಇದ್ದು ಪ್ರಿನ್ಸಿಪಾಲರಿಂದ ಹಿಡಿದು ಎಲ್ಲರನ್ನೂ ಎದುರಿಸುವ ತಾಕತ್ತೂ ಇತ್ತು. ಬಾಕಿ ಡಿಗ್ರಿ ಸ್ಟೂಡೆಂಟ್ಸ್ ಅವನೆದುರು ಬರಲು ಹಿಂದೆಗೆಯುತಿದ್ದರು. ಸೇರಿದ ಕೆಲವೇ ದಿನಗಳಲ್ಲಿ ಅದು ಯಾರ್‍ಯಾರನ್ನೋ ಸೇರಿಸಿಕೊಂಡು

ಅವನು ಗ್ಯಾಂಗ್ ಕಟ್ಟಿಬಿಟ್ಟಿದ್ದ. ಕಾಲೇಜಿನಲ್ಲಿ ನಡೆಯುತ್ತಿದ್ದ ಎಲ್ಲಾ ಘಟನೆಗಳಿಗೂ ಅವನ ಹೆಸರು ಥಳುಕು ಹಾಕಿಕೊಂಡಿರುತಿತ್ತು. ತಮಾಷೆ ಎಂದರೆ ಅವನು ಧರಿಸುತ್ತಿದ್ದ ಬಟ್ಟೆಗಳು ಮಾತ್ರ ಡಿಗ್ರಿ ಮುಗಿಯೋವರೆಗೂ ಅಂದಿನ ಕಾಲದ ಎಲ್ಲ ಹುಡುಗರಿಗೆ ಸಾಮಾನ್ಯವೆನಿಸಿದ್ದ ಪಂಚೆ ಮುಂಡುಗಳೇ ಆಗಿದ್ದು, ಕೊನೆ ಕೊನೆಗೆ ಪ್ಯಾಂಟು ಏರಿಸಿಕೊಳ್ಳುವ ಅಭ್ಯಾಸಕ್ಕೆ ಬಂದರೂ ಶುದ್ಧ ಬಿಳುಪು ಬಣ್ಣದಲ್ಲೇ ಇರುತಿದ್ದುವು! ಈಗ ಕೂಡ ಇಂತಹ ಅನಾರೋಗ್ಯದಲ್ಲೂ ಅದೇ ಬಿಳುಪಿನಲ್ಲೇ ಇದ್ದಾನೆ. ಇದು ಹೆಸರಿಸಲಾಗದ ವಿರೋಧಾಭಾಸವೋ ಅಥವಾ ಸಹಜ ಪ್ರವೃತ್ತಿ ಸಂಭಾವ್ಯತೆಯೋ! ಹಾಗಾದರೆ ಅವನ ಮೂರು ವರ್ಷದ ಆಟಾಟೋಪವೆಲ್ಲ ಬರೀ ತೋರಿಕೆಯೇ? ಒಳಗಿನಿಂದ ಅವನ ಹೃದಯ ಮೃದು ಮೃದುವಾಗಿದ್ದು ಮಾನವೀಯ ಗುಣವಂತಿಕೆಯ ರಸಾಮೃತದಿಂದ ಕೂಡಿದೆಯೇ?

ನನ್ನೊಳಗಿನ ಪ್ರಶ್ನೆಗಳೂ ಊಹೆಗಳೂ ಆವತ್ತು ಯಾವ ಉತ್ತರವನ್ನೂ ಪಡೆಯದೆ ನಾನು ಬರಿದೇ ಹಿಂದಿರುಗಬೇಕಾಯ್ತು.

***

ಜಗನ್ನಾಟಕ

– ಭ.ರಾ.ವಿ.

ಒಲ್ಲೆನೆಂಬ ನಲ್ಲೆಯನ್ನು ಹೇಗೆ ಒಲಿಸಲಿ
ಕಲ್ಲಾಗಿಹ ಮನವು ಕರಗಲೇನು ಮಾಡಲಿ?

ಅಂಥ ತಪ್ಪನೇನು ನಾನು ಮಾಡಲು ಇಲ್ಲ
ಪಂಥ ಕಟ್ಟಿ ನಾನೆ ಗೆದ್ದು ಬೀಗಲು ಇಲ್ಲ
ಕಂತುಪಿತನ ಬೇಡಿದರೂ ತಿರುಗಲೆ ಇಲ್ಲ
ಸ್ವಂತಕಾಗಿ ಇಷ್ಟು ದಿನವು ಬೇಡಲೆ ಇಲ್ಲ ॥ಒ॥

ಕಲಿತ ಮಾತನೆಲ್ಲ ಆಡಿ ಹುಡುಕುತಲಿರುವೆ
ಬಲಿತ ಬುದ್ಧಿಯನ್ನು ಮಣಿಸಿ ಬಾಗುತಲಿರುವೆ
ಮಲೆತ ಮನದ ತಾಪ ತಣಿಸಿ ತಾಳುತಲಿರುವೆ
ಕಳಿತ ಫಲವು ಭಾರವಾಗಿ ಬೀಳುತಲಿರುವೆ ॥ಒ॥

ಗಂಡು ಹೆಣ್ಣು ಮಾಯೆಯೇಕೆ ಜಗಕೆ ಬಂದಿತೋ
ಉಂಡಾಗಿದೆ ಉದರಬಾಧೆ ತಡೆಯಲೆಂತಿದೋ
ಕಂಡು ಕಾಣದಂತೆ ಇವಳು ದೂರಮಾಡಿಯೂ
ಭಂಡತನದ ಬಾಳ ನಾನು ಬಾಳುವಂತೆಯೂ

ಸಾವಿಲ್ಲದ ಮನೆಯ ಕಾಣೆ ಸಾಸಿವೆ ಸಿಗದು
ನೋವಿಲ್ಲದ ಗಾಯವೆಲ್ಲಿ ಹುಡುಕಲು ಸಿಗದು
ನಾವು ಮಾತ್ರವಲ್ಲ ಜಗದೆ ಇಂಥ ಸತಿ ಪತಿ
ಕಾವುದೆಮ್ಮ ಹರನೊ ಹರಿಯೊ ದೇವ ದಂಪತಿ

***

ಚಾರ್‌ಧಾಮ್‌ಗೊಂದು ಸುತ್ತು

– ಮನೋಹರ ಎಂ. ಗೋಖಲೆ

ರುದ್ರ ಗಂಭೀರ ಹಿಮಾಲಯ ಶ್ರೇಣಿಗಳು
ಮುಗಿಲೆತ್ತರದ ಪರ್ವತ ಶಿಖರಗಳು
ಅಗಮ್ಯ ರಮ್ಯ ಕಂದಕ ಪ್ರಪಾತಗಳು
ನೋಡಬೇಕು ನೋಡಿ ಆನಂದಿಸಬೇಕು

ಪ್ರಪಾತದಡಿ ಕಂಡೂ ಕಾಣದ ನದಿಗಳು
ನದಿತೀರದಲ್ಲೇ ಸುತ್ತುತ್ತ ಸಾಗುವ ಹಾದಿಗಳು
ನಯನ ಮನೋಹರ ಉದ್ದುದ್ದ ಜಲಪಾತಗಳು
ಅಚ್ಚರಿಪಡಬೇಕು ಕಣ್ಣೆಚ್ಚರವಿರಬೇಕು

ಕಲ್ಲುಮಣ್ಣು ಮಿಶ್ರಿತ ಸಡಿಲ ಬೆಟ್ಟಗುಡ್ಡಗಳು
ಕುಸಿದ ಕುಸಿಯುವ ಭೀತಿಯ ಇಳಿಜಾರುಗಳು
ಪುರಾಣೇತಿಹಾಸ ಪ್ರಸಿದ್ಧ ಪುಣ್ಯ ಕ್ಷೇತ್ರಗಳು
ಮನವಿರಬೇಕು ಹರಸಾಹಸದಿ ಹತ್ತಿಳಿಯಬೇಕು

ದೈವಿಕ ಶ್ರದ್ಧಾಭಕ್ತಿಗೆ ಲೌಕಿಕ ಭಾವಶುದ್ಧಿಗೆ
ಏಕತಾನತೆಯ ಬದುಕಿನ ಬದಲಾವಣೆಗೆ
ಮನೋಲ್ಲಾಸಕೆ ಚಾರ್ ಧಾಮ್ ನೋಡಬೇಕು
ಹಿಮವಂತ ದೇವಭೂಮಿಗೆ ಹೋಗಿಬರಬೇಕು.
**

ನದಿಮೂಲ ಹುಡುಕಹೋಗಬಾರದೆಂದರು ಹಿರಿಯರು
ಗಿರಿಕಂದರಗಳಲಿ ಒರತೆಗಳು ಧಾರೆಗಳು ಸಾವಿರಾರು
ಮೂಲ ಯಾವುದೆಂದು ಅರಿಯುವುದೇ ಚಮತ್ಕಾರ
ಅವರವರ ಭಾವಕ್ಕೆ ಭಕುತಿಗೆ ನಂಬಿಕೆಯೇ ಆಧಾರ.
**

ಯಮುನೆಯ ಮೂಲ ಹುಡುಕುತ್ತ ನದಿಗುಂಟ ಹೋದೆ
ಗಂಗೆಯ ಮೂಲ ಹುಡುಕುತ್ತ ಹರಿವು ಬಂದತ್ತ ಹೋದೆ
ಮಂದಾಕಿನಿಯ ಮೂಲ ಹುಡುಕುತ್ತ ಎತ್ತರೆತ್ತರ ಏರಿದೆ
ಯಮುನೋತ್ರಿ ಗಂಗೋತ್ರಿ ಕೇದಾರ ಮಹಿಮೆ ಎಂದರು
ಹಿಮಾವೃತ ಹಿಮಝುರಿಗಳಿಗೆ ಆದಿಯಿಲ್ಲ ಅಂತ್ಯವಿಲ್ಲ
ಜಲಮೂಲ ಸಾವಿರ ನಿರಂತರ ಹಿಮಧಾರೆಗೆ ಅಳಿವಿಲ್ಲ.
**

ಕಾಲ್ನಡಿಗೆಯಲ್ಲಿ ಏರುವವರಲಿ ಕಾಣುವುದು
ದೈವಿಕ ಭಕ್ತಿ ದೈಹಿಕ ಶಕ್ತಿ
ಕುದುರೆ ಪಿಟ್ಟು ಡೋಲಿಗಳಲಿ ಏರುವವರಲಿ
ಆಂತರಿಕ ಭಕ್ತಿ ಕುಂದಿದ ದೈಹಿಕ ಶಕ್ತಿ
ಹೆಲಿಕಾಪ್ಟರಲಿ ಹಾರುವವರದು ಆ ಕ್ಷಣದ ಭಕ್ತಿ ವಿತ್ತವೇ ಶಕ್ತಿ
ಮನೆ ಮನದಲ್ಲೇ ದೇವಧ್ಯಾನದಲಿ ಇಹುದು
ಅಸದೃಶ ಭಕ್ತಿ ಅನನ್ಯ ಶಕ್ತಿ.
**

ಪ್ರಕೃತಿ ಪರಮೇಶ್ವರರ ಸಮಾಗಮ ಸ್ಥಾನ
ಯಮುನೋತ್ರಿ ಗಂಗೋತ್ರಿ ಬದರಿ ಕೇದಾರ
ಮಣ್ಣು ಕಲ್ಲು ಬಂಡೆ ಗಿಡ ಮರ ಜೀವ ಬನ
ಸುಜಲಧಾರೆ ಹಿಮಾಶ್ರಿತ ಶಿಖರ ಎತ್ತರೆತ್ತರ.
**

ದೈವಶಕ್ತಿ ಭಕ್ತಿ ವಿರಕ್ತಿ ಸಂತೃಪ್ತಿ ಮುಕ್ತಿಯ ಹಾದಿಗಳು
ಮಾನವನ ಪರಿಶ್ರಮ ಪ್ರಯತ್ನಕ್ಕೆ ತಕ್ಕ ಫಲ ಮಾರ್ಗಗಳು
ಪ್ರೀತಿ ವಿಶ್ವಾಸ ಸೇವೆ ಪರೋಪಕಾರ ನಿಸ್ವಾರ್ಥ ಭಾವಗಳು
ದೇಶ ಸುತ್ತಿ ಕೋಶ ಓದಿ ಮನನ ಮಾಡಿ
ಬದುಕುವ ದಾರಿಗಳು.
**

ಭಾರತ ದೇಶದ ವೈಶಾಲ್ಯ ಪ್ರಕೃತಿ ಬಹುಸಂಸ್ಕೃತಿ
ಜಾನಪದ ಪುರಾಣ ಇತಿಹಾಸ ಭಾಷೆಗಳ ಸನ್ಮತಿ
ಮಾನವನಾಗಿ ಹುಟ್ಟಿದ ಮೇಲೆ ಕಣ್ಣಾರೆ ಕಾಣಬೇಕು
"ಭಾರತ ಪರಂಪರಾ ದರ್ಶನ"ದಿ ಪ್ರವಾಸ ಮಾಡಬೇಕು.
**

ಪ್ರಪಂಚದ ಅದ್ಭುತ ಧಾಮ್ ಬಿಸಿನೀರ ಬುಗ್ಗೆಗಳು
ಹಿಮ ವಾತಾವರಣದಲ್ಲಿ ಜೀವರಕ್ಷಕ ತಾಣಗಳು
ಗಂಧಕ ಮಿಶ್ರಣ ಕಾರಣ ವಿಜ್ಞಾನ ಉತ್ತರಗಳು
ದೈವಿಕ ಸ್ಥಾನಗಳಲಿ ಕಾಣುವುದೇಕೆ ಈ ವೈಚಿತ್ರ್ಯಗಳು?

***

ಸಾಧಕರ ಪರಿಚಯ

ಮೈಸೂರಿನ ವೈದ್ಯರತ್ನ ಡಾ. ವಿ.ಲಕ್ಷ್ಮೀನಾರಾಯಣ

– ಮಹಾಬಲ



೨೦೧೦ರ ನವೆಂಬರ್ ತಿಂಗಳಲ್ಲಿ ಮೈಸೂರಿನ ನೆಂಟರೊಬ್ಬರ ಮನೆಯ ಮದುವೆಗೆ ಹೋಗಿದ್ದಾಗ ಅಲ್ಲಿ ರಂಗಕರ್ಮಿ ಹಾಗೂ ಬಹುಕಾಲದ ಮಿತ್ರ ದಿವಂಗತ ಶ್ರೀಕಂಠ ಗುಂಡಪ್ಪನವರೂ ಬಂದಿದ್ದರು. ಹಾಗೆಯೇ ಉಭಯಕುಶಲೋಪರಿ ವಿಚಾರಿಸುತ್ತಿದ್ದಾಗ ನನ್ನ ಸಕ್ಕರೆ ರೋಗದ ಸ್ಥಿತಿ ಬಗ್ಗೆಯೂ ತಿಳಿದುಕೊಳ್ಳುತ್ತ "ನೀವು ಒಮ್ಮೆ ನಮ್ಮ ಡಾಕ್ಟರು ವಿ. ಲಕ್ಷ್ಮಿನಾರಾಯಣ ಅವರ ಹತ್ತಿರ ಏಕೆ ಬರಬಾರದು? ನನ್ನ ಡಾಕ್ಟರು ಎಂಬ ಪಕ್ಷಪಾತದಿಂದ ಹೇಳುತ್ತಿಲ್ಲ. ಆದರೆ ಇವರು ಕುವೆಂಪು ಅವರಿಗೆ ಹತ್ತು ವರ್ಷ ಖಾಸಗಿ ವೈದ್ಯರಾಗಿದ್ದವರು. ಸಾಹಿತ್ಯಾಭಿಮಾನಿ, ಸ್ನೇಹಶೀಲ. ಡಯಾಬಿಟಿಸ್ ಬಗ್ಗೆ ಹಲವು ವಿಶೇಷ ಸಂಶೋಧನೆಗಳನ್ನು ನಡೆಸಿ ಯಶಸ್ವಿಯಾಗಿದ್ದಾರೆ. ಬಡವರ ವೈದ್ಯ ಎಂದೂ ಹೆಸರು ಮಾಡಿದ್ದಾರೆ" ಎಂದೆಲ್ಲ ವಿವರಿಸಿದರು.

ನಾನು ಏನು ಹೇಳಬೇಕೆಂದು ಯೋಚಿಸುತ್ತಿದ್ದೆ. ಪ್ರತಿ ಮೂರು ತಿಂಗಳಿಗೊಮ್ಮೆ ನಾನು ನನ್ನ ಖಾಯಂ ವಾಸಸ್ಥಳ ಬೆಂಗಳೂರಿನಿಂದ ಬಂದು ಹೋಗುವುದೇ ತೊಂದರೆ ಎಂದುಕೊಳ್ಳುತ್ತಿದ್ದೆ. ಗುಂಡಪ್ಪ ಅವರು ಅಲ್ಲೇ ಇದ್ದ ನನ್ನ ಮಡದಿಗೆ "ಅಮ್ಮ, ನೀವಾದರೂ ಹೇಳಿ. ಒಂದು ಬಾರಿ ತೋರಿಸಲಿ. ಅಮೇಲೆ ನಿಮಗೆ ಬಿಟ್ಟಿದ್ದು." ಎಂದು ಮತ್ತೆ ಒತ್ತಿ ಒತ್ತಿ ಹೇಳಿದರು. ಆತ್ಮೀಯರೂ ನಮ್ಮ ಕುಟುಂಬದ ಹಿತೈಷಿಗಳೂ ಆಗಿದ್ದ ಗುಂಡಪ್ಪ ಅವರ ಮಾತಿಗೆ ಕಟ್ಟುಬಿದ್ದು ಒಪ್ಪಿಕೊಂಡೆ.

ಗುಂಡಪ್ಪ "ಅವರು ಡಾಕ್ಟರರ ಮನೆಗೆ ಹೋಗುವಾಗ ನಿಮ್ಮ ತಂದೆ ಕೆ ಎಸ್ ನ ಅವರ ಸಮಗ್ರ ಕಾವ್ಯ ಇತ್ಯಾದಿ ಕೃತಿ ಇದ್ದರೆ ತನ್ನಿ. ಅವರಿಗೆ ಸಂತಸವಾಗುತ್ತದೆ. ಸೀದಾ ನಮ್ಮ ಮನೆಗೆ ಬನ್ನಿ. ನಾನೇ ನಿಮ್ಮನ್ನು ವೈದ್ಯರ ಬಳಿ ಕರೆದೊಯ್ಯುತ್ತೇನೆ" ಎಂದರು.

ಅದರಂತೆ ಹದಿನೈದು ದಿನ ಬಿಟ್ಟು ಒಂದು ಸಂಜೆ ಗುಂಡಪ್ಪ ಅವರ ಮನೆಗೆ ಹೋದೆ. ಅವರು ಅದಾಗಲೇ ಡಾಕ್ಟರು ಇರುವುದನ್ನು ಖಚಿತಪಡಿಸಿಕೊಂಡಿದ್ದರು. ತಮ್ಮ ಸ್ಕೂಟರಿನಲ್ಲಿ ಡಾಕ್ಟರ ಮನೆಗೆ ಕರೆದೊಯ್ದು, "ಇವರೇ ಮಹಾಬಲ, ಕೆಎಸ್‌ನ ಅವರ ಪುತ್ರ. ಇವರೂ ನನ್ನಂತೆ ಬ್ಯಾಂಕಿನವರು ಮತ್ತೆ ಡಯಾಬಿಟಿಸ್ ಪೀಡಿತರು" ಎಂದು ಪರಿಚಯಿಸಿದರು.

ಡಾಕ್ಟರು ನಾನು ನೀಡಿದ ಮಲ್ಲಿಗೆಯ ಮಾಲೆ ಕೃತಿಯನ್ನು ಮೆಚ್ಚುಗೆಯಿಂದ ಗಮನಿಸಿ, ನನ್ನ ಹಲವು ಪ್ರಾಥಮಿಕ ಪರೀಕ್ಷೆ ನಡೆಸಿ ಮತ್ತಷ್ಟು ತಪಾಸಣೆಗೆ ಕಣ್ಣನ್ ಲ್ಯಾಬ್ ಹಾಗೂ ಅಪೋಲೋ ಆಸ್ಪತ್ರೆಗೆ ಬರೆದುಕೊಟ್ಟರು. ನಾನು ಮಾರನೆಯ ದಿನ ಅವರು ಹೇಳಿದ ಎಲ್ಲ ತಪಾಸಣೆ ಮುಗಿಸಿ, ಮೈಸೂರು ವಾಸಿ ನನ್ನ ಭಾವಮೈದುನನ ಜತೆ ಡಾಕ್ಟರರ ಬಳಿ ಹೋಗಿ ತಪಾಸಣೆಯ ವರದಿಗಳನ್ನು ಡಾಕ್ಟರಿಗೆ ನೀಡಿದೆ. ಅವರು ಎಲ್ಲ ವರದಿ ಅವಲೋಕಿಸಿ, "ಗುಡ್, ನಾನು ಊಹಿಸಿದಷ್ಟು ಕೆಟ್ಟದಾಗಿಲ್ಲ. ನಿಮ್ಮ ಆರೋಗ್ಯ ಸುಧಾರಿಸುತ್ತದೆ" ಎಂದು ಹಿಂದಿನ ಕೆಲವು ಔಷಧಗಳನ್ನು ಬದಲಿಸಿ

ಬರೆದುಕೊಟ್ಟು "ಮೂರು ತಿಂಗಳಿಗೆ ಒಮ್ಮೆ ಬನ್ನಿ" ಎಂದು ಬೀಳ್ಕೊಟ್ಟರು. "ಇಲ್ಲಿ ಉಳಿದುಕೊಳ್ಳಲು ಯಾರಾದರೂ ನೆಂಟರಿದ್ದಾರೆಯೇ" ಎಂದೂ ಕಾಳಜಿಯಿಂದ ಕೇಳುವುದನ್ನು ಮರೆಯಲಿಲ್ಲ.

ಹೀಗೆ ಆರಂಭವಾದದ್ದು ನನ್ನ ಹಾಗೂ ವೈದ್ಯರತ್ನ ಡಾ. ವಿ.ಲಕ್ಷ್ಮೀನಾರಾಯಣ ಅವರ ವೈದ್ಯಕೀಯ ಬಾಂಧವ್ಯ. ಮೆಲುವಾದ ಆದರೆ ಖಚಿತವಾದ ಮಾತುಗಳು, ತೀಕ್ಷ್ಣವಾದ ನೋಟ, ಸ್ನೇಹಶೀಲತೆ ಇವೆಲ್ಲ ನನ್ನನ್ನು ಸೂಜಿಗಲ್ಲಿನಂತೆ ಸೆಳೆದಿದೆ. ಹದಿಮೂರು ವರುಷಗಳಿಂದ ಅವರ ಭೇಟಿ ಎಂದೂ ನನಗೆ ಕ್ಲೇಶದ್ದಾಗಲಿ, ಆಯಾಸಕರವಾದುದಾಗಲಿ ಎಂದು ಅನಿಸಿಯೇ ಇಲ್ಲ.

ನನ್ನಂತೆ ಹಲವಾರು ಸುತ್ತಮುತ್ತಲಿನ ಊರುಗಳಿಂದ ಗ್ರಾಮೀಣ ವಲಯಗಳಿಂದ ದಿನನಿತ್ಯ ಜನ ಡಾಕ್ಟರರ ಬಳಿ ಬರುತ್ತಾರೆ. ಕೆ.ಆರ್.ನಗರ, ಕೆ.ಆರ್.ಪೇಟೆ, ಬೈಲಕುಪ್ಪೆ, ಹೀಗೆ ಬೇರೆ ಬೇರೆ ಊರುಗಳ ಬಾಧಿತರು ಡಾಕ್ಟರರ ಮೇಲೆ ವಿಶ್ವಾಸವಿಟ್ಟು ಬರುವುದನ್ನು ನಾನೇ ಕಣ್ಣಾರೆ ಕಂಡಿದ್ದೇನೆ. ಔಷಧಿ ಚೀಟಿ (ಪ್ರಿಸ್‌ಕ್ರಿಪ್ಷನ್) ಸಿದ್ಧವಾದ ಮೇಲೆ ಯಾವ ಕಾಯಿಲೆಗೆ ಯಾವ ಔಷಧಿ ನೀಡಲಾಗಿದೆ ಎಂದು ತಾಳ್ಮೆಯಿಂದ ವಿವರಿಸುವುದು. ಬೇರೆ ಕಡೆಯಲ್ಲಿ ಕಾಣಸಿಗದ ಒಂದು ದೃಶ್ಯವಾಗಿದೆ. ವೈದ್ಯರತ್ನರು ಸಹನಾಮೂರ್ತಿಯೂ ಹೌದು. ಹಿಂದಿನ ಬಾರಿಗಿಂತ ಆರೋಗ್ಯ ಉತ್ತಮವಿದ್ದರೆ ಮೆಚ್ಚುಗೆ ಸೂಚಿಸುವ ವೈದ್ಯರು ಏನಾದರೂ ಏರುಪೇರು (ವಿಶೇಷವಾಗಿ ತೂಕ ಹೆಚ್ಚಳ) ಇಂಥವು ಇದ್ದರೆ ಕಳವಳವನ್ನೂ ವ್ಯಕ್ತಪಡಿಸುವ ಅನುಭೂತಿ ಹೊಂದಿದ್ದಾರೆ.


ಮೈಸೂರಿನ ಹಲವು ಸಾರಸ್ವತ ಗಣ್ಯರು ತಮ್ಮ ಆರೋಗ್ಯ ಸುಸ್ಥಿತಿಗೆ ಡಾ. ವಿ ಲಕ್ಷ್ಮಿನಾರಾಯಣ ಅವರನ್ನು ಅವರನ್ನು ಅವಲಂಬಿಸಿದ್ದಾರೆ. ಟಿ.ವಿ.ವೆಂಕಟಾಚಲ ಶಾಸ್ತ್ರಿ, ಜಿ.ಎಚ್.ನಾಯಕ, ಮುಂತಾದವರ ಪರಿಚಯ ನನಗೆ ಡಾಕ್ಟರರ ಕ್ಲಿನಿಕ್ಕಿನಲ್ಲೇ ಆಗಿದೆ. ಎಸ್.ಎಲ್. ಭೈರಪ್ಪ, ಪ್ರಧಾನ ಗುರುದತ್ ಅವರುಗಳೂ ವೈದ್ಯಕೀಯ ಸಲಹೆಗಾಗಿ ಈ ಡಾಕ್ಟರರನ್ನು ಅವಲಂಬಿಸಿದ್ದಾರೆ.

ಡಾಕ್ಟರರ ಸಾಹಿತ್ಯ ಪ್ರೀತಿಯೂ ಅನನ್ಯ. ನಾನು ನನ್ನ ಕವನ ಸಂಕಲನ 'ಇಂದೂ ಇದ್ದಾರೆ' ಪ್ರತಿ ಅವರಿಗೆ ಕೊಟ್ಟಾಗ ತಕ್ಷಣ ಅವರು ಅದನ್ನು ಅವಲೋಕಿಸಿ ಹಲವು ಕವನಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು

ಡಾ. ಲಕ್ಷೀನಾರಾಯಣ ಅವರು ಕುವೆಂಪು ಅವರ ಅಂತ್ಯಕಾಲದಲ್ಲಿ ಹತ್ತು ವರುಷಗಳ ಕಾಲ ಅವರ ಖಾಸಗಿ ವೈದ್ಯರಾಗಿದ್ದರು. ಆ ಸಾಹಚರ್ಯವನ್ನು ಅವರು ಒಮ್ಮೊಮ್ಮೆ ಬಹಳ ಭಾವುಕವಾಗಿ ಸ್ಮರಿಸಿಕೊಳ್ಳುತ್ತಿದ್ದರು. ಕುವೆಂಪು ಇಳಿವಯಸ್ಸಿನಲ್ಲಿ ಅವರ ಅಪೇಕ್ಷೆಯಂತೆ ಕವಿಶೈಲ, ಹಿರೇಕೊಡಿಗೆ ಮುಂತಾದ ಸ್ಥಳಗಳನ್ನು ಹೆಲಿಕಾಪ್ಟರಿನಲ್ಲಿ ವೀಕ್ಷಿಸಲು ಸರಕಾರ ವ್ಯವಸ್ಥೆ ಮಾಡಿದ್ದಾಗ ವೈದ್ಯಕೀಯ ಸಹಾಯಕರಾಗಿ ಕುವೆಂಪು ಜತೆಗಿದ್ದರು. ಒಂದು ಸಾರಿ ಕುವೆಂಪು ಅವರ ಪುತ್ರಿ ತಾರಿಣಿ ಹಾಗೂ ಅಳಿಯ ಚಿದಾನಂದ ಡಾಕ್ಟರರ ಬಳಿ ಬಂದಿದ್ದಾಗ ಅವರನ್ನು ನನಗೆ ಪರಿಚಯಿಸಿದ್ದರು.

ದೂರದರ್ಶನ ವಾಹಿನಿಗಳಲ್ಲೂ ಡಾ. ವಿ.ಲಕ್ಷೀನಾರಾಯಣ ಅವರು ತಮ್ಮ ವೈದ್ಯಕೀಯ ಕ್ಷೇತ್ರದ ಅರಿವನ್ನು ಹಂಚಿಕೊಳ್ಳುವ ಮೂಲಕ ತಮ್ಮ ಸೇವಾವಲಯವನ್ನು ವಿಸ್ತರಿಸಿಕೊಂಡಿದ್ದಾರೆ. ಫೋನ್ ಇನ್ ಕಾರ್ಯಕ್ರಮಗಳಲ್ಲಿ ದೂರದೂರಿನ ವೀಕ್ಷಕರ ಆರೋಗ್ಯ ಕುರಿತ ಸಂದೇಹ, ಆತಂಕಗಳಿಗೆ ಶುದ್ಧ ಹಾಗೂ ಸರಳ ಕನ್ನಡದಲ್ಲಿ ಸಮಾಧಾನ ನೀಡುವ ಕ್ರಮ ಸಂತಸ ಮೂಡಿಸುತ್ತದೆ.

ಶಿಸ್ತಿನ ದಿನಚರಿ, ದಿನಂಪ್ರತಿ ವ್ಯಾಯಾಮ, ನಡಿಗೆ, ಈ ವಯಸ್ಸಿನಲ್ಲೂ ಸಮಯದ ಪರಿವೆ ಇಲ್ಲದೆ ರೋಗ ನಿರ್ಮೂಲನಕ್ಕಾಗಿ ಶ್ರಮಿಸುತ್ತಿರುವುದು ಇವೆಲ್ಲ ಡಾಕ್ಟರರ ಅನುಕರಣೀಯ ಗುಣಗಳಾಗಿವೆ.



ಎಂಬತ್ತರ ಏರುವಯಸ್ಸಿನಲ್ಲೂ ಕ್ರಿಯಾಶೀಲರಾಗಿ ತಮ್ಮ ವೃತ್ತಿಗೆ ಗೌರವ ಸಲ್ಲಿಸುತ್ತಿರುವ ಡಾ. ವಿ.ಲಕ್ಷ್ಮೀನಾರಾಯಣ ಅವರಿಗೆ ಜುಲೈ 23ರಂದು ಮೈಸೂರಿನಲ್ಲಿ ನಡೆದ ಅದ್ದೂರಿಯ ಸಮಾರಂಭದಲ್ಲಿ ಗೌರವ ಸಮರ್ಪಣೆ ಮಾಡಿ "ನಾರಾಯಣ ನಮನ" ಎಂಬ ಅಭಿನಂದನಾ ಗ್ರಂಥವನ್ನು ಸಮರ್ಪಿಸಲಾಯಿತು.

ಈ ಕೃತಿಯಲ್ಲಿ ವೈದ್ಯರ ಏಳುಬೀಳಿನ ಜೀವನಗಾಥೆ, ಆರೋಗ್ಯ ಕುರಿತಂತೆ ಅವರು ಬರೆದ ಲೇಖನಗಳು ಮತ್ತು ಅವರ ಅಭಿಮಾನಿ ವರ್ಗದ ಹಾರೈಕೆ, ಕೃತಜ್ಞತೆಗಳ ಮಹಾಪೂರಗಳು ತುಂಬಿವೆ. ಡಾ.ವಿ. ಲಕ್ಷ್ಮೀನಾರಾಯಣ ಅವರು ಇಂಥ ಮನ್ನಣೆಗಳಿಗೆ ಎಂದೋ ಅರ್ಹರಾಗಿದ್ದರು.

***



ಮೈಸೂರು ದಸರಾ ಎಷ್ಟೊಂದು ಸುಂದರ..

ಒಬ್ಬಂಟಿ

– ಪೋರ

ಇನ್ನು ಮುಂದೆ ಬೆತ್ತಲೆ ಹೊರನಡೆಯುವೆ
ಜಗವಿತ್ತ ವಸ್ತ್ರವಿನ್ಯಾಸಗಳ, ಸಕಲ ಸೌಭಾಗ್ಯಗಳ ಕಳಚಿ
ಗಂಧ, ತಿಲಕ, ವಿಭೂತಿ ಶೃಂಗಾರಗಳ ವರ್ಜಿಸಿ
ನಗೆ, ಲಜ್ಜೆ, ಕೋಪ ನಿರಾಕರಿಸಿ

ಕಿರೀಟ, ಎದೆಗವಚ, ಬೂಟು, ಕೈಯ್ಯ ಕತ್ತಿ, ಹಣೆಪಟ್ಟಿ ಭಾರ ಇಳಿಸಿ
ಅಗಣಿ ತೆರೆದು ಹೊರಗೆ ಹೆಜ್ಜೆ ಇರಿಸಿ
ನೆನ್ನೆಗಳ ಗುಡಿಸಿ ಸಾರಿಸಿ
ಬೆನ್ನೇರುವ ಗಿಳಿ ಪಾರಿವಾಳಗಳ ಬದಿಗೆ ಸರಿಸಿ
ಹಗುರಾಗುವೆ

ಎಡಬಲ ಎರಗದೆ ನಡೆವೆ ಸುಮ್ಮನೆ ಗುರುತಿಲ್ಲದೂರಲ್ಲಿ
ಒದರುವೆ ಚಪ್ಪಾಳೆಯ ಜನ ಇಲ್ಲದ ಸಭೆಯಲ್ಲಿ
ಟೇಬಲ್ಲ ಮೇಲೆ ಕರುಳ ಹರವಿಟ್ಟು ಸೋಂಕಿಲ್ಲವೆಂದು ಖಾತರಿಗೊಟ್ಟು
ಹೃದಯದ ಕಪಾಟುಗಳನ್ನೆಲ್ಲ ತೆರೆದಿಟ್ಟು, ಖಾಲಿಯಿಟ್ಟು
ತೊಗಲಿನ ಬಣ್ಣವನ್ನೂ ಅಳಿಸಿ
ಬೆಟ್ಟ ಹತ್ತಿ ದಿಕ್ಕುಗಳ ಹೊದ್ದು ನಿಂತು
ಬಯಲಾಗುವೆ

ಮತ್ತೇನಾದರು ತಗಾದೆ ಇದ್ದರೆ ಹೇಳಿ
ಅದನೂ ಮಾಡುವೆ
*
ಹೀಗೆಂದವ ಇಂದು
ದೊಡ್ಡ ಪ್ರವಾದಿ
ಸರ್ವಸಂಗತ್ಯಾಗಿಗೆ
ಕಾವಿಯ ಅಂಗಿ
ಅರಮನೆಯಂತಹ ಮಠ
ಸೇವೆಗೆ ಸುರಸುಂದರಿಯರ ಹಠ
ಸಕಲರ ಪೊರೆವ ಗುರು
ನಡೆದಾಡಲು ಕಾರು

ಅದ್ದೂರಿ ಅವನ ಜಯಂತಿ
ಬಿಟ್ಟೆನೆಂದರೂ ಬಿಡದ ಮಾಯೆ
ಬೆನ್ನಿಗಂಟಿ
ಸಿದ್ಧಾಂತ ಈಗ ಒಬ್ಬಂಟಿ!

***

ಬೊಂಬೆಗಳು ನಕ್ಕಾಗ

– ಅನ್ನಪೂರ್ಣ ಸುಬ್ಬರಾವ್



ನವರಾತ್ರಿ ಹಬ್ಬ ಅಂದ್ರೆ ಅಮ್ಮನದೇ ನೆನಪು.

ನಾವು ಚಿಕ್ಕವರಿದ್ದಾಗ ಪಟ್ಟಂತಹ ಹಬ್ಬದ ಸಡಗರ ಸಂಭ್ರಮ ಈಗ ಹಸಿ ಹಸಿ ನೆನಪಷ್ಟೇ..!!

ಹಬ್ಬ ಇನ್ನೂ ಒಂದು ವಾರ ಇದೆ ಎನ್ನುವಾಗಲೇ ನಮಗಿಂತ ಸಡಗರ ಅಮ್ಮನಿಗೆ. ನನಗೆ, ನನ್ನ ತಂಗಿಗೆ ಬಣ್ಣಬಣ್ಣದ ಚೀಟಿ ಬಟ್ಟೆಯಲ್ಲಿ ಹೊಸ ಲಂಗ ಹೊಲಿಸಿ ಬಣ್ಣಬಣ್ಣದ ಬಳೆಗಳನ್ನು ತೆಗೆದಿಡುತ್ತಿದ್ದಳು. ಸಣ್ಣ ಕುಡಿಕೆಗಳಲ್ಲಿ ಮರಳು ತುಂಬಿ, ನೀರು ಚಿಮುಕಿಸಿ, ಆದರಲ್ಲಿ ರಾಗಿ ಹಾಕಿ, ಮೊಳಕೆ ಬರಿಸಿ, ಉದ್ದುದ್ದ ಹಚ್ಚ ಹಸಿರಿನ ಪೈರನ್ನು ಬೆಳೆಸಿ ತಯಾರಿ ಮಾಡಿಟ್ಟು ಕೊಳ್ಳುತ್ತಿದ್ದಳು. ನನ್ನನ್ನು ಅಟ್ಟದ ಮೇಲೆ ಹತ್ತಿಸಿ, ಮೇಲಿದ್ದ ಮರದ ಪೆಟ್ಟಿಗೆಯ ಸಮೇತ ನನ್ನನ್ನು ಕೆಳಗಿಳಿಸಿಕೊಂಡು ಪೆಟ್ಟಿಗೆಯಲ್ಲಿ ಮಲಗಿದ್ದ ಬೊಂಬೆ ಗಳನ್ನೆಲ್ಲ ಎಬ್ಬಿಸಿ, ಕೆಲವಕ್ಕೆ ಸ್ನಾನ ಮಾಡಿಸಿ ಹೊಸ ಬಟ್ಟೆಗಳನ್ನು ಹಾಕಿದರೆ, ಇನ್ನೂ ಕೆಲವಕ್ಕೆ ಬಣ್ಣದ ಕಾಗದದಲ್ಲಿ ಸೀರೆ ಉಡಿಸಿ, ಬಿಳಿ ಜುಬ್ಬ, ಪಂಚೆ, ಪ್ಯಾಂಟು ಹಾಕಿ, ತಲೆಗೆ ಟೋಪಿಯನ್ನೂ ಇಡುತ್ತಿದ್ದಳು. ಕೈಗೆ ಮಣಿಗಳ ಬಳೆ, ಸರ, ಬೈತಲೆ ಬೊಟ್ಟು, ಕಿವಿಗೆ ಬಿಳಿ ಹರಳಿನ ಸುನೇರಿ ಪೇಪರಿನ ಓಲೆ ಹಾಕಿ ಅಲಂಕಾರ ಮಾಡಿಬಿಟ್ರೆ ಕಿಲಕಿಲ ನಗುತ್ತಾ ಕೂತು ಬಿಡ್ತಿದ್ವು. ನಿಜಕ್ಕೂ ಬೊಂಬೆಗಳು ಅದೆಷ್ಟು ಪುಣ್ಯ ಮಾಡಿದ್ವೋ..? ಅಮ್ಮನ ಕೈಲಿ...

ಹಂತ ಹಂತಗಳಲ್ಲಿ ಪೆಟ್ಟಿಗೆಗಳನ್ನು ಜೋಡಿಸಿ, ಆದರ ಮೇಲೆ ಬಿಳೀ ಬಟ್ಟೆಯನ್ನು ಹಾಕಿ, ಮೇಲಿನ ಹಂತದಲ್ಲಿ ಮಧ್ಯದಲ್ಲಿ ಪಟ್ಟದ ಬೊಂಬೆಗಳನ್ನು, ಕಲಶ ಕನ್ನಡಿಯನ್ನೂ ಇಟ್ಟು, ಉಳಿದ ಬೊಂಬೆಗಳನ್ನು ಅಕ್ಕಪಕ್ಕದಲ್ಲಿ, ಕೆಳಗಿನ ಹಂತದಲ್ಲಿ, ನೀಟಾಗಿ ಜೋಡಿಸುತ್ತಿದ್ದಳು. ಆಗಿನ ಕಾಲಕ್ಕೆ ರಾಮಾಯಣ, ಮಹಾಭಾರತ, ಚಂದ್ರಯಾನ, ಹೀಗೆ ಹೊಂದಿಸಿ, ಥೀಮ್ ಪ್ರಕಾರ ಜೋಡಿಸುವುದು ಅಷ್ಟು ಗೊತ್ತಿರ್ಲಿಲ್ಲ. ಪಟ್ಟದ ಬೊಂಬೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ. ಅವಕ್ಕೆ ಎಲ್ಲಿಲ್ಲದ ಅಲಂಕಾರ. ಅವೇ ಅಲ್ಲಿನ ಕೇಂದ್ರ ಬಿಂದು.

ಪಾಡ್ಯದಿಂದ ಶುರುವಾದ ಹಬ್ಬ ನವಮಿಯ ಹತ್ತು ದಿನಗಳೂ ಹಬ್ಬ. ಸಂಜೆ ಹೊಸ್ತಿಲ ಪೂಜೆ, ವಿಶೇಷ ತಂಗಡಿ ಹೂವು ಹಾಕುವುದು. ದಿನಕ್ಕೊಂದು ತಿಂಡಿ ಮಾಡಿ, ಅದರಲ್ಲೂ, ಪುಟ್ಟದಾಗಿ ಚಕ್ಕುಲಿ, ಪುಟ್ಟ ಕೋಡುಬಳೆ, ಪುಟ್ಟ ಮಿಠಾಯಿ, ಪುಟ್ಟ ದೋಸೆ, ಪುಟ್ಟ ಎರೆಯಪ್ಪ, ಪುಟ್ಟ ಬೊಂಬೆ ಬಿಸ್ಕತ್ತು, ಪೆಪ್ಪರಮೆಂಟು, ಹೀಗೇ ಮಕ್ಕಳನ್ನೆಲ್ಲ ಕರೆದು ಹಂಚುತ್ತಿದ್ಲು. ನಾವೂ ಪುಟ್ಟ ಡಬ್ಬಿಗಳನ್ನು ಹಿಡ್ಕೊಂಡು ಬೇರೆಯವರ ಮನೆಗಳಿಗೆ ಹೋಗಿ ಬೊಂಬೆ ಬಾಗಿನ ತಂದು ಏನೇನು

ಕೊಟ್ಟಿದ್ದಾರೆ ಎಂದು ನೋಡುವ ಕುತೂಹಲ..!! ಎಲ್ಲರ ಮನೆಯಲ್ಲಿ ಕೊಟ್ಟದ್ದನ್ನೂ ಒಂದೇ ಡಬ್ಬಿಗೆ ತುಂಬಿಕೊಂಡು ಬಂದು ಮನೆಯಲ್ಲಿ ತೆಗೆದು ನೋಡುವಷ್ಟರಲ್ಲಿ ಅದು ರಸಾಯನ ಆಗಿರುತ್ತಿತ್ತು. ಅದರಲ್ಲೂ ಎಂಥಾ ರುಚಿ ಅಂದ್ರೇ.. ಆಹಾ...!!

ಸರಸ್ವತಿ ಪೂಜೆಯ ದಿನ ನನ್ನ ಪುಸ್ತಕ ಇಡ್ತೀನಿ, ನನ್ನ ಪುಸ್ತಕ ಇಡ್ತೀನಿ ಅಂತ ಕಿತ್ತಾಡಿಕೊಂಡು, ಕೊನೆಗೆ ಜಗಳ ಕೇಳಲಾರದೆ ಇಬ್ಬರ ಪುಸ್ತಕವನ್ನೂ ಇಟ್ರೆ, ಯಾಕೆ ಕಿತ್ತಾಡ್ತೀರ ಅಂತ ಅಮ್ಮನ ಕೈಲಿ ಬೈಸಿಕೊಂಡು, ಇಟ್ಟು ಪೂಜೆ ಮಾಡ್ತಿದ್ವಿ. ಅವತ್ತು ಸಿಹಿದೋಸೆ, ನುಚ್ಚಿನುಂಡೆ. ಪುಟ್ಟ ಪುಟ್ಟ ಸಿಹಿ ದೋಸೆ, ಪುಟ್ಟ ನುಚ್ಚಿನುಂಡೆ ಡಬ್ಬಿ ತುಂಬುತ್ತಿತ್ತು. ನವಮಿಯ ದಿನ ಆಯುಧ ಪೂಜೆ, ಗಂಡುಮಕ್ಕಳ ಹಬ್ಬ. ಮಗನಿಗೆ ಮಹಾ ನವಮಿ, ಅಳಿಯನಿಗೆ ದೀಪಾವಳಿ ಅಂತ ಹೇಳಿ ಗಂಡಸರಿಗೆ ಎಣ್ಣೆ ನೀರು ಹಾಕಿ ಒಬ್ಬಟ್ಟು ಮಾಡುತ್ತಿದ್ದಳು ಅಮ್ಮ. ಚಾಕು, ಕತ್ತರಿ ಈಳಿಗೆ ಮಣೆಗೆ ಪೂಜೆ. ಸೈಕಲ್ಗೆ ಸ್ನಾನ, ಗಂಧ, ಹೂವಿನಹಾರದ ಅಲಂಕಾರ ಮಾಡಿ, ಅಣ್ಣನ ಜೊತೆ ಜಂಬೂಸವಾರಿ ಮಾಡೋದು ಅಂದ್ರೆ ಎಲ್ಲಿಲ್ಲದ ಖುಷಿ.



ಆಯುಧ ಪೂಜೆ ದಿನ ರೈತರು ವ್ಯವಸಾಯದ ಪರಿಕರ, ನೇಗಿಲು, ನೊಗ, ಹೆಂಟೆ, ಕುಂಟೆ, ಇವಕ್ಕೆಲ್ಲ ಪೂಜೆ ಮಾಡಿ, ಎತ್ತುಗಳಿಗೆ ಮೈತೊಳೆದು ಅಲಂಕಾರ, ಕೊಂಬಿಗೆ ಬಣ್ಣ, ಗೆಜ್ಜೆ, ಕಾಲಿಗೆ ಗೆಜ್ಜೆ, ಬಣ್ಣ ಬಣ್ಣದ ಸೀರೆ ಎತ್ತಿನ ಭುಜ ಅಲಂಕರಿಸಿಕೊಂಡು, ಬಾಳೆ ಕಂದು , ಮಾವಿನ ಸೊಪ್ಪು, ಕಟ್ಟಿಕೊಂಡ ಕಮಾನು ಗಾಡಿಯಲ್ಲಿ ಕೇರಿಯ ಮಕ್ಕಳನ್ನೆಲ್ಲ ತುಂಬಿಕೊಂಡು ಸಂಜೆಯ ಹೊತ್ತಿಗೆ ಜಂಬೂಸವಾರಿ ಹೊರಡುತ್ತಿತ್ತು. ಎತ್ತಿನ ಗಾಡಿ, ಜಂಬೂಸವಾರಿ ಆಸೆ, ಮನೆಯಲ್ಲಿ ಯಾರಿಗೂ ಹೇಳದೆ ಕೇಳದೆ, ಮಕ್ಕಳ ಜೊತೆಯಲ್ಲಿ ನಾನು ನನ್ನ ತಂಗಿ ಇಬ್ಬರೂ ಹೊರಟೇಬಿಟ್ವಿ. ಮಕ್ಕಳ ಕೇಕೆ, ಕೂಗಾಟ, ಗಾಬರಿಗೆ ಎತ್ತುಗಳ ಓಟ, ನಾಮುಂದು, ತಾಮುಂದು ಅಂತ ಪೈಪೋಟಿಯಲ್ಲಿ ಹುಚ್ಚೆದ್ದು ಓಡಿ ಒಂದಕ್ಕೊಂದು ಡಿಕ್ಕಿ ಹೊಡೆದು, ನಾವಿದ್ದ ಗಾಡಿಯ ಎತ್ತುಗಳು, ಗಾಡಿಯನ್ನು ಎಳೆದುಕೊಂಡು ಹೋಗಿ ಹಳ್ಳದಲ್ಲಿ ಮಗುಚಿಕೊಂಡಿತ್ತು. ಮನೆಗೆ ಬರುವುದು ತಡವಾಗಿ, ನಡೆದ ಘಟನೆ ಮನೆಯವರಿಗೆ ತಿಳಿದದ್ದೇ ತಡ, ಅಟ್ಟದ ಮೇಲಿಂದ ಬಿದ್ದವರನ್ನು ದೊಣ್ಣೆ ತಗೊಂಡು ಹೆಟ್ಟಿದ್ರು ಅನ್ನೋಹಾಗೇ, "ಹೇಳದೆ ಕೇಳದೆ ಹೋಗ್ತೀರಾ..? ಏನಾದ್ರು ಹೆಚ್ಚು ಕಮ್ಮಿ ಆಗಿದ್ರೆ ಏನೇ ಮಾಡ್ತಿದ್ರಿ ಗಂಡು ಬೀರಿಗಳಾ..!!" ಅಂತ ಬೆನ್ನಮೇಲೆ ದಬದಬ ಬಿದ್ದವು ಏಟುಗಳು. ನಮಗೆ ಬಿದ್ದ ಏಟುಗಳನ್ನು ನೋಡುತ್ತ ಕೂತಿದ್ದ ಬೊಂಬೆಗಳು ಕಿಸಕ್ಕನೆ ನಕ್ಕ ಹಾಗಾಯ್ತು.

ನವರಾತ್ರಿ, ಬೊಂಬೆ ಹಬ್ಬದ ಮಹತ್ವಕ್ಕಿಂತ ಬೊಂಬೆ ಬಾಗಿನ, ತರತರಹದ ತಿಂಡಿ ಸಿಗುವುದಲ್ಲ ಎನ್ನುವುದಷ್ಟೇ ಆಗಿನ ನಮ್ಮ ಖುಷಿ. ಅಂದಿನ ಬೊಂಬೆ ಹಬ್ಬದ ನೆನೆಪು ಎಂದಿಗೂ ಮರೆಯದ ಹಸಿರಾದ ನೆನಪು.

ಈಗಿನ ಮಕ್ಕಳು ಇದೆಲ್ಲದರಿಂದ ವಂಚಿತರು ಅನ್ನುವುದು ಮಾತ್ರ ನಿಜಕ್ಕೂ ಬೇಸರದ ಸಂಗತಿ.

***

ಅಣುಕುವಾಡದ ಸಂತೆ

– ಬೆಂ.ಶ್ರೀ. ರವೀಂದ್ರ

ಎದೆಭಾರವಾಗುವ ತನಕ
ಎದೆ ಇರುವುದು ತಿಳಿದೇ ಇರಲಿಲ್ಲ
ಈಗ ಎದೆ ಭಾರವಾಗಿದೆ
ತಂತಾನೆ ಆಡುತ್ತಿದ್ದ ಉಸಿರೂ ಕಷ್ಟವೆಂದರಿವಾಗುತ್ತಿದೆ
ಸರಾಗದ ಸರಿದಾರಿಗೆ ಸಿಂಬಳ ಗೋಡೆ ಕಟ್ಟಿದೆ

ಎದೆಯ ರವಕೆ ಅಂದು ಕಿವಿಯಿತ್ತಿದ್ದರೆ
ಇಂದು ಕೇಳುತ್ತಿರಲಿಲ್ಲವೆನೋ
ಟುಂಯ್.. ಟುಂಯ್.... ರಾಗ
ಬದುಕು ಆಗುತ್ತಿತ್ತು ಸರಾಗ
ಈಗ ಗುಳಿಗೆಗಳ ಮೇಲೆ ಗುಳಿಗೆಗಳು
ಬೇಕು ಮತ್ತಷ್ಟು ಚುಚ್ಚುಮದ್ದು
ವೈದ್ಯರು ಸರ್ಜರಿಯನ್ನೇ ಮಾಡುವರೇನೋ

ಕಣ್ಣಿಗೆ ಕಾಣದ ಹೊಸ ವೈರಾಣುಗಳಗೀಗ ಸುಗ್ಗಿ
ಗುಂಡಿನ ಮೇಲೆ ಗುಂಡು ಹಾರಿಸುತ
ಹೆಣಗಳ ಮೇಲೆ ಹೆಣಗಳ ಪೇರಿಸುತ
ಮಸಣದಲನ್ನವ ಬೇಯಿಸುತ್ತಿವೆ
ಅನ್ನದಗುಳಗಡೆಯಲ್ಲಿ ರಾಕೆಟ್ಟುಗಳ
ಸಮಾರಾಧನೆ ಅವ್ಯಾಹತ
ಹಿಂಗದ ಹಸಿವು ಮಂಗ ಮಾಡುವ ಮೋಜು
ಶಾಂತಿ ಮಂತ್ರದ ಘೋಜು
ಹಿಂಸಾ ವಿನೋದದ ಹಸಿಹಸಿ ಭಾವಗಳ ಗೋಜು

ಇತಿಹಾಸವನಗೆದು ಅಗೆದು
ಇಲ್ಲದ್ದು ಬರೆ ಎಳೆದು
ಸತ್ಯಾಸತ್ಯತೆಯಲಿ ಹೆಣೆದ ಹಾಲು ಜೇನಿನ
ಕಥನವನು ಹಾಡಿದ್ದೇ ಹಾಡಿದ್ದು

ಅವರವರ ತರ್ಕವನು ತಕ್ಕಡಿಯಲಿ
ಅವರವರ ತ್ರಾಸಿಗೆ ತುಂಬಿ
ಹೆಚ್ಚೇ ಕೊಟ್ಟಿದ್ದೇವೆ ಹುಚ್ಚು ಮಂದಿ
ಅವರೆಂತು ಮಾಡುತಿಹರು ನೋಡಿ
ಇದು ನ್ಯಾಯವಾ ಅನ್ನುವರು

ಯಾರಿಗೆ ಸೇರಿದೆ ಈ ನೆಲವು
ಗಡಿಗೆ ಅಡಿಗಡಿಗೆ ಬೇಲಿಯ ಹೆಣೆದು
ಈ ಭುವಿಯು ನನ್ನದೆನ್ನುತ
ಅಸ್ಮಿತೆಯ ಬೆಳಗೆನ್ನುತ ಸ್ಮಿತೆಯ ಕತ್ತಲು ಮಾಡಿ
ದಾಂಗುಡಿ ಇಡುವವರೆ ಏನನ್ನು ಗೆದ್ದಿರಿ

ನೆಲೆ
ಕಳೆದುಕೊಂಡವರಾರು ಕಂಡುಕೊಂಡವರಾರು
ರಣ್ಯವೀಳ್ಯವನಿತ್ತವರಾರು ಅಬ್ಬೆಪಾರಿಗಳೇ
ಪಾರಿವಾಳಗಳ ನಡುವೆ ರಣಹದ್ದನ್ನು
ಛೂ ಬಿಡುವ ವ್ಯಾಪಾರಿಗಳೇ
ಮುಗ್ದರಕ್ತದಲಿ ಕಲಸಿ ಮಣ್ಣನ್ನು
ಮಹಲು ಕಟ್ಟುವ ಬಯಕೆ ತೀರದ ದಾಹ
ಈಗ ಒಡಕು ಕಲ್ಲು ಮಣ್ಣು ಕಬ್ಬಿಣಗಳ ಕಾಂಕ್ರೀಟು

ಕೀವ್, ಟೆಲ್ ಅವೀವ್, ಬೆಜಿಂಗ್, ವಾಷಿಂಗ್ಟನ್
ಕೆಂಪು ಚೌಕಗಳ ನಾಟೋ ಪಾಟೋಗಳ
ಸರದಾರೇ ನಿಮ್ಮ ಶತರಂಜದಲಿ
ಆಫ್ಘನ್ನು ಸಿರಿಯಾ ಲೆಬನಾನು ವಿಯಟ್ನಾಮು
ಲಾಡೆನ್ನು... ಹಮಾಸು ಹೆಜಬುಲ್ಲ

ಕಾಲಾಳುಗಳ ಭಂಜಿಸಿ ಆಡುವ
ಶಾಂತಿ ನುಡಿಕಟ್ಟುಗಳಲಿ ಏನು ಕಟ್ಟಿದಿರಿ
ದ್ವೇಷದರಮನೆಯ ಸುಡುಗಾಡು ಸಂತರೇ
ಮತ್ತೇನಿಹುದು ನಿಮ್ಮ ಮಾಯಾ ಜೋಳಿಗೆಯಲ್ಲಿ

ಎದೆಯಿರುವುದೀಗ ತಿಳಿದಿದೆ
ಆದರೆ ನನ್ನೆದೆಯಾಗಿ ಅದು ಉಳಿದಿಲ್ಲ
ಯಾರೋ ಒತ್ತುತ್ತಿರುವ ತಿದಿಯಿಂದ
ಬೆಂಕಿಯುಗುಳಿ ಕಲಾಯಿಮಾಡುತ್ತಿದೆ.

ಯಾರಿಗೆ ಬೇಕು ನಿಮ್ಮ ಧರ್ಮ ಸಾಮ್ರಾಜ್ಯ
ಉಸಿರಿನಲ್ಲಿಲ್ಲದ ಸಿರಿ
ಇರುವುದೇನು ಕನಸ ಬಸಿರಿನಲಿ
ಇಲ್ಲಿಲ್ಲದ ಸ್ವರ್ಗ ಅಲ್ಲೆಲ್ಲಿ ಇದ್ದೀತು
ಬಿಟ್ಟುಬಿಡಿ ನಮ್ಮನ್ನು ನಮ್ಮಂತೆ
ಸಾಕು ನಿಮ್ಮ ಅಣುಕುವಾಡದ ಸಂತೆ.

***

ನಳಿನೀ ದಳಗತ ಜಲಮತಿ ತರಳಂ

(ತಾವರೆ ಎಲೆಯ ಮೇಲಿನ ನೀರಹನಿಗಳಂತೆ ಅಸ್ಥಿರವಾದದ್ದು)

– ಟಿ. ಎಸ್. ಶ್ರವಣಕುಮಾರಿ

ಹಿಂದಿನ ಬರೆಹದ ಕಡೆಯ ಸಾಲುಗಳು: ನನಗಿಂತ ಮುಂಚಿತವಾಗಿ ಯಮದೂತರು ಓಡಿಹೋಗಿ ನನ್ನ ಹಾಸಿಗೆ ಪಕ್ಕ ವಿರಾಜಮಾನರಾಗಿ ನನಗಾಗಿ ಕಾಯುತ್ತಿದ್ದರು. 'ಇನ್ನೂ ನನ್ನ ಆಟ ಮುಂದುವರೆಸುತ್ತಿದ್ದೇನೆ. ಸೋತು ಬಿಟ್ಟುಕೊಟ್ಟಿಲ್ಲ' ಎಂದೆ ಅವರಿಗೆ. 'ನೋಡೋಣ ಎಲ್ಲಿಯವರೆಗೆ ನಿನ್ನ ಆಟ' ಎಂದು ನಕ್ಕರು. 'ನನ್ನ ಉಸಿರಿರುವವರೆಗೂ ನಾನೇ ಗೆಲ್ಲುತ್ತಿರುತ್ತೇನೆ. ನಿಂತ ನಂತರ ನಿನ್ನದೇ ಗೆಲುವಾದರೇನು; ಸೋಲು ನನಗೆ ತಿಳಿಯುವುದಿಲ್ಲವಲ್ಲ' ಎಂದು ನಕ್ಕೆ.

*

ನಾನು ವೆಂಟಿಲೇಟರ್ ಮೇಲಿದ್ದೇನೆಂದಾದ ತಕ್ಷಣ ನನ್ನಂತೆಯೇ ನನ್ನನ್ನು ಬಲ್ಲ ಎಲ್ಲರಿಗೂ 'ಇದು ಇನ್ನು ದಿನಗಳನ್ನೆಣಿಸುವ ಜೀವ' ಎನ್ನಿಸಿಬಿಟ್ಟಿತೋ ಏನೋ, ಒಂದು ಸಲವಾದರೂ ನನ್ನನ್ನು ನೋಡಿಕೊಂಡು ಹೋಗಬೇಕೆಂದು ಬರತೊಡಗಿದರು. ಆದರೆ ದ್ವಾರಪಾಲಕ ಬಿಡಬೇಕಲ್ಲ! 'ಒಂದು ದಿನದಲ್ಲಿ ಮನೆಯವರು ಇಬ್ಬರಿಗೆ ಮಾತ್ರಾ ಅವಕಾಶ' ಎಂದು ಅವನು ಠರಾವು ಹೊರಡಿಸಿಬಿಟ್ಟಿದ್ದ. ವಿಷಯ ತಿಳಿದು ಊರಿಂದ ಓಡೋಡಿ ಬಂದು, ದ್ವಾರಪಾಲಕನಿಗೆ ಉದ್ದಂಡ ನಮಸ್ಕಾರ ಮಾಡಿ, ಅವನ ಕರುಣೆ ಗಿಟ್ಟಿಸಿ ಒಳಬಂದ, ನನ್ನನ್ನು ತುಂಬಾ ಹಚ್ಚಿಕೊಂಡಿದ್ದ ಮೈದುನನಿಗೆ ನನ್ನ ಅವಸ್ಥೆಯನ್ನು ನೋಡಿ ಮಾತೇ ಹೊರಡಲಿಲ್ಲ. ಅವನ ಕಣ್ಣುಗಳಲ್ಲಿ ಮಡುಗಟ್ಟಿದ್ದ ನೋವು, ಹತಾಶೆ ನನ್ನ ಕಣ್ಣೊಳಗಿಳಿಯಿತು. ಒಬ್ಬರನ್ನೊಬ್ಬರು ನೋಡುತ್ತಿದ್ದೆವಷ್ಟೇ!

ಹದಿನೈದು ವರ್ಷಗಳಿಂದ ನನ್ನನ್ನು ಆಫೀಸಿಗೆ ಕರೆದೊಯ್ದು ಕರೆತರುತ್ತಿದ್ದ ನನ್ನ ಚಾಲಕ ಶಿಷ್ಯ ಎರಡು ಮೂರು ದಿನ ಬಂದು ಅವಕಾಶ ಸಿಗದೆ ಹಾಗೆಯೇ ಹಿಂತಿರುಗಿದ್ದ. ನಾಲ್ಕನೆಯ ದಿನ ಮನೆಯವರೂ ದ್ವಾರಪಾಲಕನೊಂದಿಗೆ ಶಿಫಾರಸ್ಸು ಮಾಡಿ ಅಂತೂ ಒಂದು ವೈಲ್ಡ್ ಕಾರ್ಡ್ ಎಂಟ್ರಿ ಗಿಟ್ಟಿಸಿಕೊಂಡು ಒಳಬಂದವನಿಗೆ 'ನಾನಿನ್ನು ಅಷ್ಟೇ…' ಎನ್ನಿಸಿಬಿಟ್ಟಿತೋ ಏನೋ. ಒಂದಷ್ಟು ಹೊತ್ತು ನನ್ನೆದುರು ಅಳುತ್ತಲೇ ನಿಂತುಬಿಟ್ಟ. ದಾದಿ ಬಂದವಳೇ "ಹೀಗೆಲ್ಲಾ ಇಲ್ಲಿ ಅಳಬಾರ್ದು, ನೋಡಿದ್ದಾಯ್ತಲ್ಲ; ಹೊರಡಿ ಇನ್ನು" ಎಂದು ಅವನನ್ನು ಕಳಿಸಬೇಕಾಯಿತು. ಅವನು ಹೋಗಿ ನನ್ನ ಆತ್ಮೀಯ ಸ್ನೇಹಿತೆಯೊಂದಿಗೆ ಏನು ಹೇಳಿದನೋ ಮರುದಿನ ಸಂಜೆ ಅವಳು ಬಾಗಿಲಲ್ಲಿ ನಿಂತು "ನಾನು ಒಂದೆರೆಡು ನಿಮಿಷಗಳಾದರೂ ನೋಡಿಯೇ ಹೋಗಬೇಕು" ಎಂದು ಹಟಹಿಡಿದು ಅಳುತ್ತಾ ನಿಂತೇಬಿಟ್ಟಳು. ಅಲ್ಲಿದ್ದ ನನ್ನ ಮಗಳೂ ಅವಳ ಪರ ವಕಾಲತ್ತು ವಹಿಸಿ ಅಂತೂ ಬಿಡಿಸಿಕೊಟ್ಟ ಮೇಲೆ ನನ್ನ ಬೆಡ್ಡಿನ ಬಳಿ ಬಂದವಳೇ ಅಳುತ್ತಿದ್ದರೂ ಏನೋ ಭರವಸೆಯಿಂದ "ನಿಮಗೇನೂ ಆಗಲ್ಲ; ನಾನು ಬಾಬಾನನ್ನು ಬೇಡಿಕೊಂಡಿದೀನಿ. ಅವರು ಖಂಡಿತಾ ನಿಮ್ಮನ್ನು ಕಾಪಾಡ್ತಾರೆ. ನೀವು ಮನೆಗೆ ಬರೋವರ್ಗೂ ನಾನು ದಿನವೂ ಬಾಬಾ ಟೆಂಪಲ್‌ಗೆ ಹೋಗಿಬರ್ತೀನಿ. ನೀವು ಧೈರ್ಯವಾಗಿರಿ" ಎಂದಾಗ ಅವಳ ನಿರ್ವ್ಯಾಜ್ಯ ಅಂತಃಕರಣಕ್ಕೆ ನನ್ನ ಹೃದಯ ದ್ರವಿಸಿಹೋಯಿತು. ದಾದಿಯ ಕಣ್ಣುತಪ್ಪಿಸಿ ಬಾಬಾನ ಉದಿಯನ್ನೊಂದು ಚಿಟಿಕೆ ನನ್ನ ಹಣೆಯ ಮೇಲಿರಿಸಿದಾಗ ಅವಳ ಮುಖ ನಗುತ್ತಿತ್ತು; ಕಣ್ಣು ಅಳುತ್ತಿತ್ತು… ಕಣ್ಣೀರಿಗೆ ಕಣ್ಣೀರೇ ಕೊಡುಗೆ ತಾನೇ! ನನ್ನ ಕಣ್ಣಲ್ಲೂ ನೀರು ಜಿನುಗಿತು. ನನ್ನ ಕೈಗಳನ್ನು ಕಣ್ಣಿಗೊತ್ತಿಕೊಂಡು ಅವಳು ಹೊರಟಾಗ ಏನೋ ಭರವಸೆ ನನ್ನೆದೆಯನ್ನೂ ತುಂಬಿತ್ತು.

ಎಲ್ಲರೂ ಬಂದರು… ಬರುತ್ತಿದ್ದರು… ಆದರೆ ನಾನು ಅವನೊಬ್ಬನಿಗಾಗಿ ಕಾಯುತ್ತಿದ್ದೆ. ನನಗಿಂತ ಎರಡೂವರೆ ವರ್ಷಕ್ಕೆ ಹಿರಿಯನಾಗಿದ್ದು ನಾನು ಈ ಪ್ರಪಂಚದಲ್ಲಿ ಕಣ್ಣು ಬಿಟ್ಟಾಗಿನಿಂದ 'ಇದು ಆಕಾಶ, ಇದು ಹಕ್ಕಿ, ಇದು ಗಿಡ, ಮರ,

ಹೂವು...' ಎಂದು ಇಡೀ ಪ್ರಪಂಚವನ್ನೇ ತನ್ನ ಕಣ್ಣಲ್ಲಿ ನನಗೆ ತೋರಿಸಿದ್ದ, ಕೈಹಿಡಿದು ನಡೆಸಿದ್ದ, ಪ್ರೀತಿಯ ಸಾಕಾರವಾಗಿದ್ದ ಅಣ್ಣನನ್ನು ಒಂದು ಸಲವಾದರೂ ನೋಡಬೇಕು ಎಂದು ನನ್ನ ಹೃದಯ ಹಂಬಲಿಸುತ್ತಿತ್ತು. ಯಾರು ಸುಳಿದಾಡಿದರೂ ಅವನೇ ಬಂದನೇನೋ ಎಂದು ಕತ್ತೆತ್ತಿ ನೋಡುತ್ತಿದ್ದೆ. ಅವನನ್ನು ನೋಡದೆ ನಾನು ಸತ್ತೇ ಹೋದರೆ... ಎಂದನ್ನಿಸಿದ್ದು ಎಷ್ಟು ಸಲವೋ!! ದಿನವೂ ತಪ್ಪದೆ ಬರುತ್ತಿದ್ದ ತಂಗಿ, ಅವನು ಫೋನ್ ಮಾಡಿ ವಿಚಾರಿಸಿ ಕೊಳ್ಳುತ್ತಿದ್ದುದನ್ನು ಹೇಳುತ್ತಿದ್ದಳು. ಆದರೂ ಎದುರು ನೋಡಿದಾಗ ಸಿಗುವ ಸಮಾಧಾನವೇ ಬೇರೆಯಲ್ಲವೇ. ನಾನು ಕಾಯುತ್ತಲೇ ಇದ್ದೆ... ಏನು ಕಾರಣವೋ ಕಡೆಗೂ ಅವನು ಬರಲಿಲ್ಲ! ನಾನು ಸಾಯಲೂ ಇಲ್ಲ!!

ಆರು ದಿನಗಳ ನಂತರ ವೆಂಟಿಲೇಟರ್ ತೆಗೆದಾಗ 'ಅಬ್ಬಾ! ವೆಂಟಿಲೇಟರ್ ತೆಗೆದಮೇಲೂ ಬದುಕಿದ್ದೇನಲ್ಲ' ಎನ್ನುವ ಸಂತಸ. ಗಂಟಲಿಂದ ಒಳಗೆ ತುರುಕಿದ್ದ ಸರಕು ಹೊರಬಂದು ದವಡೆಯಲ್ಲಿದ್ದ ಗುಂಜಿನ ಪುಟ್ಟ ಪೊರಕೆ ಹೊರ ಹೋದಾಗ ಏನೋ ಬಿಡುಗಡೆ. ಆರು ದಿನಗಳಿಂದ ಮಾತಾಡಲು ಸಾಧ್ಯವಾಗದಂತೆ ಗಂಟಲು ಕಟ್ಟಿಹಾಕಿದ್ದು ಇಂದು ತೆರೆದರೂ ಧ್ವನಿ ಹೊರಡುತ್ತಿಲ್ಲವೇನೋ ಎನ್ನುವ ಭಾವ. 'ಅಮ್ಮಾ' 'ಅಮ್ಮಾ' ಎಂದು ಒಂದೆರಡು ಸಲ ಹೇಳಲು ಯತ್ನಿಸಿದೆ. ನೋವಿನಲ್ಲಿದ್ದಾಗ ಅಮ್ಮನ ಹೆಸರನ್ನು ಬಿಟ್ಟು ಇನ್ಯಾರು ಬರಲು ಸಾಧ್ಯ?! ಅಂತೂ ತುಸು ಪ್ರಯತ್ನದ ನಂತರ ಮಾತನಾಡಲು ಸಾಧ್ಯವಾಯಿತು. ಪಕ್ಕದಲ್ಲೇ ಕಾಯುತ್ತಾ ಕುಳಿತಿದ್ದ ಯಮಕಿಂಕರರಿಗೆ ಸ್ವಲ್ಪ ನಿರಾಸೆಯಾಯಿತೇನೋ. ಇದು ಪ್ರಯೋಜನವಿಲ್ಲದ ಕೇಸು ಎಂದು ಎದ್ದುಹೊರಟರು!

*

ಮೂಲೆಯ ಬೆಡ್ಡಿನ ಶಂಕರಪ್ಪನದು ಮೂತ್ರಪಿಂಡದ ಸಮಸ್ಯೆಯಂತೆ. ಅವನಿಗೆ ಏನು ಬಾಧೆಯಾಗುತ್ತಿತ್ತೋ ಎದ್ದು ಕುಳಿತುಬಿಡುತ್ತಿದ್ದ. ವೀಣಾ ಸಿಸ್ಟರನ್ನು ಕರೆದು "ಸಿಸ್ಟರ್, ಹಾಸ್ಗೇಲಿ ಮಲ್ಗಕ್ಕೇ ಆಗಾಣೆಲ್ಲ. ದಯ್ವಿಟ್ಟು ಒರಕ್ಕರ್ಕಂಡ್ಹೋಗಿ ಕುರ್ಲಿಲಿ ಕೂರ್ಸಿ" ಎಂದು ದುಂಬಾಲು ಬಿದ್ದ. "ಹಾಗೆಲ್ಲಾ ಮಾಡಕ್ಕಾಗಲ್ಲ; ನೀವು ಮಲ್ಗಿ ನಿದ್ದೆ ಮಾಡಿ" ಎಂದಳವಳು. "ಅಯ್ಯೋ ತಾಯಿ ನನ್ನ ಕಷ್ಟ ಯಾರ್ಗೂ ಅರ್ಥವಾಗಲ್ವೇ. ಮೈಯೆಲ್ಲಾ ಉರಿ, ನೋವು. ತಡ್ಕಣಾಕಾಗ್ತಿಲ್ಲ. ನಿದ್ದೆ ಬರೋಂಗೇನಾದ್ರೂ ಕೊಟ್ಬುಡು" ಎಂದು ಅಂಗಲಾಚಿದ. "ಎಲ್ಲಾನೂ ಕೊಟ್ಟಿದೀನಿ. ನೀವು ನಿದ್ರೆ ಮಾಡ್ಬೇಕಷ್ಟೇ. ಕೂತಿದ್ರೆ ನಿದ್ದೆ ಹೇಗ್ಬರತ್ತೆ. ನೀವು ಮಲಕ್ಕೊಂಡು ಕಣ್ಣು ಮುಚ್ಚಿಕೊಂಡ್ರೆ ತಾನೆ ಬರೋದು" ಎಂದು ಅವಳು ಮಾಮೂಲಿ ಶಂಖ ಊದಿದಳು. "ಅಯ್ಯೋ ನನ್ನ ಕಷ್ಟ ಯಾರ್ಗೂ ಅರ್ಥವಾಗಲ್ವೇ. ಇಪ್ರೀತ ಸಂಕ್ಟ, ಬಾಧೆ. ಕ್ವಾಪ ಬಂದ್ರೆ ಪಕ್ದಲ್ಲಿರೋ ಎಲ್ಲಾ ಮಾತ್ರೆಗಳ್ನೂ ವಟ್ಗೆ ನುಂಗಿ ಪಿರಾಣ ಕಳ್ಕಬಿಡ್ತೀನಿ" ಎಂದ. ತಲೆಮೇಲೆ ಕೈಹೊತ್ತ ಸಿಸ್ಟರ್ ಒಳ್ಳೆಯ ಮಾತುಗಳಲ್ಲಿ ಅವನನ್ನು ಅನುನಯಿಸಿ ಅಂತೂ ಇಂತೂ ಹಾಸಿಗೆಗೆ ಒರಗಿಸುವಲ್ಲಿ ಯಶಸ್ವಿಯಾದಳು... ಸ್ವಲ್ಪವೇ ಹೊತ್ತು... ಮತ್ತೆದ್ದು ಕುಳಿತ! ಮತ್ತದೇ ಸಂಭಾಷಣೆ... ಇಲ್ಲಿಗೆ ಬಂದ ದಿನದಿಂದ ಶಂಕರಪ್ಪನದು ಇದೇ ವರಸೆ. ಡಾಕ್ಟರ್ ಬಂದಾಗಲೂ ಅವನದ್ದು ಅದೇ ಬೇಡಿಕೆ... "ವರಕ್ಕೂರ್ಸಿ ಇಲ್ಲಾಂದ್ರೆ ಮನೇಕ್ಕಳ್ಸಿ. ಸಾಕಾಗದೆ ನಂಗೆ. ಮೈಯೆಲ್ಲಾ ಉರಿ ನೋವು". ಅವರಾದರೂ ಹೇಗೆ ಕಳಿಸಿಯಾರು? ಮಾಡುವ ಪ್ರಯತ್ನವನ್ನೆಲ್ಲಾ ಮಾಡಲೇಬೇಕಷ್ಟೇ! ಒಂದಿಷ್ಟು ಸಮಾಧಾನ ಮಾಡಿ ಹೊರಡುತ್ತಿದ್ದರು. ಎಲ್ಲರ ಕಿವಿಗೂ ಶಂಕರಪ್ಪನ ಆಲಾಪ ಅಭ್ಯಾಸವಾಗಿಹೋಗಿದ್ದು ಅದಕ್ಕೆ ಕಿವುಡಾಗಿ ಹೋಗಿತ್ತು.

ಅವನ ಎದುರು ಬೆಡ್ಡಿನ ರಾಜಮ್ಮ ಒಂದು ವಾರ ತಮಿಳುನಾಡು ಪ್ರವಾಸಕ್ಕೆ ಹೋಗಿದ್ದವರಂತೆ. ವಾಪಸ್ಸು ಬಂದ ಮೇಲೆ ನೆಗಡಿ, ಕೆಮ್ಮು ಶುರುವಾಗಿ ಉಸಿರಾಡಲು ಸಮಸ್ಯೆಯಾದಾಗ ಆಸ್ಪತ್ರೆಗೆ ದಾಖಲಾಗಿದ್ದರು. ನ್ಯೂಮೋನಿಯಾ ಎಂದು ಅದಕ್ಕೆ ಚಿಕಿತ್ಸೆ ಆರಂಭವಾಗಿತ್ತು. ಇದೆಲ್ಲಾ ತಿಳಿದಿದ್ದು ದಾದಿಯರಿಂದಲೇ. ಆಕೆಯ ಹಾಸಿಗೆಯ ಕಡೆಯಿಂದ ಒಂದು ಧ್ವನಿ ಬಂದದ್ದೂ ಕೇಳಲಿಲ್ಲ. ಅಲ್ಲಿ ಯಾರಾದರೂ ಇದ್ದಾರೋ, ಇಲ್ಲವೋ ಎಂಬ ಅನುಮಾನ ಬರುವಷ್ಟು ಆ ಕಕ್ಷೆ ಮೌನವಾಗಿರುತ್ತಿತ್ತು.

ಎಲ್ಲವೂ ಎಷ್ಟು ಅಭ್ಯಾಸ ಬಲದಿಂದ ಮುಂದೆ ಸಾಗುತ್ತಿರುತ್ತದೆಯೆಂದರೆ, ಔಷಧಿ ನೀಡುವುದು, ಇಂಜೆಕ್ಷನ್ ಚುಚ್ಚುವುದು, ಡ್ರಿಪ್ಗಳನ್ನು ಹಾಕುವುದು ಮಾನಿಟರ್‌ಗಳನ್ನು ನೋಡುತ್ತಾ ಬರೆದಿಟ್ಟುಕೊಳ್ಳುವುದು... ಪೇಶೆಂಟ್‌ಗಳ ನರಳಾಟ, ದಾದಿಯರ ಓಡಾಟ, ಆಯಾಗಳ ಪರದಾಟ... ಶಂಕರಪ್ಪನಂತವರ ಕೂಗಾಟ ಎಲ್ಲವೂ ಯಾವುದೋ ಒಂದು ಶ್ರುತಿಗೆ ನುಡಿಯುವ ಸ್ವರದ ಸ್ಥಾನಗಳಂತೆ ಅದೇ ರಾಗ ಸಂಚಾರಗಳಲ್ಲಿ ಚಲಿಸುತ್ತಿರುತ್ತವೆ. ಬೆಳಗಿಗೂ, ಮಧ್ಯಾಹ್ನಕ್ಕೂ ರಾತ್ರಿಗೂ ಯಾವ ಅಂತಹ ವ್ಯತ್ಯಾಸವೂ ಇರುವುದಿಲ್ಲ, ರಾತ್ರಿ ಕೆಲಹೊತ್ತು ದೀಪಗಳು ಮಂಕಾಗಿರುತ್ತವೆ ಎನ್ನುವುದನ್ನು ಬಿಟ್ಟರೆ.

ಹೀಗೇ ಇರುವಾಗ ಇದ್ದಕ್ಕಿದ್ದಂತೆ ಒಂದೈದು ನಿಮಿಷ ಶಂಕರಪ್ಪನ ಕೂಗು ಕೇಳಲೇ ಇಲ್ಲವೆನ್ನುವುದು ವೀಣಾ ಸಿಸ್ಟರಿನ ಗಮನಕ್ಕೆ ಬಂದು ಅವಳು ಹೋಗಿ ನೋಡುವಾಗ ಶಂಕರಪ್ಪನ ಉಸಿರು ಏರಿಳಿಯುತ್ತಿದೆ. ತಕ್ಷಣವೇ ಅವಳು ಡಾಕ್ಟರನ್ನು ಕರೆದು ಏಳೆಂಟು ಜನ ಅವನ ಸಹಾಯಕ್ಕೆ ಓಡಿಹೋದರು. ಅವನ ಕಕ್ಷೆಯ ಪರದೆಯನ್ನೆಳೆದು ಎಲ್ಲರೂ ಒಳಗೆ ಸೇರಿಕೊಂಡು ಅವನನ್ನು ಯಮಕಿಂಕರರಿಂದ ವಾಪಸ್ಸು ಸೆಳೆದುಕೊಂಡು ಬರುವ ಎಲ್ಲಾ ಪ್ರಯತ್ನಗಳನ್ನೂ ಮಾಡಿದರು. ಅವನ ಹೆಸರನ್ನು ಹಿಡಿದು ಕಿರುಚಿ ಕಿರುಚಿ ಕರೆಯುತ್ತಿದ್ದರು. ಎದೆಗೆ ಗುದ್ದುತ್ತಿದ್ದರೇನೋ... ನನ್ನ ಹಾಸಿಗೆಯ ತನಕವೂ ಆ ಶಬ್ದ ಕೇಳಿಸುತ್ತಿತ್ತು. ನನ್ನ ಪಕ್ಕದಲ್ಲಿ ಓಡಾಡಿಕೊಂಡಿದ್ದ ಯಮಕಿಂಕರರು ಅದಾವ ಮಾಯದಲ್ಲಿ ಅವನ ಕಕ್ಷೆಯನ್ನು ಸೇರಿಕೊಂಡು ಅವನ ಪ್ರಾಣವನ್ನು ಸೆಳೆದುಕೊಂಡುಬಿಟ್ಟರೋ ಡಾಕ್ಟರುಗಳ ಯಾವ ಪ್ರಯತ್ನವೂ ಫಲಿಸಲಿಲ್ಲ. ಎಲ್ಲಾ ನೋವುಗಳಿಂದ ಬಿಡುಗಡೆಹೊಂದಿ ಶಂಕರಪ್ಪ ಹೊರಟುಬಿಟ್ಟಿದ್ದ ತನಗೇ ಅರಿವಿಲ್ಲದೆ... ಯಾಕೋ ತುಂಬಾ ನೋವೆನಿಸಿತು. ಅಲ್ಲಿಂದ ನನ್ನ ಡ್ರಿಪ್ಪನ್ನು ಬದಲಾಯಿಸಲು ಬಂದ ವೀಣಾ ಸಿಸ್ಟರ್ ಕಣ್ಣುಗಳಲ್ಲಿ ನೀರಾಡುತ್ತಿದ್ದವು.

ಈಗ್ಗೈದು ನಿಮಿಷಗಳ ಹಿಂದೆ ಕೂಡಾ ಕೂಗಾಡಿಕೊಂಡಿದ್ದ ಜೀವ ಇಲ್ಲವೇ ಇಲ್ಲ ಎನ್ನುವುದಾದರೆ... ಶಂಕರಪ್ಪನ ದೇಹ ಕೊರಡಾಗಿತ್ತು. ಅವನ ಹೆಂಡತಿ ಮಕ್ಕಳು ಒಳಗೇ ಬಂದು ರೋದಿಸತೊಡಗಿದಾಗ ಬಲವಂತವಾಗಿ ಅವರನ್ನು ಹೊರ ಕಳಿಸಿ ದೇಹವನ್ನು 'ಪ್ಯಾಕ್' ಮಾಡಿದರು. ಎಲ್ಲಾ ಕಕ್ಷೆಗಳ ಪರದೆಗಳನ್ನೂ ಸರಿಸಿ, ಯಾರಿಗೂ ನೇರವಾಗಿ ಕಾಣದಂತೆ ದೇಹವನ್ನು ಹೊರಗೆ ಸಾಗಿಸಿದರು. ಮರುಕ್ಷಣವೇ ಹೊರಗೆ ತಮಟೆಯ ಶಬ್ದ ಜೋರಾಗಿ ಕೇಳತೊಡಗಿತು. ದೇಹದಲ್ಲಿ ಉಸಿರಿರುವವರೆಗೆ ಒಂದು ಆತಂಕ, ನಿರೀಕ್ಷೆ, ಆಸೆ ಎಲ್ಲವೂ... ಪ್ರಾಣವಾಯು ಹೋಯಿತೆಂದ ತಕ್ಷಣ ಮುಂದಿನ ಏರ್ಪಾಡುಗಳ ಕಡೆಗೇ ಗಮನವಲ್ಲವೇ. ಎಷ್ಟೊಂದು ಕ್ಷಣಿಕ ಎಲ್ಲವೂ... ಆ ರಾತ್ರಿಯೆಲ್ಲಾ ಶಂಕರಪ್ಪನ ಕೂಗಾಟವಿಲ್ಲದೆ ಒಂದು ಶೂನ್ಯ ಸೃಷ್ಟಿಯಾದಂತಿತ್ತು...

ಮರುದಿನ ಬೆಳಗ್ಗೆ ಯಾವ ಸದ್ದು ಗದ್ದಲಗಳೂ ಇಲ್ಲದೆ ಅದುವರೆಗೆ ಹೋರಾಡಿದ ರಾಜಮ್ಮನ ದೇಹವೂ ತಣ್ಣಗಾಗಿತ್ತು. ಯಾವ ಚಿಕಿತ್ಸೆಯೂ ಫಲಕಾರಿಯಾಗಿರಲಿಲ್ಲ. ಹೂವೊಂದು ತೊಟ್ಟು ಕಳಚಿ ಕೆಳಬಿದ್ದು ಮಣ್ಣಿಗೆ ಸೇರುವಂತೆ ರಾಜಮ್ಮನ ಉಸಿರು ನಿಂತುಹೋಗಿತ್ತು. ಅದೆಷ್ಟು ಮೌನ ಕವಿದಿತ್ತೆಂದರೆ ಆ ಉಸಿರು ನಿಂತದ್ದಾಗಲೀ, ದೇಹ ಪ್ಯಾಕ್ ಆದದ್ದಾಗಲೀ, ಅದನ್ನು ಹೊರಗೆ ಸಾಗಿಸಿದ್ದಾಗಲೀ... ಎಲ್ಲರ ಕಕ್ಷೆಯ ಪರದೆಗಳನ್ನೂ ಎಳೆಯುವ ತನಕ ಗಮನಕ್ಕೇ ಬಾರದಂತಹ ಒಂದು ಮೌನ... ಸಾವಿನಂತಹ ಮೌನ ಎನ್ನುತ್ತಾರಲ್ಲಾ ಹಾಗೆಂದರೇನು ಎನ್ನುವುದು ಅರಿವಿಗೆ ಬರುವಂತಿತ್ತು.

"ನಳಿನೀ ದಳಗತ ಜಲಮತಿ ತರಳಂ ತದ್ವಜ್ಜೀವಿತ ಮತಿಶಯ ಚಪಲಮ್। ವಿದ್ಧಿ ವ್ಯಾಧ್ಯಭಿಮಾನ ಗ್ರಸ್ತಂ ಲೋಕಂ ಶೋಕಹತಂ ಚ ಸಮಸ್ತಮ್॥" (ಎಲ್ಲ ಜೀವಗಳೂ ತಾವರೆ ಎಲೆಯ ಮೇಲಿನ ಮಳೆಯ ಹನಿಗಳಷ್ಟೇ.

ಸರಿದಾಡುತ್ತಿರುವ ಹನಿಗಳು ಯಾವಾಗ ಕಳಚಿಕೊಳ್ಳುವವೋ ಗೊತ್ತಾಗುವುದೇ ಇಲ್ಲ. ಜಗತ್ತಿನೆಲ್ಲರೂ ಖಾಯಿಲೆಗೆ, ಅಭಿಮಾನಕ್ಕೆ, ದುಃಖಕ್ಕೆ ತಮಗರಿವಿಲ್ಲದೆಯೇ ಬಲಿಯಾಗಿಬಿಡುತ್ತಾರೆ). ಇಷ್ಟೇನೇ ಜೀವನವೆಂದರೆ?! ಕೂಗಾಡುತ್ತಿದ್ದರೂ ಹೋಗುವುದೇ, ಮೌನವಾಗಿದ್ದರೂ ಹೋಗುವುದೇ – ಎಲ್ಲರದೂ ಇದೇ ಕತೆಯಲ್ಲವೇ! ಯಕ್ಷ ಧರ್ಮರಾಜನಿಗೆ ಕೇಳಿದ ಪ್ರಶ್ನೆ "ಮನುಷ್ಯ ಜೀವನದ ಅತ್ಯಂತ ಚೋದ್ಯವಾದ ಸಂಗತಿ ಯಾವುದು?" ಧರ್ಮರಾಜನ ಉತ್ತರ "ಸಾವು ನಿಶ್ಚಿತವೆಂದು ತಿಳಿದಿದ್ದರೂ ತಾನು ಚಿರಂಜೀವಿಯೆಂದೇ ತಿಳಿದುಕೊಂಡಿರುವುದು" ಅಷ್ಟೇ ಅಲ್ಲವೇ!!

***

ಕವನ – ಜಾನಪದ ಶೈಲಿಯ ಪ್ರಸ್ತುತಿ

ಮೊಬೈಲಾಯಣ

– ಕೆ.ಆರ್. ವೆಂಕಟೇಶ್ (ಮನು) ಮನೋಹಂಸ

ಹಿನ್ನೆಲೆ: ಈ ಕವನ "ಮೊಬೈಲಾಯಣ" ಎರಡು ತಲೆಮಾರುಗಳ ನಡುವೆ ಮೊಬೈಲ್ ಬಗೆಗಿರುವ ಅಭಿಪ್ರಾಯ/ ಭಿನ್ನಾಭಿಪ್ರಾಯ. ಇಲ್ಲಿ ನಾನು ಅಪ್ಪ ಮಗನನ್ನು ತೆಗೆದುಕೊಂಡಿದ್ದೇನೆ. ಅಪ್ಪನ 4 ಸಾಲುಗಳು ಸೇರಾದರೆ ಮಗನದು 4 ಸಾಲುಗಳು ಸವ್ವಾಸೇರಿನಂತಿರುವುದು. ಒಂದಾದನಂತ ನಂತರ ಒಂದು ಬರುವುದು.

ಅಪ್ಪ
ಏನಾಯ್ತಪ್ಪ ಈ ನಗರದ್ ಹೈಕಳಿಗೆ
ಮೊಬೈಲ್ ಕೈಯಲ್ಲಿರತ್ತೆ ಪ್ರತಿ ಘಳಿಗೆ
ಕೂಗಿದ್ರೂ ಕೇಳ್ಸಲ್ಲ, ತಿವಿದ್ರೂ ತಿಳಿಯಲ್ಲ
ಇವರ್ನ ಹೇಗ್ ಸರಿ ಮಾಡೋದ್ ಗೊತ್ತಾಗ್ತಿಲ್ಲ

ಮಗ
ಸ್ಮಾರ್ಟ್ ಫೋನಲ್ಲಿ ಸಿಮ್ ಜೊತೆ ನೆಟ್ ಇದ್ದಲ್ಲಿ
ಇಡೀ ಪ್ರಪಂಚದ್ ವಿಷಯ ಇರತ್ತೆ ಅಂಗೈಯಲ್ಲಿ
ಸಿನಿಮಾ ಕ್ರಿಕೆಟ್ ಎಲ್ಲಾ ಇದ್ರಲ್ಲೆ ನೋಡ್ಬೋದು
ಜೇಬಲ್ಲಿ ದುಡ್ಡಿಲ್ದೆ ವ್ಯವಹಾರನೂ ಮಾಡ್ಬೋದು

ಅಪ್ಪ
ಕಿವಿಗೇನೋ ಸಿಕ್ಕಸ್ಕೊಂಡು ಒಬ್ರೊಬ್ರೆ ಮಾತಾಡ್ತಾರೆ
ಮುಖ ಮೂತಿ ತಿರುಗಿಸ್ಕೊಂಡು ಸೆಲ್ಫಿ ತೆಗೊತಾರೆ
ನಡ್ಕೊಂಡ್ ಹೋಗೋವ್ರು ತಲೆ ತಗ್ಗಿಸಿಕೊಂಡಿರ್ತಾರೆ
ಬೈಕ್ ಕಾರ್‌ನಲ್ಲಿ ತಲೆ ಸೈಡ್ಗೆ ವಾಲಿಸಿಕೊಂಡಿರ್ತಾರೆ

ಮಗ
ಬಸ್ಸು ರೈಲು ಸೀಟ್ಗೆ ಆನ್ ಲೈನ್ ಬುಕಿಂಗು ಇದ್ರಲ್ಲಿ
ನಮ್ಮೂರ್ ಥರ ಸೀಟಿಗೆ ನಿಲ್ಲಂಗಿಲ್ಲ ಕ್ಯೂನಲ್ಲಿ
ಕ್ಯಾಬ್ ಬುಕಿಂಗು ಮಾಡಿದ್ರೆ ಇದ್ದ ಕಡೇನೆ ಬರತ್ತೆ
ಊಟ ತಿಂಡಿ ಆರ್ಡರ್ ಮಾಡ್ದ್ರೆ ಮನೆಗೇ ತಲುಪತ್ತೆ

ಅಪ್ಪ
ಮಾಡೋಕ್ ಕೆಲ್ಸ ಇಲ್ಲಾಂದ್ರೆ ವಿಡಿಯೋ ಗೇಮಿಂಗು
ವಿಷಯ ಇಲ್ದೆ ಗಂಟೆಗಟ್ಲೆ ಆನ್ಲೈನ್ ಚ್ಯಾಟಿಂಗು
ಇದು ಕೈಲಿದ್ರೆ ಊಟ ತಿಂಡಿ ಟೈಂಗೆ ಆಗಂಗಿಲ್ಲ
ರಾತ್ರಿಗಿದು ಪಕ್ದಲ್ಲಿ ಇಲ್ಲಾಂದ್ರೆ ನಿದ್ದೆ ಬರಂಗಿಲ್ಲ

ಮಗ
ಫೇಸ್‌ಬುಕ್‌ಲ್ಲೇ ಲೈಕ್ ಮಾಡಿ ಫ್ರೆಂಡ್ ಶಿಪ್ ಮಾಡ್ಕೊಬೋದು
ಟ್ವಿಟ್ಟರಲ್ಲೇ ಬಾಯಿಗ್‌ಬಂದ್ಹಾಗ್ ಬೈಕೊಂಡ್ ಜಗಳಕಾಯ್ಬೋದು
ವ್ಯಾಟ್ಸಪಲ್ಲಿ ಆರಾಮಾಗಿ ಗ್ರೂಪ್‌ಚಾಟ್ ಮಾಡ್ಕೊಂಡಿರಬೋದು
ಫೋಟೋ ವಿಡಿಯೋಸ್ ಕ್ಷಣದಲ್ಲಿ ಎಲ್ಲೇಕಾದ್ರೂ ಕಳಿಸ್ಬೋದು

ಅಪ್ಪ
ಮೊಬೈಲಿದ್ರೆ ಅಪ್ಪ ಅಮ್ಮ ಬಂಧು ಬಳಗ ಬೇಕಿಲ್ಲ
ಪಕ್ಕದಲ್ಲಿರೋ ಹೆಂಡ್ತಿ ಕಳೆದೋದ್ರೂ ಗೊತ್ತಾಗಲ್ಲ
ಬಿಡಿಸೋದ್ ಹೇಗೆ ಈ ಹೈಕಳಿಗೆ ಮೊಬೈಲ್ ಸಹವಾಸ
ನೀನೇ ದಾರಿ ತೋರಿಸಪ್ಪ ಹೇ ತಿರುಪತಿ ಶ್ರೀನಿವಾಸ

***

ಸ್ನೂಪಿ

– ಡಾ ಸತ್ಯವತಿ ಮೂರ್ತಿ

ಆಫೀಸಿನಲ್ಲಿ ಎಂದಿನಂತೆ ಫೈಲುಗಳ ಸಮುದ್ರದಲ್ಲಿ ಮುಳುಗಿದ್ದೆ. ಕೂಡುವ ಕಳೆಯುವ ಲೆಕ್ಕದಲ್ಲಿ ತಲೆ ಬಿಸಿಯಾಗಿತ್ತು. ಹೊರಗಿನ ಪ್ರಪಂಚದ ಅರಿವೂ ಇರಲಿಲ್ಲ. ಸ್ವಾಭಾವಿಕವಾಗಿಯೇ ನಾನು ಯಾವುದೇ ಕೆಲಸ ಮಾಡಹೊರಟರೆ ಸುತ್ತಲಿನ ಪರಿವೆ ಇರುವುದಿಲ್ಲ. ಅಂತಹುದರಲ್ಲಿ ಅಂಕೆ ಸಂಖ್ಯೆಗಳ ನಡುವೆ ಮುಳುಗಿದ್ದೆನೆಂದರೆ ಕೇಳುವುದೇನು? ಇಹಪರದ ಅರಿವೂ ಇರಲಿಲ್ಲ. ಇದ್ದಕಿದ್ದ ಹಾಗೆ ಆಫೀಸಿನಲ್ಲಿ ಗದ್ದಲ ಕೇಳಿಸಿತು. ಎಲ್ಲರೂ ಆತಂಕಗೊಂಡಿದ್ದಾರೆ. ಎಲ್ಲರ ಬಾಯಲ್ಲೂ ಒಂದೇ ಮಾತು. ಸ್ನೂಪಿ ಎಲ್ಲೋ ಕಾಣಿಸುತ್ತಿಲ್ಲ.

“ಅಯ್ಯೋ, ನನ್ನ ಸ್ನೂಪಿಯಿಲ್ಲದೆ ಜೀವದಿಂದ ಇರುವುದಾದರೂ ಹೇಗೆ? ನನ್ನ ಬಾಳೇ ಬರಡಾಯಿತು. ಜೀವಕ್ಕೆ ಜೀವದಂತಿದ್ದ ನನ್ನ ಸ್ನೂಪಿಯೇ ನನ್ನನ್ನು ತೊರೆದು ಹೋದಮೇಲೆ ಬದುಕಿದ್ದುತಾನೇ ಏನು?” ಬಾಸ್‌ನ ಉವಾಚ.

“ಡ್ಯಾಡಿ ಯಾಕ್ ಡ್ಯಾಡಿ? ಸ್ನೂಪಿ ಹೀಗ್ಮಾಡ್ದ? ಅವ್ನಿಗೇನು ಕಡಿಮೆ ಮಾಡಿದ್ರಿ ನೀವು? ಅವನಿಗೆ ಬೇಕಾದದ್ದೆಲ್ಲ ತಕ್ಕೊಟ್ಟಿದ್ದೀರಿ. ರಾಜಕುಮಾರನ ಹಾಗೆ ನೋಡ್ಕೊಂಡಿದೀರಿ. ಅಂತಹುದರಲ್ಲಿ ಹೀಗೆ ಮಾಡೋದೆ?” ಬಾಸ್‌ನ ಪ್ರೀತಿಯ ಪುತ್ರಿ ನೀತಾಳ ಉವಾಚ.

“ಮಮ್ಮಿ ಮಮ್ಮಿ ಏನ್ಮಮ್ಮಿ ಸ್ನೂಪಿ ಬರೋಲ್ವಂತ?", “ಯಾಕ್ ಡ್ಯಾಡಿ ನೀನ್ಹೇಳು ಡ್ಯಾಡಿ ? ಯಾಕ್ ಬರೋಲ್ವಂತೆ” ಎಲ್ಲರಿಗಿಂತ ಕಿರಿಯ ಆದಿತ್ಯನ ಗೋಳೋ!

“ಅಯ್ಯೋ ನನ್ನ ಕಂದ ಸ್ನೂಪಿ ಇನ್ನಿಲ್ಲಮ್ಮ. ನಮ್ಮ ಮೇಲೆ ಕೋಪ ಮಾಡ್ಕೊಂಡು ಮನೆ ಬಿಟ್ಟು ಹೊರಟ್ಹೋಗಿದಾನೆ. ಎಲ್ಲಿದಾನೋ ಇಲ್ಲವೋ? ಮತ್ತೆ ಮನೆ ಸೇರ್ತಾನೋ ಇಲ್ವೋ? ಏನ್ಮಾಡೋದೋ? ಒಂದೂ ತಿಳಿತಾ ಇಲ್ಲ” ತಾಯಿ ಅಂಬಿಕಾಳ ಸಾಂತ್ವನ.

“ಸಾರ್ ನಂದೊಂದು ಸಲಹೆ ಸಾರ್”, ಬೆನ್ನು ಬಗ್ಗಿಸಿ ಹಲ್ಲು ಗಿಂಜುತ್ತ ನುಡಿದ ಮಹೇಶ.

“ಏನ್ರೀ ಅದು? ಹೇಳಿ”.

“ಈಗಿಂದೀಗ್ಲೆ ಹೋಗಿ ಪೋಲೀಸ್ ಕಂಪ್ಲೇಂಟ್ ಕೊಟ್ಟು ಬರ್ಲಾ ಸಾರ್?”

“ಏನ್ರಿ ನೀವ್ಹೇಳೋದು ಮನೆ ಮಾತು ಬೀದಿ ಪಾಲಾಗ್ಲಿ ಅಂತಾನ? ಪೋಲೀಸ್ನೋರಿಗೆಲ್ಲ ತಿಳಿಸೋದೂ ಬೇಡ. ರಂಪ ರಾದ್ಧಾಂತ ಮಾಡೋದೂ ಬೇಡ. ನಾವೇ ಹುಡುಕೋಣ, ಸಿಗ್ದೆ ಎಲ್ಲಿಗ್ಹೋಗ್ತಾನೆ? ಹೊಟ್ಟೆ ಹಸಿದ್ರೆ ವಾಪಸ್ ಬಂದೇ ಬರ್ಬೇಕು “.

“ಡ್ಯಾಡಿ ನೀವು ಹಾಗೆಲ್ಲ ಹೇಳ್ಬೇಡಿ ಡ್ಯಾಡಿ. ನೀವು ಹೀಗೆ ಅಸಡ್ಡೆ ಮಾಡಿದ್ದರಿಂದಲೇ ಅವನು ಮನೆ ಬಿಟ್ಟು ಹೋಗಿದ್ದು. ಅವನಿಗೆ ನೀವು ಯಾವಾಗ್ಲೂ ಏನಾದ್ರೂ ಅಂತಾನೆ ಇರ್ತೀರ. ನೀತಾಳ ಆಕ್ಷೇಪಣೆ.

"ಇಲ್ಲ ಮಹರಾಯ್ತಿ, ತಪ್ಪಾಯ್ತು, ನನಗೇನು ಅವನನ್ನ ಕಂಡರೆ ಪ್ರೀತಿಯಿಲ್ಲ ಅಂದ್ಕೊಂಡ್ಯ? ನನಗೆ ಅವನಿಲ್ಲದೆ ಜೀವನವೇ ಬೇಸರವಾಗಿದೆ.ಏನೋ ಕೋಪದಲ್ಲಿ ಹಾಗಂದೆ".

"ರೀ, ಹೀಗೇ ಮಾತಾಡ್ತಾ ಕೂತ್ಕೊಂಡ್ರೆ ಹೊತ್ತು ಕಳೆದುಹೋಗುತ್ತೆ, ಆಮೇಲೆ ಅವನು ನಮ್ಗೆ ಸಿಗದಷ್ಟು ದೂರ ಹೊರಟ್ಹೋದ್ರೆ?" ನಡುವೆಯೇ ಬಾಯಿಹಾಕಿದಳು ಧರ್ಮಪತ್ನಿ ಅಂಬಿಕ.

"ಹೌದು ಕಣೆ, ನೀನ್ಹೇಳೋದೂ ಸರಿ . ಈಗ್ಲೆ ಹುಡ್ಕೋಕ್ಕೆ ಹೊರಡ್ಬೇಕು".

"ಸಾರ್ ಹೀಗ್ಮಾಡೋಣ, ನಾನು, ಪರೇಶ ಮ್ಯಂಚೆಸ್ಟರ್‌ನ ಉತ್ತರಕ್ಕೆ ಹೋಗ್ತೀವಿ, ಮಹೇಶ, ಸೋಮನಾಥನ್ನ ಕರ್ಕೊಂಡು ಪೂರ್ವ ದಿಕ್ಕಿನ ಕಡೆಗೆ ಹೋಗ್ಲಿ, ರಾಜಣ್ಣ, ಜಾನ್ ಜೊತೇಲಿ ದಕ್ಷಿಣ ದಿಕ್ಕಿಗ್ಹೋಗ್ಲಿ, ಇನ್ನು ಮೇರಿ ಪ್ರಮೀಳ ಇಬ್ಬರೂ ಪಶ್ಚಿಮ ದಿಕ್ಕಿಗ್ಹೋಗ್ಲಿ. ಆಗ ಎಲ್ಲಿದ್ರೂ ಸಿಕ್ಕೇ ಸಿಗ್ತಾನೆ" ಅಂತ ಉಸಿರು ಬಿಡದೆ ಬೃಹತ್ ಯೋಜನೆ ಮಾಡಿದವನಂತೆ ಒಂದೇ ಉಸಿರಿಗೆ ಹೇಳಿದ ಕಿರೀಟ.

"ಸರಿ ಹಾಗೇ ಮಾಡಿ. ನಾವು ಮನೆ ಸುತ್ತಮುತ್ತ ಎಲ್ಲಾ ಹುಡುಕ್ತೀವಿ, ಮನೇಗೇ ಹೋಗಿದ್ದರೂ ಹೋಗಿರಬಹುದು" ಅಂದರು ಬಾಸ್ ಮಹಾಶಯರು.

ಅಂತೂ ಒಂದು ದೊಡ್ಡ ಪಟಾಲಮ್ಮೇ ಹೊರಟಿತು ಯುವರಾಜ ಸ್ನೂಪಿಯ ಹುಡುಕಾಟಕ್ಕೆ. ಟಾರ್ಚುಗಳ ಅಗತ್ಯವಿರಲಿಲ್ಲ, ಕಾರಣ ಇಂಗ್ಲೆಂಡಿನಲ್ಲಿ ಬೇಸಗೆಯಲ್ಲಿ ರಾತ್ರಿ ಕತ್ತಲಾಗುವುದೇ ಬಹಳ ತಡ.

ಇಷ್ಟೆಲ್ಲ ಹಗರಣಕ್ಕೆ ಕಾರಣನಾದ ಈ ಕಥಾನಾಯಕ ಯಾರು? ಮನೆ ಬಿಟ್ಟು ಹೋದದ್ದು ಏಕೆ? ಇತ್ಯಾದಿ ಪ್ರಶ್ನೆಗಳು ಸಹಜ. ಮನೆ ಬಿಟ್ಟು ಹೋದದ್ದು ಬೇರೆ ಯಾರೂ ಅಲ್ಲ, ಬಾಸ್‌ನ ಪ್ರೀತಿಯ ನಾಯಿ ಸ್ನೂಪಿ!

ಮನೆಬಿಟ್ಟ ಕಾರಣವನ್ನು ಸ್ನೂಪಿಯೇ ಹೇಳಬೇಕು. ಸ್ವಾತಂತ್ರೇಚ್ಛೆಯಿಂದ ಹೋಗಿದ್ದರೂ ಹೋಗಿರಬಹುದು ಅಥವಾ ರಾಜೋಪಚಾರದ ಹೊಡೆತ ತಾಳಲಾರದೆ ಮನೆ ಬಿಟ್ಟರಲೂ ಬಹುದು, ಇಲ್ಲ ಸಾಮಾನ್ಯ ನಾಯಿಗಳ ಜೀವನ ದರ್ಶನ ಮಾಡಲು ಹೋಗಿರಲಿಕ್ಕೂ ಸಾಕು. ಅಂತೂ ಈಗ ಸ್ನೂಪಿ ಮನೆಯಲ್ಲಿಲ್ಲ.

"ಕ್ಯಾ ಸಾಬ್ ಐಸೆ ಕೈಸೆ ಛೋಡ್ ದಿಯ ಸ್ನೂಪಿಕೋ, ಘರ್ಮೆ ಕೋಯಿ ನಹೀ ಥಾ ಕ್ಯಾ?" ಕುತೂಹಲದ ಮುದ್ದೆಯಾದ ಕಾರಿನ ಡ್ರೈವರ್ ಖಾದಿರನ ಪ್ರಶ್ನೆ.

ಅವನ ಪ್ರಶ್ನೆಗೆ ಸಮಾಧಾನದ ಉತ್ತರ ಕೊಡಲು ಯಾರೂ ಸಿದ್ಧರಿರಲಿಲ್ಲ ಎನ್ನುವುದು ಬೇರೆ ಪ್ರಶ್ನೆ. ಅಲ್ಲದೆ ಸ್ನೂಪಿ ಕಳೆದುಹೋಗಿರುವುದು ಆಫೀಸಿಗೆ ಬಂದಮೇಲೆ. ಇದನ್ನೆಲ್ಲ ವಿವರಿಸಿ ಅವನಿಗಾರು ಉತ್ತರ ಕೊಟ್ಟಾರು?

**

ಬೋಪಣ್ಣನ ಜೊತೆಹೊರಟ ರಂಗಣ್ಣ ಎಲ್ಲ ಕಡೆಯೂ ಸ್ನೂಪಿಗಾಗಿ ಹುಡುಕಿ ಬರಿಗೈಯಲ್ಲಿ ಮನೆಗೆ ಬಂದ. ಕಂಡ ಶ್ವೇತವರ್ಣದ ಶ್ವಾನಗಳನ್ನೆಲ್ಲ ದೃಷ್ಟಿಸಿ ನೋಡಿದ್ದ, ನೋಡೀ ನೋಡೀ ಅವನ ಕಣ್ಣು ನೋವು ಕಂಡಿತಷ್ಟೆ!, ಸ್ನೂಪಿಯನ್ನಲ್ಲ. ಆರಂಭದಲ್ಲಿದ್ದ ಉತ್ಸಾಹ ಬರಬರುತ್ತ ಕಡಿಮೆಯಾಗಿ ಕೊನೆಗೆ ಸ್ನೂಪಿ ಸಿಗದೆ ಹಿಂತಿರುಗಿದ್ದ.

ರಂಗಣ್ಣ ಬರಿಗೈಯಲ್ಲಿ ಬಂದ ಕೂಡಲೆ ನೀತಾಳ ನಿರೀಕ್ಷೆ ನಿರಾಶೆಯ ಆಳಕ್ಕೆ ಇಳಿಯತೊಡಗಿತು. ತನ್ನೊಡನೆ ಆಡಲು ಇರುತ್ತಿದ್ದ ಸ್ನೂಪಿ ಇನ್ನಿಲ್ಲ ಎಂಬುದು ಅವಳಿಗೆ ದೊಡ್ಡ ಕೊರಗಾಯಿತು. ಸ್ನೂಪಿ ಮನೆಗೆ ಬಂದಲ್ಲದೆ ತಾನು ಊಟ ಮಾಡುವುದಿಲ್ಲವೆಂದು ಸತ್ಯಾಗ್ರಹ ಹೂಡಿದಳು. ಕಾಲೇಜು ಕಟ್ಟೆಯನ್ನು ದಾಟುವ ವಯಸ್ಸಾಗಿದ್ದರೂ ಅವಳಿಗೆ ಸ್ನೂಪಿ ಆಟದ ಸಂಗಾತಿಯಾಗಿಯೇ ಉಳಿದಿತ್ತು. ನಾಯಿಯನ್ನು ಕಳೆದುಕೊಂಡ ದುಃಖದ ಜೊತೆಗೆ ಈಗ ಮಗಳನ್ನು ಸಂತೈಸುವ ಸಂಕಟವೂ ಬಂದು ಸೇರಿತು ಅಂಬಿಕಳಿಗೆ. ಆದರೂ ಸದ್ಯಕ್ಕೆ ಅವಳಿಗೆ ಸಮಾಧಾನ ಹೇಳುವುದು ಕಷ್ಟದ ಕೆಲಸವೇನೂ ಆಗಿರಲಿಲ್ಲ. ಯಾಕೆಂದರೆ ಇನ್ನೂ ನಾಯಿಯನ್ನು ಹುಡುಕ ಹೋಗಿರುವ ಎಲ್ಲರೂ ಹಿಂದಿರುಗಿ ಬಂದಿರಲಿಲ್ಲವಲ್ಲ!

“ಅಯ್ಯೋ ಎಷ್ಟು ಚೆನ್ನಾಗಿತ್ತು ನಮ್ಮ ಸ್ನೂಪಿ. ಹಾಲಿನಂತೆ ಬಿಳುಪು ಅದರ ಮೈಬಣ್ಣ. ಅದರ ಕಣ್ಣುಗಳೋ ಹೊಳೆಯುವ ನಕ್ಷತ್ರಗಳು. ನೋಡಲು ಎಷ್ಟು ಮುದ್ದೋ ಅಷ್ಟೇ ಚುರುಕು ಕೂಡ”, ಅಲವತ್ತುಕೊಂಡಳು ಅಂಬಿಕ.

“ಅಲ್ಲಮ್ಮ ನಾವು ಸ್ನೂಪೀನ ಯಾವಾಗ ಕರ್ಕೊಂಡ್ಬಂದಿದ್ದು ಹೇಳು?” ನೀತಾಳ ಪ್ರಶ್ನೆ.

“ಅದು ಹುಟ್ಟಿದ ಒಂದ್ ವಾರಕ್ಕೇ ಕರೆದುಕೊಂಡು ಬಂದಿದ್ವಿ ಕಣೆ. ಅವತ್ನಿಂದ ಇವತ್ತಿನವರೆಗೂ ಒಂದಿವಸಾನೂ ಹೀಗೆ ಮಾಡಿರಲಿಲ್ಲ”

ಮಾತಿನ ನಡುವೆ ಇದ್ದಕ್ಕಿದ್ದಂತೆ ಲಂಡನ್‌ನಲ್ಲಿ ಓದುವುದುದಕ್ಕೆಂದು ಹೋಗಿದ್ದ ತಮ್ಮನ ನೆನಪಾಯಿತು ನೀತಾಳಿಗೆ.

“ಮಮ್ಮಿ, ನಾನೀಗ್ಲೆ ಹೋಗಿ ರಾಜೀವಂಗೆ ಫೋನ್ ಮಾಡಿ ವಿಷಯ ತಿಳಿಸ್ತೀನಿ”

“ಅಯ್ಯೋ ಬೇಡಕಣಮ್ಮ, ಅವ್ನು ಅತ್ತೂ ಕರೆದೂ ಗೋಳಾಡೋದಿರ್ಲಿ, ಕಾಲೇಜು ಬಿಟ್ಟು ಓಡಿ ಬಂದ್ಬಿಡ್ತಾನೆ. ಅವನಿಗೆ ಸ್ನೂಪಿ ಅಂದ್ರೆ ಜೀವಕ್ಕಿಂತ ಹೆಚ್ಚು. ಪ್ರಪಂಚದಲ್ಲಿ ಅವನು ಏನಾದ್ರೂ ಕಳ್ಕೊಳ್ಳೋದಿಕ್ಕೆ ಸಿದ್ಧ ಆದರೆ ಸ್ನೂಪಿಯನ್ನಲ್ಲ”. ಅಂಬಿಕಾಳ ಕಳಕಳ.

“ಆದ್ರೂ ಅಮ್ಮ,, ಅವನಿಗೆ ತಿಳಿಸದೆ ಹೋದ್ರೆ ಆಮೇಲೆ ಬೈತಾನೆ. ಅದಕ್ಕೆ ತಿಳಿಸ್ಬಿಡ್ತೀನಿ”.

ಹೋಗಿ ಫೋನ್ ಮಾಡಿ ವಿಷಯ ತಿಳಿಸಿಯೇಬಿಟ್ಟಳು. ರಾಜೀವ ತನ್ನ ತಂದೆ ತಾಯಿಗೆ ಎಷ್ಟು ಮುದ್ದೋ ಸ್ನೂಪಿ ಅವನಿಗೆ ಅಷ್ಟೇ ಮುದ್ದು. ಒಂದು ಕ್ಷಣವೂ ಅದನ್ನು ಬಿಟ್ಟಿರದ ಅವನು ಕಾಲೇಜಿಗೆಂದು ದೂರದ ಲಂಡನ್‌ಗೆ ಹೋಗಬೇಕಾಗಿ ಬಂದಾಗ ದೊಡ್ಡ ರಂಪವನ್ನೇ ಮಾಡಿದ್ದ. ಸ್ನೂಪಿಯನ್ನೂ ತನ್ನ ಜೊತೆಯಲ್ಲೇ ಕರೆದೊಯ್ಯುತ್ತೇನೆ ಎಂದು ಹಠ ಮಾಡಿದ್ದ. ಆದರೆ ಮನೆಯವರೆಲ್ಲ ಸಮಜಾಯಿಷಿ ಹೇಳಿದ ಮೇಲೆ ಬಿಟ್ಟುಹೋಗಿದ್ದ.

ಸ್ನೂಪಿ ಕಾಣುತ್ತಿಲ್ಲ ಎಂಬ ಸುದ್ದಿಯನ್ನು ನೀತಾಳಿಂದ ಕೇಳಿದಾಗ ಅವನು ಪ್ರಯೋಗಶಾಲೆಯಲ್ಲಿದ್ದ. ಮಾಡುತ್ತಿದ್ದ ಪ್ರಯೋಗವನ್ನು ಅರ್ಧಕ್ಕೇ ಬಿಟ್ಟು ಕಾಲೇಜಿಗೆ ಮರುದಿನ ಬರುವುದಿಲ್ಲ ಎಂದು ತಿಳಿಸಿ ಅಲ್ಲಿಂದಲೇ ಸೀದಾ ಸ್ನೂಪಿಯನ್ನು ಹುಡುಕಲು ಹೊರಟ. ಅವನು ಕಾರನ್ನು ನಡೆಸುತ್ತಿದ್ದ ವೇಗದಲ್ಲಿ ಪೋಲಿಸಿನವರ ಗಮನಕ್ಕೆ ಬರದೆ ತಪ್ಪಿಸಿಕೊಂಡುದಷ್ಟೆ ಅಲ್ಲದೆ, ಯಾರಿಗೂ ಯಮಪುರಿಯ ದಿಕ್ಕನ್ನು ತೋರಿಸದೇ ಬಂದುದೇ ಹೆಚ್ಚು. ಮನೆಯ ಮುಂದೆ

ನಿಲ್ಲಿಸಿದ ಕಾರಿಗೆ ಬೀಗವನ್ನೂ ಹಾಕದೆ ಒಳನುಗ್ಗಿದ. ಆದರೆ ಮನೆಯಲ್ಲಿ ಯಾರೂ ಇಲ್ಲವೆಂದು ತಿಳಿದಾಗ ನಿರಾಶೆಯಾಯಿತು. ಸ್ನೂಪಿ ಇದ್ದ ಪುಟ್ಟದಾದ ಅರಮನೆಯಂತಿದ್ದ ಗೂಡಿನ ಕಡೆ ನೋಡಿದ.

ಖಾಲಿಯಿದ್ದ ಮನೆ ಬಿಕೋ ಎನ್ನುತಿತ್ತು. ಸ್ನೂಪಿಗಾಗಿಯೇ ಅಚ್ಚುಕಟ್ಟಾಗಿ ಮೆತ್ತನೆ ಹಾಸಿಗೆ ಹೊದಿಕೆಗಳನ್ನು ಸೇರಿಸಿ ಮಾಡಿದ್ದ ಏರ್‌ಕಂಡಿಷನ್ ಕೊಠಡಿಯ ಕಂಡೀಷನ್ನನ್ನು ನೋಡಿ ದುಃಖ ಉಕ್ಕಿಬಂದಿತು. ಜೀವನದಲ್ಲಿ ಅವನು ಅದುವರೆವಿಗೆ ಅತ್ತಿದ್ದನೋ ಇಲ್ಲವೋ, ಅಂದು ಮಾತ್ರ ಧಾರಾಕಾರವಾಗಿ ಅತ್ತಿದ್ದ. ಇಲ್ಲೇ ಎಲ್ಲೋ ಇರಬಹುದೇನೋ ಎಂದು ಮನೆಯ ಸುತ್ತಮುತ್ತಿನ ಆವರಣದಲ್ಲೆಲ್ಲಾ ಹುಡುಕಾಡಿದ. ಆದರೆ ಎಲ್ಲೂ ಕಾಣದಾದಾಗ ನಿರಾಶೆಯಿಂದ ಫ್ಯಾಕ್ಟರಿಯ ಕಡೆಗೆ ನಡೆದ. ಅಲ್ಲಿ ಎಲ್ಲ ಕೆಲಸಗಾರರೂ ಒಂದೊಂದು ದಿಕ್ಕಿಗೆ ಹಂಚಿದಂತೆ ಹೋಗಿರುವುದೂ, ಈಗಾಗಲೇ ಒಂದು ದಿಕ್ಕಿನಿಂದ ನಕಾರಾತ್ಮಕ ಉತ್ತರ ಬಂದಿರುವುದೂ, ನೀತಾ ಉಪವಾಸ ಸತ್ಯಾಗ್ರಹ ಹೂಡಿರುವುದು, ಎಲ್ಲ ತಿಳಿಯಿತು. ತಾನೂ ಸ್ನೂಪಿ ಸಿಗುವತನಕ ಊಟ ಮಾಡುವುದಿಲ್ಲವೆಂದು ಘೋಷಿಸಿದ. ತನ್ನ ಕಾರನ್ನು ಅಲ್ಲಿಯೇ ಬಿಟ್ಟು ಅಲ್ಲೇ ಇದ್ದ ತಂದೆಯ ಕಾರನ್ನು ತೆಗೆದುಕೊಂಡು ಸ್ನೂಪಿಯನ್ನು ಹುಡುಕಹೊರಟ. ಸ್ನೂಪಿ ಸಿಗುವತನಕ ಮನೆಗೆ ಬರುವುದಿಲ್ಲ ಎಂತಲೂ ಘೋಷಿಸಿದ.

ಇತ್ತ ಬಹಳ ಉತ್ಸಾಹ ತೋರಿಸಿ ಸ್ನೂಪಿಯನ್ನು ಹುಡುಕಲು ಹೊರಟಿದ್ದರೂ ಕಿರೀಟನಿಗೆ ಅದು ಅಷ್ಟು ಪ್ರಿಯವಾದ ಕೆಲಸವೇನೂ ಆಗಿರಲಿಲ್ಲ. ಅವತ್ತಿನ ಕೆಲಸದಿಂದ ಸ್ವಲ್ಪಹೊತ್ತು ಬಿಡುಗಡೆ ಸಿಕ್ಕಿತು ಎನ್ನುವುದೇ ಒಂದು ಸಮಾಧಾನ ಅಷ್ಟೆ. ಇಲ್ಲದ ಉತ್ಸಾಹ ತೋರಿಸಿ ಹೇಳಿದಮೇಲೆ ಹೋಗಲೇಬೇಕಲ್ಲ, ಹೋಗಿದ್ದೂ ಆಯಿತು, ಇದೆಲ್ಲಿ ಹೋಗಿದೆಯೋ ಈ ಶ್ವಾನವನ್ನು ಹುಡುಕಿಕೊಂಡು ತಿರುಗುವ ಈ ಕೆಲಸ ನಮ್ಮ ಹಣೆಯಲ್ಲಿ ಬರೆದಿದ್ದರೆ ಯಾರೇನು ಮಾಡಿಯಾರು? ಪರೇಶನದೂ ಅದೇ ಅನಿಸಿಕೆ. ಹೇಳಿಕೇಳಿ ಬ್ರಾಹ್ಮಣ ಪುರೋಹಿತರ ಮಗನಾದ ಅವನಿಗೆ ಈ ಕೆಲಸ ಬೇಡವಾಗಿತ್ತು. ಆದರೇನು ಮಾಡುವುದು? ಯಜಮಾನನ ಅಪ್ಪಣೆಯನ್ನು ಮೀರಲು ಸಾಧ್ಯವೇ?

ಉತ್ತರ ದಿಕ್ಕಿನಲ್ಲಿ ಹೋಗಿ ಎಲ್ಲ ಕಡೆಯೂ ಹುಡುಕಿಯಾಯಿತು. ಎಲ್ಲೂ ಕಣ್ಣಿಗೆ ಬೀಳಲಿಲ್ಲ ಸ್ನೂಪಿ! ಬರಿಗೈಯಲ್ಲಿ ಹಿಂದಿರುಗಿ ಬಂದರು.

ಅತ್ತ ಪೂರ್ವ ದಿಕ್ಕಿನ ಕಡೆಗೆ ಸ್ನೂಪಿಯನ್ನು ಹುಡುಕಲು ಹೊರಟ ಮಹೇಶ ತಾನೇನೋ ದೊಡ್ಡ ಸಾಧನೆಯನ್ನು ಮಾಡುತ್ತಿದ್ದೇನೆ ಎನ್ನುವಂತೆ ಬಹಳ ಉತ್ಸಾಹದಿಂದ ಕೂಡಿದ್ದ. ರಸ್ತೆಯಲ್ಲಿ ಕಂಡ ಕಂಡ ಬಿಳಿಯ ಶ್ವಾನಗಳನ್ನು ಸ್ನೂಪಿಯೇ ಇರಬಹುದೆಂಬ ಸಂಶಯದ ದೃಷ್ಟಿಯಿಂದ ನೋಡುತ್ತಿದ್ದ. ಆದರೆ ಹತ್ತಿರ ಹೋದಕೂಡಲೆ ನಿರಾಶೆಯಿಂದ ಹಿಂತಿರುಗುತ್ತಿದ್ದ. ಕೆಂಪು ಸೀರೆ ಉಟ್ಟವರನ್ನೆಲ್ಲ ನನ್ನ ಹೆಂಡಂದಿರೇನೋ ಎಂದು ಭಾವಿಸುವ ಗಂಡನಂತಾಗಿದ್ದ. ಅವನ ಪ್ರಯತ್ನವೊಂದೂ ಸಫಲವಾಗಲಿಲ್ಲ. ದಕ್ಷಿಣದ ಕಡೆಗೆ ಹೊರಟ ರಾಜಣ್ಣ ಸ್ನೂಪಿಯ ಭಾವಚಿತ್ರದೊಂದಿಗೆ ಅಲ್ಲಲ್ಲಿ ಕಾರಿನಿಂದಿಳಿದು ಸಿಕ್ಕಿ ಸಿಕ್ಕಿದವರನ್ನು ಚಿತ್ರ ತೋರಿಸಿ ಕೇಳುತ್ತಿದ್ದ. 'ನೀವು ಈ ಚಿತ್ರದ ನಾಯಿಯನ್ನೇನಾದರೂ ನೋಡಿದಿರಾ?' ಅಂತ. ಆದರೆ ಯಾರಿಂದಲೂ ಸಕಾರತ್ಮಕ ಉತ್ತರ ಬರಲಿಲ್ಲ. ಚೆನ್ನ ಮಲ್ಲಿಕಾರ್ಜುನನ್ನು ಅರಸಿದ ಅಕ್ಕ ಮಹಾದೇವಿಯಂತೆ ಬಾಸ್‌ನ ಭಕ್ತ ಜಾನ್ ಸಹ ಕಂಡಕಂಡವರನ್ನು ನೀವು ನೋಡಿದಿರ? ನಮ್ಮ ಸ್ನೂಪಿಯನ್ನು ನೀವು ಕಂಡಿರ? ನೀವು ಕಂಡಿರ? ಬೆಳ್ಳಗೆ ಮೈತುಂಬ ಕೂದಲು ತುಂಬಿದ್ದ ಮುದ್ದಾದ ನಾಯಿ ಸ್ನೂಪಿಯನ್ನು ಕಂಡಿರಾ? ಎಂದು ಕೇಳಿದ್ದೇ ಕೇಳಿದ್ದು. ಹೊಳೆಯುವ ಕಣ್ಣಳಿದ್ದ ಸ್ನೂಪಿಯನ್ನು ನೀವು ಕಂಡಿರ? ಎಂದೂ ಕೇಳಿಯಾಯಿತು! ಇವನಿಗೇನೋ ನಾಯಿಯನ್ನು ಹುಡುಕಿ, ಬಾಸ್ ಬಳಿ ಭೇಷ್ ಎನಿಸಿಕೊಳ್ಳುವ ಹಂಬಲ. ಜನಕ್ಕೇನು? ಯಾರೂ ಇವನ

ವರ್ಣನೆಗೆ ಕಿವಿಗೊಡಲಿಲ್ಲ. ಆ ಸ್ನೂಪಿಗೂ ಇದರ ಪರಿವೆ ಇದ್ದಂತೆ ಕಾಣಲಿಲ್ಲ. ಹಾಗಾಗಿ ಅವನಿಗೂ ಸ್ನೂಪಿ ಸಿಗದೆ ಹೋಯಿತು.

ಸ್ನೂಪಿಯನ್ನು ಹುಡುಕಲು ಹೊರಟ ಎಲ್ಲರೂ ಒಬ್ಬೊಬ್ಬರೇ ಬರಿಗೈಯಲ್ಲಿ ಹಿಂದಿರುಗಿ ಬರತೊಡಗಿದರು. ಒಬ್ಬೊಬ್ಬರು ಬಂದಾಗಲೂ ನೀತಾ ಮತ್ತು ಆದಿತ್ಯ ಆಸೆಯ ಕಣ್ಣಿಂದ ಅವರ ಕಡೆಗೆ ನೋಡುತ್ತಿದ್ದರು. ಆದರೆ ಬಂದವರೆಲ್ಲರೂ ಅವರಿಗೆ ನಿರಾಶೆಯನ್ನೇ ಉಂಟುಮಾಡಿದರು. ಎಲ್ಲರಿಗಿಂತ ಕಡೆಗೆ ಬಂದವರು ಮೇರಿ ಮತ್ತು ಪ್ರಮೀಳ. ಅವರೂ ಹುಡುಕಿ ಹುಡುಕಿ ಸುಸ್ತಾಗಿ ಬರಿಗೈಯಲ್ಲಿ ಹಿಂದಿರುಗಿದರು. ಎಲ್ಲರ ಮುಖದಲ್ಲೂ ನಿರಾಶೆ ಎದ್ದು ಕಾಣುತಿತ್ತು.

ಬಾಸ್ ಮತ್ತು ಆತನ ಪತ್ನಿ ಇಬ್ಬರೂ ಅತ್ಮೀಯರೊಬ್ಬರನ್ನು ಕಳೆದುಕೊಂಡ ಮುಖವನ್ನು ಹೊತ್ತು ಕೂತಿದ್ದರು. ಸ್ನೂಪಿಯಿರದ ಜೀವನವನ್ನು ಊಹಿಸಿಕೊಳ್ಳಲೂ ಅವರಿಗೆ ಸಾದ್ಯವಿರಲಿಲ್ಲ.

ಸ್ನೂಪಿ ಇನ್ನಿಲ್ಲ, ನಮ್ಮ ಪಾಲಿಗೆ ಅವನ ಋಣ ಮುಗಿಯಿತು. ಇನ್ನೇನು ಮಾಡಲಾದೀತು. ನಡೆಯಿರಿ ಎಲ್ಲ ನಿಮ್ಮ ನಿಮ್ಮ ಕೆಲಸ ನೋಡಿ ಎಂದು ಬಹಳ ನಿರಾಶೆಯಿಂದ ಅಲ್ಲಿ ಸೇರಿದ್ದ ಎಲ್ಲರನ್ನೂ ಹೋಗಲು ಹೇಳಿದ ಬಾಸ್.

ನೀತಾ, ಅವಳಮ್ಮ, ಕಿರಿಯ ಮಗನನ್ನೂ ಕರೆದುಕೊಂಡು ಮನೆಗೆ ಹಿಂತಿರುಗಲು ಸಿದ್ಧವಾದರು. ಅನಿರೀಕ್ಷಿತ ಸಾವನ್ನು ಕಂಡವರಂತೆ ಬೆಚ್ಚಿದ ಅವರ ಮುಖಗಳು ಸಪ್ಪಗಾಗಿ ಉತ್ಸಾಹವನ್ನು ಕಳೆದುಕೊಂಡಿದ್ದವು.

ಅದುವರೆಗೆ ತಡೆಹಿಡಿದಿದ್ದ ಕಣ್ಣೀರು ಸ್ನೂಪಿ ಇನ್ನಿಲ್ಲ ಎಂಬ ಅನಿಸಿಕೆ ದೃಢವಾಗುತ್ತಲೇ ಕೆಳಗುರುಳಿತು. ಯಾರಿಗೂ ಕಾಣದಂತೆ ಕಣ್ಣೊರೆಸಿಕೊಳ್ಳುತ್ತಲೇ ಅಂಬಿಕ, ನೀತಾಳ ಜೊತೆಗೆ ಕಾರಿನೆಡೆಗೆ ನಡೆದಳು. ಇನ್ನೇನು ಕಾರಿನೊಳಗೆ ಕೂರಬೇಕು! ಅಷ್ಟರಲ್ಲಿ ರಾಜೀವನ ಕಾರು ಕಣ್ಣಿಗೆ ಬಿತ್ತು. ರಾಜೀವನ ನಗು ಮುಖ ಕಳೆದುಹೋದ ಆಸೆಯನ್ನು ಚಿಗುರಿಸಿದವು. ಅವನು ಕಾರು ನಿಲ್ಲಿಸಿ ಬಾಗಿಲು ತೆಗೆದ ಕೂಡಲೇ ಕೆಳಕ್ಕೆ ಜಿಗಿದ ಸ್ನೂಪಿಯನ್ನು ನೋಡಿ ಅವರ ಸಂತೋಷ ಹಿಡಿಸಲಾರದಾಯಿತು. ಓಡಿ ಹೋಗಿ ಬಾಚಿ ತಬ್ಬಿಕೊಂಡಳು ನೀತಾ. ಸ್ನೂಪಿ ಸಿಕ್ಕಿತೆಂಬ ಸಂತೋಷದ ಜೊತೆಗೆ ಮಕ್ಕಳ ಉಪವಾಸ ತಪ್ಪಿತಲ್ಲ ಎಂದು ನಿಟ್ಟುಸಿರು ಬಿಟ್ಟಳು ಅಂಬಿಕ. ಸ್ನೂಪಿ ಸಿಕ್ಕಿದ ಸುದ್ದಿ ಕೇಳಿದ ಕೂಡಲೇ ಮಾಡುತ್ತಿದ್ದ ಕೆಲಸ ನಿಲ್ಲಿಸಿ ಎಲ್ಲರೂ ಓಡೋಡಿ ಬಂದರು. ಸದ್ಯ ಸಿಕ್ಕಿತಲ್ಲ ಸ್ನೂಪಿ! ಎಲ್ಲರ ಬಾಯಲ್ಲೂ ಇದೇ ಉದ್ಗಾರ.

“ಹೌದೂ... ಎಲ್ಲರೂ ಹುಡುಕಿ ಹಿಂತಿರುಗಿದ್ದರು. ನಿನಗೆಲ್ಲಿ ಸಿಕ್ಕಿದ ಇವನು?” ಅಪ್ಪನ ಪ್ರಶ್ನೆ ರಾಜೀವನಿಗೆ.

"ಅಪ್ಪ, ಅದು ನನ್ನ ಅದೃಷ್ಟ ಅಂತಲೇ ಹೇಳಬೇಕು. ಹೊರಟು ಸ್ವಲ್ಪ ದೂರ ಹೋಗುತ್ತಲೇ ಕಾರಿನಲ್ಲಿ ಪೆಟ್ರೋಲ್ ಕಡಿಮೆ ಇರುವುದು ಅರಿವಿಗೆ ಬಂತು. ಅಲ್ಲೇ ಹತ್ತಿರದಲ್ಲಿದ್ದ ಗ್ಯಾಸ್ ಸ್ಟೇಷನ್‌ಗೆ ಹೋಗಿ ಪೆಟ್ರೋಲ್ ತುಂಬಿ ಹಣ ಕೊಡಲು ಕೌಂಟರ್ ಬಳಿ ನಡೆದೆ. ನನ್ನ ಆಶ್ಚರ್ಯಕ್ಕೆ ಬಾಗಿಲ ಬದಿಯಲ್ಲಿ ಏನನ್ನೋ ಕಳೆದುಕೊಂಡವರಂತೆ ಏಕಾಂಗಿಯಾಗಿ ನಿಂತಿದ್ದ ನಮ್ಮ ಸ್ನೂಪಿ ಕಾಣಿಸಿತು. ನನ್ನನ್ನು ಕಂಡಕೂಡಲೆ ಮೈಮೇಲೆ ಹಾರಿ ಬಂದಿತು. ಅಲ್ಲಿಂದ ಈಗ ನಿಮ್ಮ ಮುಂದೆ ಇದ್ದೇವೆ" ಅಂದ.

**

ಅದು ಸರಿ ಸ್ನೂಪಿ ಎಲ್ಲ ಬಿಟ್ಟು ಪೆಟ್ರೋಲ್ ಸ್ಟೇಷನ್ ಬಳಿ ಏನು ಮಾಡುತ್ತಿತ್ತು? ಇದನ್ನು ಸ್ನೂಪಿಯ ಬಾಯಲ್ಲೇ ಕೇಳಿದರೆ ಚೆನ್ನಲ್ಲವೇ?

ಕೆಲವು ತಿಂಗಳುಗಳ ಹಿಂದೆ ಇದೇ ಪೆಟ್ರೋಲ್ ಸ್ಟೇಷನ್ ಬಳಿ ನನಗೊಬ್ಬಳು ಗೆಳತಿ ಸಿಕ್ಕಿದ್ದಳು, ಪ್ರಥಮ ನೋಟದಲ್ಲೇ ನಮ್ಮಿಬ್ಬರಿಗೂ ಪ್ರೇಮವಾಯಿತು. ದೂರದಿಂದಲೇ ನೋಡಿದ್ದರೂ ಒಬ್ಬರನ್ನೊಬ್ಬರು ಮೆಚ್ಚಿಕೊಂಡಿದ್ದೆವು. ಕಣ್ಣುಗಳು ಮಾತಾಡಿಕೊಂಡಿದ್ದವು. ಕೆಲವೇ ಕ್ಷಣಗಳಲ್ಲಿ ಅವಳು ನನ್ನ ಹೃದಯವನ್ನು ಅಪಹರಿಸಿದ್ದಳು. ಅವಳೂ ನನ್ನನ್ನು ಇಷ್ಟಪಟ್ಟಳೆಂದು ಕಾಣುತಿತ್ತು. ನಮ್ಮನ್ನು ಹಿಡಿದಿಟ್ಟಿದ್ದ ಯಜಮಾನರುಗಳ ಬೆಲ್ಟುಗಳನ್ನೇ ಎಳೆದುಕೊಂಡು ಇಬ್ಬರೂ ಒಬ್ಬರನ್ನೊಬ್ಬರು ಮೈಗೆ ಮೈ ಸವರಿ ನಿಂತೆವು. ನಮ್ಮಿಬ್ಬರದೂ ಯಾವುದೋ ಜನ್ಮದ ಬಂಧವಿರಬೇಕು! ಇಲ್ಲದಿದ್ದರೆ ಪ್ರಥಮ ಬಾರಿಗೇ ಅಷ್ಟು ಆಕರ್ಷಣೆ! ಆದರೇನು? ನಮಗೆ ಉಂಟಾಗುವ ಭಾವನೆಗಳನ್ನು ತೋಡಿಕೊಳ್ಳಲು ಸಾಧ್ಯವೇ? ಮಾತೇಬಾರದ ಮೂಕ ಪ್ರಾಣಿಗಳು ನಾವು! ಅವಳಾ ಸಂಗದ ಸುಖ ಒಂಡೆರಡು ಕ್ಷಣಗಳು ಮಾತ್ರ!

ಲಿಲ್ಲಿಯನ್ನು (ನನ್ನಿಷ್ಟಕ್ಕೆ ನಾನೇ ಪ್ರೀತಿಯಿಂದ ಇಟ್ಟ ಹೆಸರು) ಕರೆತಂದವರು ತಮ್ಮ ಕೆಲಸ ಮುಗಿಸಿ ತಮ್ಮ ಪಾಡಿಗೆ ತಾವು ಹೊರಟುಹೋದರು. ಅಂದಿನಿಂದ ನನಗೆ ಊಟ ನಿದ್ರೆಗಳು ಬೇಡವಾದವು. ಅವಳನ್ನು ಎಂದು ನೋಡಿಯೇನೋ ಎಂಬ ತವಕ. ನನಗೆ ಊಟ ಹಿತವಾಗದೆಹೋಯಿತು. ಏನನ್ನೋ ಕಳೆದುಕೊಂಡವನಂತೆ ಮನಸ್ಸು ಯಾವಾಗಲೂ ಊದಾಸೀನವಾಗಿರುತ್ತಿತ್ತು. ಮಕ್ಕಳೊಡನೆ ಆಡುವುದಾಗಲೀ, ಅವರ ಮುಂದೆ ಬಾಲ ಆಡಿಸಿ ನಿಲ್ಲುವುದಾಗಲೀ ಸಂತೋ಼ಷ ತಾರದೆ ಹೋಗಿತ್ತು. ನಾನು ಊಟ ಬಿಟ್ಟಿದ್ದು, ಉದಾಸೀನವಾಗಿರುತ್ತಿದ್ದದ್ದು ಮನೆಯವರ ಗಮನಕ್ಕೆ ಬಂದಿತು. ನನಗೇನೋ ಅನಾರೋಗ್ಯವಾಗಿದೆ ಎಂದುಕೊಂಡು ಅವರು ನನ್ನನ್ನು ಡಾಕ್ಟರರ ಬಳಿಗೆ ಒಯ್ದರು. ಆ ಡಾಕ್ಟರು ಅದೇನೋ ಔಷಧಿಯನ್ನು ಕೊಟ್ಟು ಏನೋ ಹೇಳಿ ಕಳುಹಿಸಿದರು. ನನ್ನ ಮಾನಸಿಕ ಸ್ಥಿತಿಯನ್ನು ಅರಿತುಕೊಳ್ಳಲು ಅವರೇನು ಮನಶಾಸ್ತ್ರ ಓದಿದವರೇ? ನನ್ನ ಮಾನಸಿಕ ಸ್ಥಿತಿ ಅವರ ಅರಿವಿಗೆ ಬರದಾಯಿತು.

ಆಫೀಸಿಗೆ ಸಮೀಪದಲ್ಲೇ ಇದ್ದ ಈ ಪೆಟ್ರೋಲ್ ಸ್ಟೇಷನ್‌ಗೆ ಮನೆಯಿಂದ ಬರಲು ನನಗೆ ರಸ್ತೆ ತಿಳಿಯುತ್ತಿದ್ದಿಲ್ಲ. ಹಾಗಾಗಿ ಸುಮ್ಮನೆ ಮನಸ್ಸಿನಲ್ಲೇ ಕೊರಗುತ್ತಿದ್ದೆ. ಇಂದು ಅದೇನೋ ನನ್ನನ್ನೂ ಆಫೀಸಿಗೆ ಕರೆದು ತಂದರು. ನನಗಾದ ಸಂತೋಷ ಅಷ್ಟಿಷ್ಟಲ್ಲ. ಹೇಗಾದರೂ ಇಲ್ಲಿಂದ ತಪ್ಪಿಸಿಕೊಂಡು ಒಮ್ಮೆ ಹೋಗಿ ನನ್ನ ಲಿಲ್ಲಿಯನ್ನು ನೋಡಿ ಬರಬೇಕು ಎಂದು ಕಾಯುತ್ತಿದ್ದೆ. ಎಲ್ಲರೂ ತಮ್ಮ ತಮ್ಮ ಕೆಲಸದಲ್ಲಿ ಮಗ್ನರಾಗಿದ್ದ ಸಂದರ್ಭ ಉಪಯೋಗಿಸಿಕೊಂಡು ಓಡೋಡಿ ಬಂದೆ. ಮೊದಲನೆ ಬಾರಿಗೆ ನಾನು ರಸ್ತೆಗಿಳಿದಿದ್ದೆನಾದ್ದರಿಂದ ಕ್ಷಣಕ್ಕೊಮ್ಮೆ ಸುಂಯ್ ಸುಂಯ್ ಎಂದು ಬರುವ ವಾಹನಗಳಿಂದ ತಪ್ಪಿಸಿಕೊಂಡು ಓಡುವುದು ಕಷ್ಟವಾಯಿತು. ಅಂತೂ ಹೇಗೋ ನನ್ನ ನೆನಪನ್ನು ಅನುಸರಿಸಿ ಬಂದು ಸೇರಿದೆ, ಹೇಗೋ ನಾನು ನನ್ನ ಲಿಲ್ಲಿ ಸಂಧಿಸಿದ್ದ ಪೆಟ್ರೋಲ್ ಸ್ಟೇಷನ್ ತಲುಪಿದೆ. ಆದರೆ ನನಗೆ ನಿರಾಶೆ ಕಾದಿತ್ತು. ನಾನು ಹುಡುಕಿಬರುವೆನೆಂಬುದು ಅವಳಿಗೇನು ಗೊತ್ತು? ಅದಲ್ಲದೆ ಅವಳು ಇರುವುದು ಎಲ್ಲೋ? ಅ ದಿನ ಅದೇನೋ ಅವಳನ್ನೂ ಕರೆದುತಂದಿದ್ದರು. ಮತ್ತೆ ಎಂದಾದರೂ ಬಂದಿದ್ದಳೋ ಇಲ್ಲವೋ ಬಲ್ಲವರಾರು? ಅವಳ ಮನೆಯವರಿಗೆ ಅವಳ ಕಷ್ಟ ಅರಿವಾಗಿರಬೇಕಲ್ಲ! ಅವಳನ್ನೂ ನನ್ನಂತೆಯೇ ಡಾಕ್ಟರರ ಬಳಿ ಕೊಂಡೊಯ್ದಿರಬೇಕು. ಅದಕ್ಕಿಂತ ಹೆಚ್ಚೇನು ಮಾಡಿಯಾರು? ಅವಳೂ ನನ್ನಂತೆಯೇ ಪರಿತಪಿಸುತ್ತಿರಬೇಕು! ಈ ಮನುಷ್ಯರಿಗೇನು? ತಮ್ಮ ಸುಖ ಮುಖ್ಯ. ತಮ್ಮ ಸಂತೋಷವೊಂದನ್ನು ಬಿಟ್ಟರೆ ಬೇರೇನೂ ಇಲ್ಲ. ಚಿಕ್ಕ ಆದಿತ್ಯ ಚೆಂಡುಗಳನ್ನು ಎಸೆದಾಗ ಓಡಿಹೋಗಿ ತಂದುಕೊಟ್ಟು ಆಟವಾಡುವುದಕ್ಕೆ! ಮನೆಗೆ ಬಂದವರ ಎದುರು ನನಗೆ ಕಲಿಸಿರುವ ಶಿಸ್ತಿನ ಪಾಠವನ್ನು ಇವರು ಹೇಳಿದಂತೆ ಮಾಡಿ ತೋರಿಸಿ ಒಪ್ಪಿಸಿ ಅವರಿಗೆ ಹೆಮ್ಮೆಯುಂಟುಮಾಡುವುದಕ್ಕೆ, ನಾನಿದ್ದರೆ ಸಾಕು. ಕಾಲಕಾಲಕ್ಕೆ ಒಂದಿಷ್ಟು ತಿನ್ನಲು ಕೊಟ್ಟು, ದಿನಕ್ಕೊಮ್ಮೆ ವಾಕಿಂಗ್ ಕರೆದೊಯ್ದರೆ ಆಯಿತು. ಮಾನೆಗೆ ಬಂದ ಕೂಡಲೆ ನಾನು ಅವರ ಬಳಿ ಓಡಿಹೋದರೆ ಒಮ್ಮೆ ಮೈ ಸವರಿ ಹಾಯ್ ಎಂದರೆ ಅಲ್ಲಿಗೆ ಅವರ ಜವಾಬ್ದಾರಿ ಮುಗಿದಂತೆ ಎಂದು ತಿಳಿದಿದ್ದಾರೆ.

ಇವರಿಗೇನು ಗೊತ್ತು ನನಗೂ ಮನಸ್ಸಿದೆ, ಆಸೆಯಿದೆ, ನನ್ನದೇ ಜೀವನ ಮಾಡುವ ಬಯಕೆಯಿದೆ ಅಂತ! ನನಗೂ ಜೀವನ ಸಂಗಾತಿ ಬೇಕಾಗಿರುತ್ತಾಳೆ. ಅವಳ ಜೊತೆಯಲ್ಲಿ ಬಾಳುವೆ ಮಾಡುವ ಕನಸನ್ನು ನಾನೂ ಕಾಣುತ್ತಿರುತ್ತೇನೆ ಎಂದು! ನನ್ನ ದುಃಖವನ್ನು ಹೇಳಿಕೊಳ್ಳಲು ನನಗೇನು ಆ ದೇವರು ಮನುಷ್ಯರಂತೆ ಮಾತನಾಡುವ ಶಕ್ತಿಯನ್ನು ಕೊಟ್ಟಿದ್ದಾನೆಯೇ? ಅಥವಾ ನಮ್ಮ ಮಾತು ಅವರಿಗೆ ಅರ್ಥವಾಗುವಂತಿದೆಯೇ? ಏನು ಮಾಡುವುದು ನಾ ಮಾಡಿದಾ ಕರ್ಮ ಬಲವಂತವಾದರೆ!

ಹಾಗಾದರೆ ನಾನೇಕೆ ಹಿಂದಕ್ಕೆ ಬಂದೆ ಎಂದು ಕೇಳುತ್ತೀರಿ ಅಲ್ಲವೆ? ನನ್ನ ಗೆಳತಿಯಂತೂ ಸಿಗಲಿಲ್ಲ. ಸಿಕ್ಕಿರುವ ಇವರ ಆಶ್ರಯವನ್ನೂ ಕಳೆದುಕೊಂಡರೆ ನನ್ನ ಅಲ್ಲಿ ಮತ್ತೆ ಸಿಗುವ ಅವಕಾಶವೂ ಕಳೆದುಹೋದೀತು. ಅಷ್ಟೇ ಅಲ್ಲ ಈಗ ನನಗೆ ಸಿಕ್ಕಿರುವ ಈ ಅವಕಾಶ ನನ್ನ ಹೊಟ್ಟೆಬಟ್ಟೆಗೆ ಕೊರತೆ ಇಲ್ಲದಂತಿದೆ. ಇದನ್ನೂ ಕಳೆದುಕೊಂಡರೆ ನನ್ನನ್ನೂ ತೆಗೆದುಕೊಂಡುಹೋಗಿ ಅನಾಥ ನಾಯಿಗಳೊಡನೆ ಸೇರಿಸಿಬಿಟ್ಟರೆ! ಮತ್ತೆಂದಾದರೂ ನನ್ನ 'ಅಲ್ಲಿ' ಸಿಗಬಹುದಾದ ಅವಕಾಶವೂ ಕಳೆದುಹೋದೀತು. ಅದಕ್ಕೇ ಸದ್ಯ ಯಾವ ಪುಂಡಪೋಕರಿಗಳ ಕೈಗೂ ಸಿಗದೆ ಇವರನ್ನು ಕಂಡ ಕೂಡಲೆ ಓಡಿಬಂದದ್ದು!

ಇವರೊಡನೆ ಇದ್ದರೆ ಮಾತ್ರ ಆ ಅವಕಾಶ ಮರಳಿ ಬರಬಹುದು! ಅದೇ ನಿರೀಕ್ಷೆಯಲ್ಲೇ ಇಂದಿಗೂ ನಾನು ದಿನಕಳೆಯುತ್ತಿದ್ದೇನೆ. ನಾನು ದೇವರಿಗೆ ಮೊರೆಯಿಡುವುದೊಂದೇ 'ನನ್ನ ಅಲ್ಲಿ ನನಗೆ ಬೇಗ ಸಿಗುವಂತೆ ಮಾಡು' ಎಂದು.

**

"ನೀವೆಲ್ಲ ಹೋಗಿ ನಿಮ್ಮ ನಿಮ್ಮ ಕೆಲಸ ಮಾಡಿ. ಇವತ್ತಿನ ಕೆಲಸವೆಲ್ಲ ಹಾಳು ಈ ಸ್ನೂಪಿಯಿಂದ. ಕರ್ಕೊಂಡು ಬರ್ಬೇಡಿ ಅಂದ್ರೆ ಕೇಳೋಲ್ಲ ಇಲ್ಲಿಗೆ ಕರ್ಕೊಂಡ್ಬಂಡು ಸಮಸ್ಯೆಗಳನ್ನ ತರ್ತಾರೆ", ಬಾಸ್ ಸ್ನೂಪಿ ಸಿಕ್ಕಿತೆಂಬ ಸಂತೋಷವಿದ್ದರೂ ಕೆಲಸ ಹಾಳಾಗಿ ನಷ್ಟವಾಯಿತಲ್ಲ ಎಂದು ಗೊಣಗಾಡಿದ.

"ನೀತಾ, ಸ್ನೂಪೀನ ಎಲ್ಲೂ ಬಿಡಬೇಡ. ಮತ್ತೆ ತಪ್ಪಿಸಿಕೊಂಡಾನು. ಬಾ ಕಾರಿನಲ್ಲಿ ಅವನನ್ನೂ, ಜೊತೆಗೆ ಅದಿತ್ಯನನ್ನೂ ಕೂರಿಸಿಕೊಂಡು ಕುಳಿತುಕೋ ಹೋಗೋಣ. ಸದ್ಯ ಇನ್ನ್ಯಾವತ್ತೂ ಎಲ್ಲೂ ಇವನನ್ನು ಒಬ್ಬನನ್ನೇ ಬಿಡಬಾರದು", ನಿಜವಾಗಿಯೂ ಸ್ನೂಪಿಯ ಬಗ್ಗೆ ಚಿಂತಿಸುತ್ತಿದ್ದ ಅಂಬಿಕಾಳ ಎಚ್ಚರಿಕೆಯ ಮಾತು.

"ಸರಿಯಾಗಿ ಕರೆದುಕೊಂಡು ಹೋಗು ಅಮ್ಮಾ.", ಮಗನ ತಾಕೀತು.

ಅಂತೂ ಸ್ನೂಪಿ ತನ್ನ ಪ್ರಣಯ ಪ್ರಸಂಗವನ್ನು ಹೇಳಲಾರದೆ ಸಂಕಟದಿಂದ ಮತ್ತೆ ಮನೆ ಸೇರಿತು.

***

ಕೇಳು ರಾಧೆ

– ಶುಭಶ್ರೀ ಪ್ರಸಾದ್

ಸಾವಿರ ಕಣ್ಣ ನವಿಲ
ಗರಿಯ ರಾಶಿಯಲಿ,
ನಲಿದ ನೂರಾರು ಹೆಣ್ಣುಗಳಲಿ
ಹುಡುಕಿದೆ ನಿನ್ನೇ

ಬಿದಿರ ಕೊಳಲ ಆ ಪುಟ್ಟ
ಸಂದುಗೊಂದುಗಳಲಿ
ಹಾದ ನನ್ನುಸಿರು
ಅದು ನೀನೇ

ಆಡಿದ ಪಿಸುಮಾತು
ಹಾಡಿ ರಾಗಗಳೆಷ್ಟೋ
ಕಿವಿ ಎದೆಯಾದದ್ದು ಗೋವು ಮತ್ತು
ನಾವು ನಾವೇ

ನನಗಿಂತ ಹಿರಿಸಿರಿ ನೀ
ನಕ್ಕ ಅಣಕುಗಳೆಷ್ಟೋ
ಎದೆಯೊಲವಿಗೆ ಬೇಲಿಯೇ?
ದಾಟಿದ್ದೀಗ ಕಾವ್ಯವೇ

ಹೊಯ್ದಾಡಿಲ್ಲ ಮನ
ಚಣಮಾತ್ರವೂ ನಾವಿಬ್ಬರಿರುವಾಗ
ನಿನ್ನ ಮಡಿಲೇ ಅಮೃತ
ಎನ್ನ ದಣಿವಿಗೆ

ಗೋಕುಲ ಬಿಟ್ಟದ್ದೇ ನೆಪ
ಉಳಿದೆ ನೀ ದೂರವೇ ದೂರ
ನಾ ಮಹಾರಾಜನಲ್ಲ ಸಖಿ
ನಿನದೇ ಕೃಷ್ಣ

ನಿನ್ನ ನಿಟ್ಟುಸಿರು ಬೇಗೆ
ಮುಳ್ಳಾಗಿದೆ ನನ್ನ ಎದೆತುಂಬ
ನಿದ್ರಿಸದೆ ಗುಳಿಬಿದ್ದ ನಿನ್ನ ಕಣ್ಣು
ಚುಚ್ಚುತಿದೆ ನನ್ನ

ಎಲ್ಲಿದ್ದರೂ ನಾ ಗೊಲ್ಲನೇ
ಹಾಲು ಮೊಸರು ಬೆಣ್ಣೆ
ನೀನೆಂದರೆ ಪ್ರಾಣವಿಂದಿಗೂ
ನಿನ್ನಾಣೆ

ಆಡಬೇಕಿದೆ ಇನ್ನೂ ಇನ್ನೂ
ಬಾ ರಾಧೆ ಬಾರೇ
ಉಳಿದುಹೋಗಿದೆ ನನ್ನ ಕೊಳಲು
ನಿನ್ನಲ್ಲೇ





ಡಾ.ಶುಭಶ್ರೀಪ್ರಸಾದ್

ಅವರವರ ಪಾಡು

– ಶುಭಶ್ರೀ ಪ್ರಸಾದ್

ಹಸಿದ ಹೊಟ್ಟೆಗೆ
ಊಟದ್ದೇ ಚಿಂತೆ,
ಅವರ ಸುತ್ತಮುತ್ತ
ಚಿತ್ರ ಕ್ಲಿಕ್ಕಿಸುವವರದೇ ಸಂತೆ

ಬೆನ್ನು ಹತ್ತಿ
ಹತ್ತಿಯಾದ ಹೊಟ್ಟೆಗೆ
ಕೊಬ್ಬಿದ ಡುಬ್ಬುಹೊಟ್ಟೆ
ನೋಟದ ಸವಾಲು

ಹನಿ ಹಾಲಿಲ್ಲದೆ
ನಾಲಗೆ ಮರುಭೂಮಿ,
ಜೊಲ್ಲು ಸುರಿಸುವರ
ಸರತಿ ಸಾಲು ಇವರ ಮುಂದೆ

ದುರ್ಭರ ಬದುಕು
ತೂಗಿರೆ ಉಸಿರ ಉಯ್ಯಾಲೆ,
ಬಣ್ಣದ ಫ್ರೇಮಿನೊಳಗೆ
ಬವಣೆಯದೇ ಆಟ

ಮುಚ್ಚಲು ಹರಿದ
ಚಿಂದಿಯೂ ಇರದ ಮೈಯ
ನೋಡಲು ಸಾವಿರಾರು
ಕರಿ ಕೋಟುಗಳ ದಾಳಿ.

ಕಾಸುಕಾಸಿಗೂ
ಮೈಮುರಿದು ಬೆವರಮಳೆ,
ತೆಗೆದ ಇವರದೇ ಚಿತ್ರಕೆ
ಡಾಲರುಗಳ ಹೊಳೆ



-ಶುಭಶ್ರೀಪ್ರಸಾದ್

ಸಮನ್ವಯ ಸಮಿತಿ ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ 218 – 22.10.2023

ಅಧ್ಯಕ್ಷರ ಅನಿಸಿಕೆಗಳು

– ಮಾಲತಿ ಶ್ರೀನಿವಾಸನ್

ದಸರಾ ಹಬ್ಬದ ಈ ವಿಶೇಷ 218ನೇ ದಾಸೋಹಕ್ಕೆ ಅಧ್ಯಕ್ಷತೆ ವಹಿಸುವ ಜವಾಬ್ದಾರಿ/ಖುಷಿ ಕೊಟ್ಟ ಸಂಚಾಲಕ ವರ್ಗದವರಿಗೆ ನನ್ನ ನಮನ ಸಲ್ಲಿಸುತ್ತಾ, ಎಲ್ಲಾ ದಾಸೋಹಿ ಬಂಧುಗಳಿಗೆ ದುರ್ಗಾಷ್ಟಮಿ ನವರಾತ್ರಿಯ ಶುಭ ಹಾರೈಕೆಗಳೊಡನೆ ನಿಮ್ಮೆಲ್ಲರ ಪ್ರಸ್ತುತಿಗೆ ನನ್ನ ಅನಿಸಿಕೆಗಳನ್ನು ನಿಮ್ಮ ಮುಂದಿಡುತ್ತಿದ್ದೇನೆ.

ಈ ವೇದಿಕೆಯ ಶಿಸ್ತು ಮತ್ತು ಪ್ರತಿ ದಾಸೋಹದಲ್ಲಿ ಪ್ರಸ್ತುತಿಗೊಳ್ಳುತ್ತಿರುವ ಕತೆ, ಕವನ ಹಾಗೂ ಲೇಖನಗಳ ವೈವಿಧ್ಯತೆ ಶ್ಲಾಘನೀಯ ಎಂದು ಹೇಳುತ್ತಾ, ಪ್ರಸ್ತುತಿಗಳ ಬಗ್ಗೆ ನನ್ನ ಮಾತು.

1. ಶ್ರೀಮತಿ ಶೀಲಾ ಅರಕಲಗೂಡು – 'ಮಿನುಗುವ ನಕ್ಷತ್ರಗಳು':

ಮೊದಲ ಪ್ರಸ್ತುತಿ ಹಿರಿಯ ಲೇಖಕಿ ಶ್ರೀಮತಿ ಶೀಲಾ ಅರಕಲಗೂಡು ಅವರ "ಮಿನುಗುವ ನಕ್ಷತ್ರಗಳು" ಲಹರಿ. ಕತ್ತಲೆಯ ರಾತ್ರಿಯಲ್ಲಿ ಆಕಾಶದಲ್ಲಿ ಹೊಳೆಯುವ ಸಾವಿರಾರು ನಕ್ಷತ್ರಗಳು ಒಮ್ಮೆಗೆ ಭೂಮಿಗಿಳಿದು ಬಂದರೆ ಎಷ್ಟು ಹೊಳಪು, ಎಷ್ಟು ಸೊಗಸು. ಕಲ್ಪನೆಯ ಭಾವ ಲಹರಿ ,ಹೊಮ್ಮಿದ್ದು, ತಾವು ಬಾಲ್ಯದಲ್ಲಿ ಓದಿದ ಶಾಲೆಗೆ ಅತಿಥಿಯಾಗಿ ಹೋದಾಗ ಮುಂದೆ ಕುಳಿತಿದ್ದ ಪುಟ್ಟ ಮಕ್ಕಳ ಸಮೂಹ, ಅವರ ಕಂಗಳಲ್ಲಿದ್ದ ಸಂತಸದ ಹೊಳಪು ಕವಿಯತ್ರಿಗೆ ಆಗಸದ ನಕ್ಷತ್ರಗಳನ್ನು ನೆನಪಿಸುತ್ತದೆ, ಅವರ ಸಾಲುಗಳಲ್ಲಿ ಲೇಖನ, ಕವಿತೆ ಎರಡೂ ಕಾವ್ಯಮಯ, ಬರೆಯುವುದು ಒಂದು ಕಲೆ. ಅದನ್ನು ಓದುಗರ ಕಿವಿಗೆ ಹಿತವಾಗಿ ಪ್ರಸ್ತುತಿಪಡಿಸುವುದು ಇನ್ನೊಂದು ಕಲೆ. ಶೀಲಾ ಅವರ ಕಂಠ ಮಾಧುರ್ಯದಲ್ಲಿ ಭಾವ ಲಹರಿ ಕೇಳುಗರಿಗೆ ಸುಂದರ ಅನುಭೂತಿ ಕಣ್ಣ ಮುಂದೆ, ಲೇಖನದಲ್ಲಿನ ನಕ್ಷತ್ರಗಳ ಮಿನುಗು ಕವಿಯತ್ರಿಯ ಕಂಗಳಲ್ಲಿ ಪ್ರತಿಬಿಂಬಿಸಿದಂತೆ ಎಲ್ಲರನ್ನೂ ಭಾವಲಹರಿಯಲ್ಲಿ ತೇಲಿಸಿದ ಶ್ರೀಮತಿ ಶೀಲಾ ಅರಕಲಗೂಡು ಅವರಿಗೆ ಅಭಿನಂದನೆಗಳು.

2. ಶ್ರೀ ಎನ್.ವಿ. ರಘುರಾಮ್ – 'ನೀಲಾಂಜನೆ ಮತ್ತು ಇತರ ಕಥೆಗಳು' ಪುಸ್ತಕ ಪರಿಚಯ:

ಇತ್ತೀಚೆಗೆ ಇದೇ ವೇದಿಕೆಯಲ್ಲಿ ಬಿಡುಗಡೆಯಾದ ಶ್ರೀಮತಿ ಗಿರಿಜಾ ರಾಜ್ ಅವರ "ನೀಲಾಂಜನೆ ಮತ್ತು ಇತರ ಕಥೆಗಳು" ಪುಸ್ತಕದ ವಿಸ್ತೃತ ಪರಿಚಯ ಲೇಖನವಿದು. ಗಿರಿಜಾ ರಾಜ್ ಅವರು ವೇದಿಕೆಯ ಸದಾ ಸಕ್ರಿಯ ಜೀವನೋತ್ಸಾಹಿ ಲೇಖಕಿ ಎಂದು ಅವರನ್ನು ಪರಿಚಯಿಸುತ್ತಾ, "ನಾನು ಕಂಡಂತೆ" ಅಂತ ಈ ಪುಸ್ತಕದ ಪರಿಚಯ ಸೊಗಸಾಗಿ ನಮ್ಮೆಲ್ಲರ ಮುಂದೆ ತೆರೆದಿಟ್ಟಿದ್ದಾರೆ, ರಘುರಾಮ್ ಅವರು.

ಆದಿಕವಿ ಪಂಪನ ರಚನೆಯಲ್ಲಿನ ನೀಲಾಂಜನೆಯ ನೃತ್ಯ ಪ್ರಸಂಗವನ್ನು ಲೇಖಕಿ ಕಾವ್ಯತ್ಮಕವಾಗಿ ಕತೆಯಲ್ಲಿ ಬಿಂಬಿಸಿದ್ದಾರೆ ಎಂದು ಹೇಳುತ್ತಾ, ಸಂಕಲನದ ನೀಳ್ಗತೆಯನ್ನು ಪರಿಚಯ ಮಾಡಿ, ನಂತರ ಇತರ ಕಥೆಗಳ ವಸ್ತು ವಿಷಯದ ಬಗ್ಗೆ, ಘಟನೆಗಳ ಸಾರ್ವತ್ರಿಕತೆಯ ಬಗ್ಗೆ, ಓದುಗರ ಮನಸ್ಥಿತಿಯ ಮೇಲೆ ಬೀರುವ ಪ್ರಭಾವದ ಬಗ್ಗೆ ಸೂಕ್ತ ವಿವರಣೆ ನೀಡಿದ್ದಾರೆ ಲೇಖನದಲ್ಲಿ. ಈ ಲೇಖನ ಓದಿದ ನಂತರ ಖಂಡಿತ ಪುಸ್ತಕ ಓದುವ ಕುತೂಹಲ ಕೆರಳುತ್ತೆ

ಓದುಗರಲ್ಲಿ. ಈ ಹೊಸ ಸಂಕಲನದ ಬಿಡುಗಡೆಗೆ ಗಿರಿಜಾ ರಾಜ್ ಅವರಿಗೆ ಮತ್ತು ಸೂಕ್ತ ಪುಸ್ತಕ ಪರಿಚಯ ನೀಡಿದ ರಘುರಾಮ್ ಅವರಿಗೆ ಅಭಿನಂದನೆಗಳು.

೩. ಶ್ರೀಮತಿ ಕಮಲಾಕ್ಷಿ – 'ಬಂಗಾರದೊಡವೆ ಬೇಕೆ':

ಲೋಹಗಳಲ್ಲೆಲ್ಲ ಅತಿ ಶ್ರೇಷ್ಠವೆನಿಸಿ ಮಹತ್ವ ಪಡೆದು ಎಲ್ಲರ ಗಮನ ಸೆಳೆಯುವ ಬಂಗಾರವನ್ನು ಮಾಯಾವಿ ಎಂದು ಕರೆಯುತ್ತಾ, ಲೇಖಕಿ ಈ ಲೋಹದ ಗುಣವಿಶೇಷ, ಉಪಯುಕ್ತತೆ, ಹೊಳಪು ಮೆಚ್ಚುತ್ತಾ, ಹಲವಾರು ನೂತನ ಪುರಾತನ ವಿನ್ಯಾಸಗಳ ಒಡವೆಗಳನ್ನು ಹೆಸರಿಸಿ, ಹಿಂದೂ ಸಂಪ್ರದಾಯದಲ್ಲಿ ವಿವಾಹ ಸಂದರ್ಭದಲ್ಲಿ ಮಹತ್ವ ಪಡೆದ ತಾಳಿಯ ಮಾನ್ಯತೆಯ ಬಗ್ಗೆ ಹೇಳುತ್ತಾರೆ. ಜಗತ್ತಿನ ಆರ್ಥಿಕತೆಯ ಏರಿಳಿತಗಳಿಗೆ ಕಾರಣೀಭೂತವಾದ ಈ ಲೋಹದ ಗುಣವಿಶೇಷಗಳ ಬಗ್ಗೆ ವಿಸ್ತೃತ ವರದಿಯ ಲೇಖನದಲ್ಲಿ, ಪುರಾಣ ಇತಿಹಾಸಗಳಲ್ಲಿನ ಅನೇಕ ಪರಿಚಿತ ಪಾತ್ರಗಳ ವಿವರ ಸಮೀಕರಿಸಿ, ಕನಕದಾಸನಾದ ತಿಮ್ಮಪ್ಪನ ಬದಲಾವಣೆಗೆ ಕಾರಣವಾದ ಈ ಲೋಹ ದಾಸ ಸಾಹಿತ್ಯದಲ್ಲೂ ವಿಜೃಂಭಿಸಿದೆ ಎನ್ನುತ್ತಾರೆ. ಪ್ರಕೃತಿಯ ಸುಂದರತೆಯಲ್ಲಿ ಮನುಷ್ಯನ ನಡವಳಿಕೆಯಲ್ಲಿ ಈ ಬಂಗಾರದ ಬಣ್ಣದಬೆಡಗು ತುಂಬಿದೆ ಎನ್ನುತ್ತಾರೆ ಕಮಲಾಕ್ಷಿ ಅವರು. ಈ ಬಂಗಾರಕ್ಕೆ ಇರುವ ಸ್ಥಿರತೆ, ವರುಷಗಳಾದರೂ ಮಾಸದ ಹೊಳಪು ಗಟ್ಟಿತನ ಮನುಷ್ಯನ ವ್ಯಕ್ತಿತ್ವದಲ್ಲಿ ಇದ್ದರೆ ಎಷ್ಟು ಚೆನ್ನ ಅನ್ನುತ್ತಾರೆ ಲೇಖಕಿ ಕೊನೆಯಲ್ಲಿ, ಸತ್ಯವಾದ ಮಾತು ಎಂದು ಅನಿಸುತ್ತೆ ಓದುಗರಿಗೆ. ಅಭಿನಂದನೆಗಳು ಕಮಲಾಕ್ಷಿ ಅವರಿಗೆ.

4. ಶ್ರೀ ವಿಠ್ಠಲ್ ಇಜೇರಿ – 'ವಿಜ್ಞಾನ ಮತ್ತು ಸಿದ್ದಣ್ಣ':

ಶ್ರೀ ವಿಠ್ಠಲ್ ಇಜ್ಜೇರಿಯವರ ಲೇಖನ ಹೊರನೋಟಕ್ಕೆ ಹಾಸ್ಯ ಲೇಖನದಂತೆ ಕಂಡರೂ ಗುರು ಶಿಷ್ಯರ ಸಂಬಂಧಗಳ ಬಗ್ಗೆ ಗುರುತ್ವದ ಜವಾಬ್ದಾರಿಯ ಬಗ್ಗೆ ಎಚ್ಚರಿಕೆ ನೀಡುವಂತಿದೆ. ಸಿದ್ದಣ್ಣ ವಿಜ್ಞಾನದ ಕಲಿಕೆಯಲ್ಲಿ ಬೋಧಿಸಿದ ಪಾಠಗಳಲ್ಲಿನ ತತ್ವಗಳನ್ನು ದೈನಂದಿನ ಚಟುವಟಿಕೆಗೆ ಸಮೀಕರಿಸಿ ಉತ್ತರಗಳನ್ನು ನೀಡುತ್ತಿದ್ದದ್ದು, ಪ್ರಶ್ನೆ ಕೇಳುತ್ತಿದ್ದದ್ದು, ಪಾಠ ಮಾಡುವ ಅಧ್ಯಾಪಕರಿಗೆ ತಲೆನೋವು ಅನಿಸಿದರೂ ಕೇಳಿದ ಪ್ರಶ್ನೆಗೆ ಅವನು ಕೊಟ್ಟ ಉತ್ತರ ಸೂಕ್ತ ಅನಿಸುವುದಿಲ್ಲವೇ? ಆರ್ಕಿಮಿಡಿಸ್ ಅಥವಾ ನ್ಯೂಟನ್ ಸಿದ್ದಣ್ಣನ ಉತ್ತರ ಕೇಳಿದ್ದರೆ ನಕ್ಕು ಬೆನ್ನು ತಟ್ಟುತ್ತಿದ್ದರೇನೋ ಎಂದು ಅನಿಸಿತು ನನಗೆ. ಹಾಸ್ಯ ಉತ್ತರ ಬದಿಗಿಟ್ಟು ಪಠ್ಯಕ್ರಮದ ರೂವಾರಿಗಳಾದ ಅಧ್ಯಾಪಕರನ್ನು ಯೋಚಿಸುವಂತೆ ಮಾಡಬೇಕಾದ ಲೇಖನ ಇಜ್ಜೇರಿಯವರದು. ಅಭಿನಂದನೆಗಳು ಸರ್.

5.ಶ್ರೀಮತಿ ಪೂರ್ಣಿಮಾ ಭಗವಾನ್–'ಸಾಮಾಜಿಕ ಜಾಲತಾಣಗಳು ಮತ್ತು ಉಪಯೋಗಗಳು':

ಈ ಲೇಖನ ಬಿಸಿ ಬಿಸಿ ವಾದ ವಿವಾದಗಳಿಗೆ, ಚರ್ಚಾ ಸ್ಪರ್ಧೆಗಳಿಗೆ ಸೂಕ್ತವಾದ ಶೀರ್ಷಿಕೆಯ ಪ್ರಸ್ತುತಿ. ಜಾಲತಾಣದ ಇತಿಹಾಸದ ಬಗ್ಗೆ ಆವಿಷ್ಕರಿಸಿದ ಸಂಸ್ಥೆ ಪ್ರಯೋಗ ಶಾಲೆಗಳ ಬಗ್ಗೆ ವಿಸ್ತೃತ ಮಾಹಿತಿ ನೀಡುತ್ತಾ ಸಾಮಾಜಿಕ ಸರ್ಕಾರಿ ಮತ್ತು ವೈಯಕ್ತಿಕ ಜಾಲತಾಣಗಳ ವಿಷಯದ ಉಪಯುಕ್ತತೆಯನ್ನು ಸಮೀಕರಿಸಿದ್ದಾರೆ. ಜೊತೆಗೆ ಅತಿಯಾದರೆ ಅಮೃತವೂ ವಿಷ ಎನ್ನುತ್ತಾ ಅತಿಹೆಚ್ಚಿನ ಅವಲಂಬನೆ ಅವಗಢಗಳಿಗೆ ಕಾರಣ ಎಂದೂ ಎಚ್ಚರಿಕೆ ನೀಡಿದ್ದಾರೆ. ಸಾಮಾಜಿಕ ಜಾಲತಾಣಗಳು ಸಮಾಜದಲ್ಲಿ ಸಾಂಸ್ಕೃತಿಕ, ಸಾಹಿತ್ಯಿಕ ಮತ್ತು ಸಮಾಜದ ಬೆಳವಣಿಗೆಗೆ ಪೂರಕಗಳು ಎಂದು ಸಮರ್ಥಿಸಲು ಪ್ರಾಸಬದ್ಧವಾದ ನಾಲ್ಕು ಸುಂದರ ಮುಕ್ತಕಗಳನ್ನೂ ಓದುಗರ ಮುಂದೆ ತೆರೆದಿಟ್ಟಿದ್ದಾರೆ. ಸಾಮಾಜಿಕ ಜಾಲತಾಣಗಳ ಕಾರ್ಯವೈಖರಿ ನಮಗಂತೂ ಪೂರಕವೇ ಎಂದು ಹೇಳುತ್ತಾ, ಕೋವಿಡ್‌ನಂತಹ ಗಂಭೀರ ಪರಿಸ್ಥಿತಿಯಲ್ಲೂ ಸಕ್ರಿಯವಾಗಿ ವೈವಿಧ್ಯಮಯ ಕಾರ್ಯಕ್ರಮ ನಡೆಸಿದ ನಮ್ಮ ವೇದಿಕೆಯೇ ಇದಕ್ಕೆ ಸಾಕ್ಷಿ ಎಂದು ಉತ್ತಮ ಪ್ರಸ್ತುತಿ ನೀಡಿದ ಪೂರ್ಣಿಮಾ ಅವರನ್ನು ಅಭಿನಂದಿಸುತ್ತೇನೆ.

6. ಶ್ರೀಮತಿ ರಾಧಿಕಾ ಗುಜ್ಜಾರ್ – 'ರೈಲು' (ಕವನ)

ಕವನವು ಶಿಶುಗೀತೆಯಂತೆ ಪ್ರಾರಂಭವಾದರೂ ಗಂಭೀರ ತಿರುಗು ಸಾಲುಗಳಲ್ಲಿ. ಈ ರೈಲಿನ ವಿಭಿನ್ನ ಪಯಣ ಎರಡು ಸರಳ ರೇಖೆಗಳ ನಡುವೆ ನಿಶಾನೆ ಆಧಾರಿತ ಹಸಿರಿಗೆ ನಡೆ, ಕೆಂಪಿಗೆ ತಡೆ ಹೆಚ್ಚು ಗೊಂದಲವಿಲ್ಲ. ಸರಿ ತಪ್ಪುಗಳ ಎಣಿಕೆಯಲ್ಲಿ ಸಮಚಿತ್ತದಲ್ಲಿ ಸರಳತೆಯಲ್ಲಿ ಆರಕ್ಕೆ ಏರದೆ ಮೂರಕ್ಕೆ ಇಳಿಯದೇ ಸಾಗುವ ವ್ಯಕ್ತಿಯಂತೆ, ಜೊತೆಯಾದವರ ಪರಕಿಸದೆ ದೂರಾಗಿಸದೇ, ತನ್ನದೇ ಮೌಲ್ಯಾಧಾರಿತ ರೀತಿಯಲ್ಲಿ ಇವನ ನಡೆ. ಕವನದ ಕೊನೆಯ ಸಾಲುಗಳು ನೀತಿ ಶತಕದ ಈ ಸಾಲುಗಳನ್ನು ನೆನಪಿಸುತ್ತದೆ "ವಜ್ರಾದಪಿ ಕಠೋರಾಣಿ ಮೃದುನೀಕುಸುಮಾದಪಿ ಲೋಕೋತರಣಾಂ ಚೇತಾಂಸಿ". ಈ ರೀತಿಯ ಲೋಕೋದ್ಧಾರದ ಮನೋಭಾವದ ನಾಯಕರ ಅವಶ್ಯಕತೆ ರಾಷ್ಟ್ರಕ್ಕಿರುವುದನ್ನು ಕವಿಯತ್ರಿ ರೈಲು ಗಾಡಿಯನ್ನು ಉದಾಹರಿಸಿ, ಅಪರೂಪಕ್ಕೆ ನಮ್ಮ ನಡುವೆ ಕಾಣುವ ಇಂತಹ ವ್ಯಕ್ತಿಗಳ ಚಿತ್ರಣ ಮಾರ್ಮಿಕವಾಗಿ ಓದುಗರಿಗೆ ತೆರೆದಿಟ್ಟಿದ್ದಾರೆ. ಅಭಿನಂದನೆಗಳು ರಾಧಿಕಾ ಅವರಿಗೆ.

7. ಶ್ರೀ ಗಣಪತಿ ಹೆಗಡೆ – 'ಕಾವ್ಯದೋಷ'

ಕಾವ್ಯ ರಚನೆಯ ಬಗ್ಗೆ ಹಲವಾರು ಹಿರಿಯ ಲೇಖಕರ ಲಾಕ್ಷಣಿಕರ ನಿಲುವಿನ ಬಗ್ಗೆ ವಿವರಿಸುತ್ತಾ ಗಣಪತಿ ಹೆಗಡೆಯವರು ಕಾವ್ಯ ರಚನೆಯಲ್ಲಿನ ದೋಷಗಳ ಬಗ್ಗೆ ಮಾಹಿತಿ ನೀಡಿದ್ದಾರೆ. "ವಾಕ್ಯಂ ರಸಾತ್ಮಕ ಕಾವ್ಯಂ" ಕಾವ್ಯದ ಉದ್ದೇಶವೇರಸೋತ್ಪತ್ತಿ ಅನ್ನುತ್ತಾ, "ಸಹಿತಸ್ಯ ಭಾವಃ ಸಾಹಿತ್ಯಮ್" ಅನ್ನುವಂತೆ ಕಾವ್ಯ ಬುದ್ಧಿಗೂ ಮನಸ್ಸಿಗೂ ಹಿತವನ್ನು ಉಂಟುಮಾಡಬೇಕು ಎಂದು ಕಾವ್ಯದ ಧನಾತ್ಮಕ ಗುಣಗಳನ್ನು ವಿವರಿಸಿತ್ತಾರೆ. ಕಾವ್ಯ ರಚನೆಯಲ್ಲಿನ 'ಅದೋಷಗಳು' ಅಂದರೆ ಬಳಸಬೇಕಾದ ಪದ, ಶಬ್ದಗಳು, ಶಬ್ದಾರ್ಥಗಳು ಯಾವರೀತಿ ದೋಷರಹಿತವಾಗಿ ಇರಬೇಕೆಂಬುದನ್ನು ಹೇಳುತ್ತಾ, ಅಶ್ರಾವ್ಯವಾಗಿರುವುದು ಅಂದರೆ ಕೇಳಲು ಅಹಿತಕರವಾಗಿರುವುದು, ಕರ್ಕಶವರ್ಣಗಳ ಬಳಕೆ ಕಾವ್ಯದೋಷಗಳು ಎನ್ನುತ್ತಾರೆ. ಉದಾಹರಣೆಗಳೊಡನೆ ವಿವರ ಕಲಿಕೆಗೆ ಪೂರಕ. ಅನುಚಿತಾರ್ಥ ಶಬ್ದಗಳು ಅಶ್ಲೀಲ ಮತ್ತು ವ್ಯಾಕರಣಕ್ಕೆ ಪೂರಕವಾಗದ ಶಬ್ದಗಳನ್ನು ಕೂಡ ಕಾವ್ಯದೋಷದ ಗುಂಪಿಗೆ ಸೇರಿಸುತ್ತಾರೆ.

ಈ ಲೇಖನ ಓದಿದಾಗ ಹಿಂದೆ ಭಾರತೀಯ ಸ್ಟೇಟ್ ಬ್ಯಾಂಕ್‌ನ ಕನ್ನಡ ಸಂಘ ಬಿಡುಗಡೆ ಮಾಡಿದ್ದ ಕವನ ಸಂಕಲನ "ಮಂದಾರ ಕಾವ್ಯ"ದಲ್ಲಿ ದಾಸೋಹಿ ಮಿತ್ರರಾದ ಶ್ರೀ ಬಿ.ಎಸ್.ಚಂದ್ರಶೇಖರ್ ಅವರ "ಕಾವ್ಯಮೂಡಬೇಕು" ಕವನದ ಕೊನೆಯ ನಾಲ್ಕು ಸಾಲುಗಳು ನೆನಪಾದುವು.

"ಅಚ್ಚುಗಳಗಿಳದು ಬೆಚ್ಚಗೆ ಮಲಗಿಬಿಡದೆ
ಕಾಲನಾಲಿಂಗನಕ್ಕೆ ಸೋತು ತಣ್ಣಗಾಗದೆ
ಮುಟ್ಟಿದರೆ ಚುರ್ರೆನಿಸುವ ಬಿಸಿಯನ್ನು
ಎದೆಯಲಿಟ್ಟು ಘನವಾಗಿ ಉಳಿಯಬೇಕು ಕಾವ್ಯ"

ಮುದ್ರಿಸಿದ ಕಥೆ ಕವನ ಸಂಕಲನಗಳೆಲ್ಲ ಕಪಾಟಿನಲ್ಲಿ ಬೆಚ್ಚಗೆ ನಿದ್ರಿಸುತ್ತಿರುವುದು ಪರಿಚಿತ ಅನುಭವ. ಕನ್ನಡ ಸಾಹಿತ್ಯಾಸಕ್ತರಿಗೆ, ಲೇಖಕರಿಗೆ ಉಪಯುಕ್ತ ಮಾಹಿತಿ ನೀಡುವ ಲೇಖನ. ಅಭಿನಂದನೆಗಳು ಗಣಪತಿ ಹೆಗಡೆ ಅವರಿಗೆ.

8. ಶ್ರೀಮತಿ ರೇಣುಕಾ ದೇಸಾಯಿ – ಎರಡು ಕವನಗಳು:

ಶ್ರೀಮತಿ ರೇಣುಕಾ ದೇಸಾಯಿ ಅವರು, ವೇದಿಕೆಯ ಜಾಲತಾಣದ ಕಾರ್ಯಕ್ರಮಕ್ಕೆ ಸೂಕ್ತ ನಿರ್ವಹಣೆ ನೀಡುವ ಜಾದುಗಾರಿಣಿ. ಅವರ ಇಂದಿನ ಪ್ರಸ್ತುತಿ ಎರಡು ಕವನಗಳು.

ಮೊದಲನೆಯ ಕವನ "ಮತಾಂಧರ ಅಟ್ಟಹಾಸ", ದೇಶ ವಿದೇಶಗಳಲ್ಲಿ, ಪ್ರಸ್ತುತ ಸಮಾಜದಲ್ಲಿನ ಇಂದಿನ ದುಃಸ್ಥಿತಿ, ಆಗುಹೋಗುಗಳ ಬಗ್ಗೆ ಪ್ರತಿಕ್ರಿಯೆ ಮನತಟ್ಟುವ ಸಾಲುಗಳಲ್ಲಿ. ಕೋಮು ಗಲಭೆಗಳು, ಧರ್ಮ ಅಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಮಾರಣಹೋಮ, ಅಸಹಾಯಕರ, ಮುಗ್ಧರ, ಅಸಹನೀಯ ಸ್ಥಿತಿ, ಅಧರ್ಮಿಗಳ ಕ್ರೂರತನ ಕವಿಯಿತ್ರಿಯ ಮನ ಕಲಕಿದೆ. "ಅಳಿಯಬೇಕು ಸದಾ ಈ ನೀಚ ಜನಾಂಗ", "ಸಾವಿನ ಸೌಧದ ಮೇಲೆ ಕಟ್ಟಿದ ಈ ಧರ್ಮ ಒಳಿತನ್ನು ಬಯಸದ ಅಧರ್ಮ" – ಇಂತಹ ಸಾಲುಗಳಲ್ಲಿ ಮನದ ತುಮುಲ, ವೇದನೆ ಮುಂದಿಟ್ಟಿದ್ದಾರೆ. ಧರ್ಮದ ಹೆಸರಲ್ಲಿ ನಡೆಯುತ್ತಿರುವ ಈ ಅಧರ್ಮ ತಡೆಯಲು ಮತ್ತೊಮ್ಮೆ ಹುಟ್ಟಿ ಬಾ ಎಂದು ಗೀತಾಚಾರ್ಯನಿಗೆ ಕರೆ ನೀಡಿದ್ದಾರೆ ಕವಿಯಿತ್ರಿ.

ಎರಡನೆಯ ಕವನ "ಅಮೃತ ಸ್ವರೂಪಿಗಳು" ಆಧ್ಯಾತ್ಮಿಕ ಚಿಂತನೆಯ ಕಡೆಗೆ ಓದುಗರನ್ನು ಸೆಳೆಯುತ್ತದೆ. ಸಾವಿನ ನಿಗೂಢತೆಯ ಬಗ್ಗೆ ಹೇಳುತ್ತಾ ಕಲ್ಪನೆಗೂ ಮೀರಿದ್ದು ಸಾವು, ಮರು ಹುಟ್ಟು, ಹುಟ್ಟು ಸಾವಿನ ಸೃಷ್ಟಿಯ ಚಕ್ರ ಅನ್ನುತ್ತಾರೆ. ಎಲ್ಲರಲ್ಲಿರುವ ಈ ಆತ್ಮಕ್ಕೆ ಸಾವಿಲ್ಲ, ಒಂದು ದೇಹದಿಂದ ಮತ್ತೊಂದರೆಡೆಗೆ ಹಳೆಯ ಬಟ್ಟೆ ತ್ಯಜಿಸಿ ಹೊಸದನ್ನು ಧರಿಸುವಂತೆ ಇದರ ಪರ್ಯಟನೆ ಎಂದು ಹೇಳುತ್ತಾ, ಭಗವದ್ಗೀತೆಯ ಚಿರಪರಿಚಿತ ಶ್ಲೋಕ– "ವಾಸಾಂಸಿ ಜೀರ್ಣಾನಿ ಯದಾ ವಿಹಾಯ ನವಾನಿ ಗ್ರುಹ್ಣಾತಿ ಶರೀರಾಣಿ" ಅನ್ನು ವ ಮನಃಸ್ಥಿತಿಯಲ್ಲಿ ನಮ್ಮನ್ನು ನಾವು ಆತ್ಮಸ್ವರೂಪಿಗಳು ಅಥವಾ ಅಮೃತ ಸ್ವರೂಪಿಗಳು ಅಂತ ಭಾವಿಸಿದರೆ ಎಷ್ಟು ಸೊಗಸು ಅನ್ನುತ್ತಾರೆ ಕವಿಯಿತ್ರಿ. ಕವನದ ಕೆಲವು ಸಾಲುಗಳು ಗದ್ಯ–ಪದ್ಯದ ರೀತಿ ಓದಿಸಿಕೊಂಡು ಹೋಗುತ್ತವೆ. ವಾಕ್ಯಾರ್ಥ ಚೆನ್ನಾಗಿದೆ, ಅಭಿನಂದನೆಗಳು ರೇಣುಕಾ ದೇಸಾಯಿ ಅವರಿಗೆ.

೯. ಶ್ರೀ ಸೀತಾರಾಮ ಕಟ್ಟಿ – 'ಕನಸು' (ಕವನ):

ಶ್ರೀ ಸೀತಾರಾಮ ಕಟ್ಟಿ ಇವರ ಕಾವ್ಯನಾಮ 'ಜಾನಕಿರಾಮ'. 'ರವಿ ಕಾಣದ್ದನ್ನು ಕವಿ ಕಂಡ'ಎಂಬಂತೆ ಈ ಕವಿ ತಮ್ಮ ಕನಸಿನ ಲೋಕದಲ್ಲಿ ಕಾಣುವ ರಂಗುರಂಗಿನ ಸುಂದರ ವಸ್ತುಗಳೆಲ್ಲ ನಿಜಸ್ಥಿತಿಗೆ ವೈರುಧ್ಯವೇ "ಸತ್ಯಮಿಥ್ಯಗಳಾಚೆ ರಂಗು ರಂಗಿನ ಪರದೆ" ಎನ್ನುತ್ತಾ ತಮ್ಮ ಕನಸುಗಳಿಗೆ ಸ್ವಾಗತ ಬಯಸುತ್ತಾರೆ ಕವಿ. ಕನಸಿನ ಲೋಕದಲ್ಲಿ ಎಲ್ಲೆಲ್ಲೂ ಧೂಪ ಆವರಿಸಿದ ಸುಂದರ ತಾಣ, ಸುಶ್ರಾವ ಮಾಯಮಾಳವಗೌಳದಲ್ಲಿ ಗಾರ್ದಭ ಗಾನ, ಸಿಹಿಯಾದ ಬೇವು, ಮುಳ್ಳಿಲ್ಲದ ಜಾಲಿ ಮರ, ಊಹಾತೀತ ಸಕಾರಾತ್ಮಕ ಬದಲಾವಣೆಗಳ ಚಿತ್ರಣ ಸಾಗುತ್ತದೆ ಕವಿ ಕಲ್ಪನೆಯ ಸಾರೋಟಿನಲ್ಲಿ, ಕನಸಿನ ಲೋಕದಿಂದ ಸುಷುಪ್ತಿಯೆಡೆಗೆ, ಪ್ರಾಸಬದ್ಧ ಸಾಲುಗಳಲ್ಲಿ ಕಿವಿಗೆ ಹಿತವೆನಿಸುವ ಪದಬಂಧದಲ್ಲಿ, ಕವಿ ಕಲ್ಪನೆಯ ಅನಾವರಣ ಕವನದಲ್ಲಿ. ಅಭಿನಂದನೆಗಳು ಸೀತಾರಾಮ್ ಕಟ್ಟಿ ಅವರಿಗೆ.

೧೦. ಶ್ರೀಮತಿ ಎಲ್.ಗಿರಿಜಾ ರಾಜ್ – 'ಮಾಡಿದ್ದುಣ್ಣೋ ಪತಿರಾಯ' (ಹಾಸ್ಯ ಲೇಖನ):

ಮಾಡಿದ್ದುಣ್ಣೋ ಮಹಾರಾಯ ಲೋಕೋಕ್ತಿಯಲ್ಲಿ ಸ್ವಲ್ಪ ಬದಲಾವಣೆ, ಹಾಸ್ಯಕ್ಕೆ ಗುರಿ ಪತಿರಾಯ ಪರಮಶಿವ. ಕಥಾನಾಯಕಿ ಪಾತು ಲೇಡೀಸ್ ಕ್ಲಬ್‌ನಲ್ಲಿ ಬಹುಮಾನ ಗಿಟ್ಟಿಸಲು ತನ್ನೆಲ್ಲ ಪಾಕಶಾಸ್ತ್ರ ಪ್ರಯೋಗಗಳಿಗೆ ತನ್ನ ಪತಿರಾಯರನ್ನು ಬಲುಪಶು ಮಾಡಿದಾಗ, ಪತಿರಾಯ ಪರಮಶಿವಯ್ಯನ ಫಜೀತಿ ಪರಮಾತ್ಮನಿಗೇ ಪ್ರೀತಿ. ಓದುಗರಲ್ಲಿ ಹೆಂಗಳೆಯರಿಗೆ ಮೋಜೆನಿಸಿದರೂ ಕೇಳುಗ/ಓದುಗ ಪತಿರಾಯರುಗಳು "ಸಧ್ಯ, ನನ್ನವಳು ಹೀಗಲ್ಲಾ ಅಂತಲೋ" ಅಥವಾ "ಅರೆ ನನ್ನವಳು ಹೀಗಾಡಿದ್ರೆ ಹೇಗೆ" ಅಂತಲೋ ಯೋಚಿಸ್ತಾ ಇರಬಹುದು. ಹಾಸ್ಯ ಸೊಗಸಾಗಿ ಮೂಡಿದೆ ಈ ಲೇಖನದಲ್ಲಿ. ಕೊನೆಯಲ್ಲಿ ಒಬ್ಬರನ್ನೊಬ್ಬರು ಸಂತೈಸುವ ಪರಿ ದಾಂಪತ್ಯದಲ್ಲಿರುವ ಪರಸ್ಪರ ಪ್ರೀತಿಯ ಎಳೆಯ ಅನುಭೂತಿ. ಅಭಿನಂದನೆಗಳು ಶ್ರೀಮತಿ ಗಿರಿಜಾ ರಾಜ್ ಅವರಿಗೆ.

11. ಶ್ರೀ ಭ,ರಾ,ವಿಜಯಕುಮಾರ್ – 'ಜಗನ್ನಾಟಕ' (ಕವನ):

ದಾಂಪತ್ಯದಲ್ಲಿ ಸತಿಪತಿಗಳ ಸಂಬಂಧಗಳಲ್ಲಿನ ಸೂಕ್ಷ್ಮತೆ, ಭಿನ್ನಾಭಿಪ್ರಾಯ, ಕಲಹಕ್ಕೆ ಕಾರಣವಾದಾಗ ಸಂಗಾತಿಯನ್ನು ಒಲಿಸಲು ದಾರಿಕಾಣದ ಪತಿಯ ಆತ್ಮಾವಲೋಕನ, ಕವನದಲ್ಲಿ. ಸಂದಿಗ್ದತೆಯ ಅಸಹಾಯಕ ಚಿತ್ರಣ. ಈ 'ಗಂಡು-ಹೆಣ್ಣು ಮಾಯೆ ಏಕೆ ಬಂದಿತೋ ಜಗದಲಿ' ಎಂದು ಪ್ರಶ್ನಿಸುತ್ತಾ ಬಾಂಧವ್ಯದ ಎಳೆಯನ್ನು ಪರಕಿಸುತ್ತಾರೆ ಕವಿ. 'ಸಾವಿಲ್ಲದ ಮನೆಯ ಸಾಸಿವೆ ಸಿಗದಂತೆ ಕಲಹ, ಜಗಳ ಇರದ ದಾಂಪತ್ಯ ವಿರಳ' ಅನ್ನುತ್ತಾ, ಸರಿಪಡಿಸಲು ದಾರಿ ಹುಡುಕುತ್ತಾ, ಕಾಯಪ್ಪ ಹರಹರಿ ಎನ್ನುತ್ತಾ ದೇವರಲ್ಲಿ ಮೊರೆ ಇಡುತ್ತಾರೆ. ಕ್ಷುಲಕ ಕಾರಣಗಳಿಂದ ದೂರಾಗುತ್ತಿರುವ ಸಂಬಂಧಗಳ ನೋವಿನ ಚಿತ್ರಣ ಕವನದಲ್ಲಿ. ಭಾವಾರ್ಥ, ಪದಲಾಲಿತ್ಯ ಚೆನ್ನಾಗಿದೆ. ಅಭಿನಂದನೆಗಳು ವಿಜಯಕುಮಾರ್ ಅವರಿಗೆ.

12. ಶ್ರೀಮತಿ ಮಾಧುರಿಕೃಷ್ಣ – 'ಪ್ರಶ್ನೆಗಳೂ ಊಹೆಗಳೂ' (ಲೇಖನ ಮಾಲೆ):

"ನಾನೂ ನೀನೂ ಸಹಪಾಠಿ ಮಿತ್ರನೂ ಸರಣಿ ಲೇಖನಮಾಲೆ-10" ರ ಇಂದಿನ ಲೇಖನದ ಶೀರ್ಷಿಕೆ "ಪ್ರಶ್ನೆಗಳೂ ಊಹೆಗಳೂ". ದಶಕಗಳ ಹಿಂದಿನ ಕಾಲೇಜಿನ ಸಹಪಾಠಿಯ ಭೇಟಿ ಹೊರದೇಶದಲ್ಲಿ ಸಹಪಾಠಿಯ ಕುಟುಂಬ ದವರೊಡನೆ. ಹಳೆಯ ಕಾಲೇಜು ದಿನಗಳ ಘಟನೆಗಳ ನೆನಪನ್ನು ಮಕ್ಕಳೊಡನೆ ರಸವತ್ತಾಗಿ ಹಂಚಿಕೊಳ್ಳುವ ಸಂಭ್ರಮ ಸೊಗಸಾಗಿ ಬಿಡಿಸಿದ್ದಾರೆ ಲೇಖಕಿ. ಹಿಂದೆ ಕೇಳಲಾಗದಿದ್ದ ಅದೆಷ್ಟೋ ಪ್ರಶ್ನೆಗಳು, ಉತ್ತರ ಸಿಗದಿದ್ದಾಗ ಊಹಾಪೋಹಗಳು, ಹಿರಿಯ ಲೇಖಕಿಯ ನಿರೂಪಣೆಯಲ್ಲಿ ಸೊಗಸಾಗಿ ಮೂಡಿದೆ. ನಮ್ಮಲ್ಲಿ ಅನೇಕರ ಅನುಭವ ಹೀಗೆಯೇ ಇದ್ದು ಹಳೆಯ ಜೀವನದ ಮಧುರ ಕ್ಷಣಗಳ ನೆನಪು ಸದಾ ಚೇತೋಹಾರಿ ಅನಿಸುತ್ತೆ. ಲೇಖಕಿಯ ಮಿತ್ರನೊಡನೆಯ ಸಂಭಾಷಣೆಯು ಅಲ್ಲಿಯೇ ನಿಂತು ಕೇಳುತ್ತಿದ್ದೇವೇನೋ ಅನ್ನುವ ಭಾವತರಿಸುತ್ತೆ ಕೇಳುಗ/ ಓದುಗರಿಗೆ. ಅಭಿನಂದನೆಗಳು, ಶ್ರೀಮತಿ ಮಾಧುರಿಕೃಷ್ಣ ಅವರಿಗೆ.

13, ಶ್ರೀ ಮನೋಹರ ಎಂ. ಗೋಖಲೆ – 'ಚಾರಧಾಮ್ ಉತ್ತರಖಂಡ' (ಕವನ):

ಶ್ರೀ ಮನೋಹರ ಗೋಖಲೆಯವರು ಚಾರಣದ ಸುಂದರ ಅನುಭವವನ್ನು ನಮ್ಮೊಡನೆ ಹಂಚಿಕೊಂಡಿದ್ದಾರೆ ಕವನ ರೂಪದಲ್ಲಿ. .

"ನರನ ದೈವಿಕ ಶ್ರದ್ಧಾ ಭಕ್ತಿಗೆ, ಲೌಕಿಕ ಭಾವ ಶುದ್ಧಿಗೆ
ಪ್ರಾಕೃತಿಕ ತಾಣಗಳ ಸಮುಚ್ಛಯ ಭೂನಿಧಿಗೆ,
ಆಹ್ವಾನವಿದೆ ನಿಮಗೆ ಬನ್ನಿ ದೇವಭೂಮಿಗೆ"

ಎಂದು ಹೇಳುತ್ತಾ ನಮ್ಮೆಲ್ಲರನ್ನು ಚಾರಧಾಮ್ ಖಂಡದ ಸುಂದರತೆಗೆ ಸೆಳೆದೊಯ್ದಿದ್ದಾರೆ. ನದಿಗಳ ಮೂಲ ಹುಡುಕುತ್ತಾ, ಹಿಮಗಿರಿಯ ಸೊಬಗನ್ನು ಸವಿಯುತ್ತಾ, ಭಕ್ತ ಭಕ್ತಿ ದೈವಿಕ ಶಕ್ತಿಯ ಬಗ್ಗೆ ವರ್ಣನೆ ನೀಡುತ್ತಾ, ವಿರಕ್ತಿ ಸಂತೃಪ್ತಿ ಭಾವದ ಅಧ್ಯಾತ್ಮಿಕ ಚಿಂತನೆ ಕವಿಮನದಲ್ಲಿ, ಕಾವ್ಯಾತ್ಮಕ ನೈಜತೆ ಸಾಲುಗಳಲ್ಲಿ. ಅಭಿನಂದನೆಗಳು ಶ್ರೀ ಗೋಖಲೆಯವರಿಗೆ.

14. ಶ್ರೀ ಕೆ.ಎನ್.ಮಹಾಬಲ – 'ವೈದ್ಯರತ್ನ ಡಾ. ಬಿ.ಲಕ್ಷ್ಮೀನಾರಾಯಣ ಭಟ್ಟ'

ಶ್ರೀ ಕೆ.ಎನ್. ಮಹಾಬಲ ಅವರು ತಮ್ಮ 'ಸಾಧಕರ ಪರಿಚಯ' ಸರಣಿ ಲೇಖನದಲ್ಲಿ, ಈ ಬಾರಿ ಅಪರೂಪದ ವ್ಯಕ್ತಿ, ಸಾಧಕ ವೈದ್ಯರತ್ನ ಮೈಸೂರಿನ ಡಾಕ್ಟರ್ ಬಿ.ಲಕ್ಷ್ಮೀನಾರಾಯಣ ಭಟ್ಟ ಅವರನ್ನು ಪರಿಚಯಿಸಿದ್ದಾರೆ. ಪವಿತ್ರವಾದ ವೈದ್ಯ ವೃತ್ತಿಯನ್ನು ಅಷ್ಟೇ ಪೂಜ್ಯ ಭಾವದಲ್ಲಿ ಅಭ್ಯಸಿಸುತ್ತ, ದೀನದಲಿತರ ಅಸಹಾಯಕರ ಸೇವೆಯನ್ನು ಯಾವ

ಫಲಾಪೇಕ್ಷೆ ಇಲ್ಲದೆ ಮಾಡುತ್ತಿರುವ ಸಾಹಿತ್ಯಾಸಕ್ತ ವೈದ್ಯ ಶ್ರೀ ಬಿ.ಲಕ್ಷ್ಮೀನಾರಾಯಣ ಭಟ್ಟ ಎಂದು ಹೇಳುತ್ತಾ, ಅವರಲ್ಲಿಗೆ ತಮ್ಮ ಆರೋಗ್ಯದ ತಪಾಸಣೆಗೆಂದು ಹೋದ ದಿನದಿಂದ ಇಂದಿನವರೆಗೂ ತಮ್ಮಿಬ್ಬರಲ್ಲಿ ಬೆಳೆದ ಬಾಂಧವ್ಯ, ಅವರ ಶಾಂತ ಸ್ವಭಾವ ಹಾಗೂ ಕಾರ್ಯವೈಖರಿಯ ಬಗ್ಗೆ ಮೆಚ್ಚುಗೆಯನ್ನು ಲೇಖನದಲ್ಲಿ ಮುಂದಿಟ್ಟಿದ್ದಾರೆ. ಈ ಅಪರೂಪದ ವೈದ್ಯರ ಸಾಹಿತ್ಯ ಪ್ರೀತಿಗೆ ಸಾಕ್ಷಿ ಹಲವಾರು ಸಾಹಿತ್ಯ ದಿಗ್ಗಜರೊಡನೆ ಅವರ ಒಡನಾಟ. ಡಾಕ್ಟರ್ ಎಸ್.ಎಲ್. ಭೈರಪ್ಪ ಹಾಗೂ ನಮ್ಮೆಲ್ಲರಿಗೂ ಚಿರಪರಿಚಿತರಾದ ಡಾ.ಪ್ರಧಾನ್ ಗುರುದತ್ ಹಾಗೂ ಹಿರಿಯ ಸಾಹಿತಿ ಕುವೆಂಪು ಅವರಿಗೆ ಖಾಸಗಿ ವೈದ್ಯರಾಗಿ ಹಲವಾರು ವರ್ಷಗಳು ಸೇವೆಸಲ್ಲಿಸಿದ್ದಾರೆ ಈ ವೈದ್ಯರು. ವೈದ್ಯ ವೃತ್ತಿಯನ್ನು ವ್ಯಾಪಾರ ಮಾಡಿಕೊಂಡಿರುವ ಇಂದಿನ ಸಮಾಜದಲ್ಲಿ ಇಂತಹ ಅಪರೂಪದ ಸಾಧಕರ ಅವಶ್ಯಕತೆ ತುಂಬಾ ಇದೆ ಎಂದು ಹೇಳುತ್ತಾ, ಇಂತಹ ಸಾಧಕ, ವೈದ್ಯರತ್ನ ಡಾ.ಲಕ್ಷ್ಮೀನಾರಾಯಣ ಭಟ್ಟರನ್ನು ಪರಿಚಯಿಸಿದ ಹಿರಿಯ ಸಾಹಿತಿ ಮಹಾಬಲ ಅವರಿಗೆ ಧನ್ಯವಾದಗಳು.

15. ಶ್ರೀ ಅನ್ನಪೂರ್ಣ ಸುಬ್ಬರಾವ್ – 'ಬೊಂಬೆಗಳು ನಕ್ಕಾಗ':

ನವರಾತ್ರಿಯ ಈ ಶುಭದಿನಗಳಲ್ಲಿ ಸಂದರ್ಭೋಚಿತ ಲೇಖನ. ದಸರಾ ಹಬ್ಬದ ದಿನಗಳಲ್ಲಿ ಬೊಂಬೆಗಳ ಸಡಗರ, ತುಂಬು ಕುಟುಂಬಗಳಲ್ಲಿ ಹಿರಿಯರೊಡನೆ ಸಂಭ್ರಮಿಸಿದ್ದ, ತವರಿನಲ್ಲಿ ತಾಯಿಯೊಡನೆ ಕಳೆದ ದಸರಾ ಹಬ್ಬದ ದಿನಗಳನ್ನು ಕಣ್ಣಿಗೆ ಕಟ್ಟುವಂತೆ ಬಿಡಿಸಿದ್ದಾರೆ ಈ ಲೇಖನದಲ್ಲಿ ಶ್ರೀಮತಿ ಅನ್ನಪೂರ್ಣ ಅವರು. ಹಬ್ಬದ ವಾರಕ್ಕೆ ಮುಂಚೆ ಬೊಂಬೆಗಳನ್ನೆಲ್ಲ ಪೆಟ್ಟಿಗೆಯಿಂದ ಎಬ್ಬಿಸಿ ಶುಭ್ರ ಮಾಡುವ ಹಂತದಿಂದ, ಅವುಗಳ ಜೋಡಣೆ, ಪಾರ್ಕಿಗೆ ಹಸಿರು ರಾಗಿ ಪೈರು ಬೆಳೆಸುವ ಸಂಭ್ರಮ, ಬೊಂಬೆ ಬಾಗಿನದ ವಿವಿಧ ತಿನಿಸುಗಳ ಸವಿ, ಸರಸ್ವತಿ ಪೂಜೆ, ಆಯುಧ ಪೂಜೆಯ ದಿನಗಳ ಸಡಗರದ ವಿವರಣೆ ಓದುಗರನ್ನು ಹೊಸ ಪ್ರಪಂಚಕ್ಕೆ ಸೆಳೆದೊಯ್ಯುತ್ತದೆ. ಬಾಲ್ಯದ ಸವಿ ನೆನಪುಗಳ ನೈಜ ನಿರೂಪಣೆಯ ಜೊತೆಗೇ ಕರ್ನಾಟಕದ ಮುಖ್ಯ ಸಾಂಸ್ಕೃತಿಕ ಆಚರಣೆಯ ಪಕ್ಷಿ ನೋಟ ನೀಡಿದ ಎ ಅನ್ನಪೂರ್ಣ ಅವರಿಗೆ ಅಭಿನಂದನೆಗಳು.

16. ಶ್ರೀ ಕೆ.ಆರ್.ವೆಂಕಟೇಶ್ – 'ಮೊಬೈಲಾಯಣ' (ಕವನ):

ಪ್ರಾಸ ತುಂಬಿದ ಸುಶ್ರಾವ್ಯ ಜಾನಪದ ಧಾಟಿಯ ಗಾಯನದ ಮೂಲಕ ಶ್ರೀ ವೆಂಕಟೇಶ್ ಅವರು ತಮ್ಮ ಕವನವನ್ನು ನಮ್ಮ ಮುಂದೆ ತೆರೆದಿಟ್ಟಿದ್ದಾರೆ. ಅಪ್ಪ-ಮಗನ ಎರಡು ತಲೆಮಾರುಗಳ ಅಭಿಪ್ರಾಯ-ಭಿನ್ನಾಭಿಪ್ರಾಯಗಳು ಸಂಭಾಷಣೆಯ ರೂಪದಲ್ಲಿರುವ ಕವನ. ಅಪ್ಪನ ಖಡಕ್ ಭಾಷೆಗೆ ಮಗನ ನೇರ ಉತ್ತರ. ಕೇಳುಗರಿಗೆ/ಓದುಗರಿಗೆ ಚಿರಪರಿಚಿತ ಅನ್ನಿಸುವ ವಿಷಯ. ಸುಶ್ರಾವ್ಯ ಕಂಠದಲ್ಲಿ ತಮ್ಮ ಕವನವನ್ನು ಪ್ರಸ್ತುತಿಪಡಿಸಿದ ವೆಂಕಟೇಶ್ ಅವರಿಗೆ ಅಭಿನಂದನೆಗಳು.

17. ಶ್ರೀ ಬೆಂ.ಶ್ರೀ.ರವೀಂದ್ರ – 'ಅಣುಕುವಾಡದ ಸಂತೆ' (ಕವನ)

ಈ ಕವನ ಓದಿದಾಗ ದಶಕಗಳಿಂದ ಮನುಕುಲ ಎದುರಿಸುತ್ತಿರುವ ಎಲ್ಲಾ ರೀತಿಯ ಅವಘಡಗಳು ಕಣ್ಣ ಮುಂದೆ ಬರುತ್ತವೆ. ಪ್ರಕೃತಿ ವಿಕೋಪ, ಅದಕ್ಕೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಕಾರಣೀಭೂತರಾದ ಮನುಕುಲದ ಅಟ್ಟಹಾಸ, ವೈರಾಣುಗಳ ಹಾವಳಿ, ಉಗ್ರಗಾಮಿಗಳ ಅಮಾನವೀಯ ಕ್ರೂರತೆ. ಎಲ್ಲಾ ಪ್ರಕ್ರಿಯೆಗಳ ಅಂತ್ಯ ನೋವು ಸಾವು, ದೀನ ದುರ್ಬಲರ ಅಸಹಾಯಕ ಸ್ಥಿತಿ, ಅಸಂಖ್ಯಾತ ಜೀವನಾಶ. ಇಂತಹ ಪರಿಸ್ಥಿತಿಯ ನಿಯಂತ್ರಣ ಹೇಗೆ? ಸುತ್ತೆಲ್ಲ ಬರಿ ಡೋಂಗಿ ರಾಜಕಾರಣಿಗಳು, ಬೇಡದ ಗಡಿನಾಡಿನ ಚರ್ಚೆಗಳು, ಧರ್ಮದ ಹೆಸರಿನಲ್ಲಿ ವಾದ ವಿವಾದಗಳು, ಪ್ರಸ್ತುತ ಸಮಾಜದಲ್ಲಿನ, ದೇಶ ವಿದೇಶಗಳಲ್ಲಿನ ಆಗುಹೋಗುಗಳಿಗೆ ಕವಿ ಮನದ ತುಮುಲ ಓದುಗರ ಮನ ಕೂಡ ಭಾರವಾಗಿಸುತ್ತದೆ. ಅಭಿನಂದನೆಗಳು ರವೀಂದ್ರ ಅವರಿಗೆ.

18. ಶ್ರೀ ರಮೇಶ್ ಪೋಲೇನಹಳ್ಳಿ (ಪೋರ) – 'ಒಬ್ಬಂಟಿ' (ಕವನ):

ಮನಸ್ಸಿಗೆ ವೈರಾಗ್ಯದ ಭಾವ ಆವರಿಸಿಕೊಂಡಾಗ ಎಲ್ಲಾ ತ್ಯಾಗ ಮಾಡಿ ದೂರಾಗಿ ಹಗುರಾಗುವ ಆಲೋಚನೆ ಬಂದರೂ, ಮಾಯೆಯ ಮುಸುಕು ಜಾಲ ಯಾರನ್ನೂ ಬಿಡದು. "ಇನ್ನು ಮುಂದೆ ಬೆತ್ತಲೆ ಹೊರನಡೆಯುವೆ ಜಗವಿತ್ತ ವಸ್ತ್ರ ವಿನ್ಯಾಸಗಳ ಕಳಚಿ" ಅಂತ ಹೇಳುತ್ತಾ ಹೊರಟವನನ್ನು ಜಗದ ಮಾಯೆ ಸೆಳೆದಾಗ, ಗುರು ಸನ್ಯಾಸಿ ರೂಪ ಕೊಟ್ಟು ಅವನ ನಿರ್ಧಾರಗಳನ್ನೆಲ್ಲ ಧೂಳೀಪಟ ಮಾಡಿದಾಗ, ಕಾವಿ ಅಂಗಿ ರಾಜ ಮಹಾರಾಜರ ಭಂಗಿ ಎನ್ನುವಂತಾಗಿ ಬಿಟ್ಟರೂ ಬಿಡದ ಮಾಯೆ ಬೆನ್ನಿಗಂಟಿದಾಗ ಮನದಾಳದ ಸಿದ್ಧಾಂತಗಳೆಲ್ಲ ದೂರ ಸರಿಯುವುದು ನಿಜವೇ. ಕವಿ ಈ ಭಾವನೆಯನ್ನು ಮಾರ್ಮಿಕವಾಗಿ ಸಾಲುಗಳಲ್ಲಿ ತೆರೆದಿಟ್ಟಿದ್ದಾರೆ ಒಳ್ಳೆಯ ಕವನ ರಮೇಶ್ ಅವರಿಗೆ ಅಭಿನಂದನೆಗಳು.

19. ಶ್ರೀಮತಿ ಟಿ.ಎಸ್.ಶ್ರವಣಕುಮಾರಿ – 'ನಳಿನಿ ದಳಗತ ಜಲಮತಿ ತರಳಂ' (ಸರಣಿ ಲೇಖನ):

ಶ್ರೀಮತಿ ಟಿ.ಎಸ್.ಶ್ರವಣಕುಮಾರಿಯವರ ಸರಣಿ ಲೇಖನದ ಮುಂದಿನ ಭಾಗ, ಆದಿಶಂಕರರ ಭಜಗೋವಿಂದಂ ಶ್ಲೋಕಗಳ "ನಳಿನಿ ದಳಗತ ಜಲಮತಿ ತರಳಂ" ಎಂಬುವ ಸಾಲುಗಳಿಂದ ಪ್ರಾರಂಭವಾಗುತ್ತದೆ. ತಾವರೆ ನೀರಿನ ಮೇಲಿನ ನೀರ ಹನಿಗಳಂತೆ ಅಸ್ಥಿರವಾದದ್ದು ಜೀವ ಎಂದು ಹೇಳುತ್ತಾ ತಮ್ಮ ಅನಾರೋಗ್ಯದ ಪರಿಸ್ಥಿತಿಯಲ್ಲಿ ಉಸಿರಾಟದ ತೊಂದರೆ ಹೆಚ್ಚಾದಾಗ ವೆಂಟಿಲೇಟರ್ ಒಳಗೆ ಉಸಿರಾಡುತ್ತಾ, ಸುತ್ತಲಿನ ಆಗುಹೋಗುಗಳನ್ನು ಸೂಕ್ಷ್ಮವಾಗಿ ಧೈರ್ಯವಾಗಿ ವೀಕ್ಷಿಸುತ್ತಾ ಅದನ್ನು ಮುಂದೆ ಸರಣಿ ಲೇಖನದಲ್ಲಿ ಮನಮುಟ್ಟುವಂತೆ ದಾಖಲಿಸಿದ ಅವರ ಮನೋಸ್ಥೈರ್ಯ ಅಚ್ಚರಿ ಮೂಡಿಸಿತ್ತು. ಹಾಸ್ಯ ಮಿಳಿತ ಕಲ್ಪನೆಯ ವಾದ ವಿವಾದ ಯಮದೂತರೊಡನೆ, ಪ್ರೀತಿ ಪಾತ್ರರ, ಹತ್ತಿರದವರ ಕಾಳಜಿ, ಸುತ್ತಲಿನ ರೋಗಿಗಳ ಸಾವುನೋವಿನ ಚಿತ್ರಣ ಓದುತ್ತಿದ್ದಾಗ ಅಲ್ಲೇ ನಿಂತು ನೋಡುತ್ತಿದ್ದೇವೆ ಅನ್ನುವ ಭಾವ ಓದುಗರಲ್ಲಿ. ಶ್ರವಣಕುಮಾರಿಯವರ ಕಥೆ, ಪ್ರಬಂಧಗಳು ತಮ್ಮ ಅನುಭವಗಳನ್ನು ಬರೆಯುವ ಶೈಲಿ ಬರಹಗಾರಿಗೆ ನಿಜಕ್ಕೂ ಕಲಿಕೆಗೆ ಪೂರಕ. ಅಭಿನಂದನೆಗಳು.

20. ಡಾಕ್ಟರ್ ಸತ್ಯವತಿ ಮೂರ್ತಿ – 'ಸ್ನೂಪಿ'

ಸಾಕುಪ್ರಾಣಿಗಳ ಮೇಲಿನ ಪ್ರೀತಿ ಮಮತೆ, ಪ್ರಾಣಿಗಳನ್ನು ಸಾಕಿದವರಿಗೆಲ್ಲ ಚಿರಪರಿಚಿತ. ಲೇಖಕಿಯು ತಮ್ಮ ಸುದೀರ್ಘ ಲೇಖನದಲ್ಲಿ ಪ್ರೀತಿಯ ಸಾಕು ನಾಯಿ ಸ್ನೂಪಿ ಕಣ್ಮರೆಯಾದಾಗ ಮನೆಯವರೆಲ್ಲರ ಆತಂಕ, ದುಃಖ, ಕಳವಳ, ನೋವುಗಳನ್ನು ಮನಮುಟ್ಟುವ ಶೈಲಿಯಲ್ಲಿ ತೆರೆದಿಟ್ಟಿದ್ದಾರೆ. ಮನೆಯಲ್ಲಿನ ಸಾಕುನಾಯಿ ಎಲ್ಲರಿಗೂ ಅಚ್ಚುಮೆಚ್ಚಿನ ಮಗುವಂತಾಗುವುದು ಸಹಜ. ಅದು ತಪ್ಪಿಸಿಕೊಂಡಾಗ ಮನೆಯ ಸದಸ್ಯರೊಬ್ಬರೇ ಕಳೆದು ಹೋದಂತಹ ಭಾವನೆ ನಿರೂಪಣೆಯಲ್ಲಿ ಸೊಗಸಾಗಿ ಮೂಡಿಬಂದಿದೆ. ಕಳೆದುಹೋದ ಸ್ನೂಪಿ ಸಿಕ್ಕ ನಂತರ ಅದರ ಭಾವನೆಗಳನ್ನು, ಸ್ನೂಪಿಯ ಪ್ರಣಯ ಪ್ರಸಂಗ ಓದಿದಾಗೆಲ್ಲ, ಹೌದಲ್ಲ ಪ್ರಾಣಿಗಳಿಗೂ ಅವರದೇ ಸಂಗಾತಿ ಬೇಕೆನಿಸುವುದು ನ್ಯಾಯ. ನಾವು ಅವುಗಳನ್ನು ಮನೆಯಲ್ಲಿ ಕೂಡಿಹಾಕಿ ಮಕ್ಕಳು ಮಾಡದಂತೆ ಅಥವಾ ಆಗದಂತೆ ಶಸ್ತ್ರಚಿಕಿತ್ಸೆ ಮಾಡಿ ನಮ್ಮ ಸಂತೋಷಕ್ಕಾಗಿ ಪೋಷಿಸುವುದು ಎಷ್ಟು ಸರಿ ಅನ್ನುವ ಪ್ರಶ್ನೆ ಮೂಡುತ್ತೆ ಮನಸ್ಸಿನಲ್ಲಿ.

ಇಡೀ ಕುಟುಂಬದ ಪ್ರೀತಿಗೆ ಪಾತ್ರನಾದ ಸ್ನೂಪಿ ನಾಪತ್ತೆಯಾದಾಗ ಮನೆಯ ಸದಸ್ಯರೆಲ್ಲರ ಆತಂಕ ನನಗೆ ನನ್ನ ಸಾಕು ನಾಯಿ ನಿಕ್ಕಿಯ ಬಾಂದವ್ಯ ನೆನಪಾಯಿತು. ಸದಾ ಅದರ ಆಟಪಾಠಗಳ ಬಗ್ಗೆ ಮಾತಿಗೆ ನಾವು ಹೆಸರಿಟ್ಟಿದ್ದು "ಶುನಕಪುರಾಣ" ಅಂತ. ರೋಚಕವಾಗಿ ಲೇಖನ ಓದಿಸಿಕೊಂಡು ಹೋಗುತ್ತೆ, ಡಾಕ್ಟರ್ ಸತ್ಯವತಿ ಮೂರ್ತಿಯವರಿಗೆ ಅಭಿನಂದನೆಗಳು.

21. ಡಾ. ಶುಭಶ್ರೀ ಪ್ರಸಾದ್ – ಎರಡು ಕವನಗಳು:

'ಕೇಳು ರಾಧೆ' ಮತ್ತು 'ಅವರವರ ಪಾಡು' ಎಂಬ ಎರಡು ಕವನಗಳನ್ನು ಡಾ. ಶುಭಶ್ರೀ ಪ್ರಸಾಧ್ ಅವರು ಪ್ರಸ್ತುತಪಡಿಸಿದ್ದಾರೆ.

ಮೊದಲ ಕವನ 'ಕೇಳುರಾಧೆ'. ಕೃಷ್ಣ ರಾಧೆಗೆ ತನ್ನೊಲವಿನ ಪರಿ ನಿವೇದಿಸಿಕೊಳ್ಳುವ ಸಾಲುಗಳು, 'ನಿನ್ನ ಮಡಿಲೇ ಅಮೃತ ಎನ್ನ ದಣಿವಿಗೆ', 'ನಾ ಮಹಾರಾಜನಲ್ಲ ಸಖಿ ನಿನ್ನದೇ ಕೃಷ್ಣ', 'ಎಲ್ಲಿದ್ದರೂ ನಾ ಗೊಲ್ಲನೆ', ಕಾವ್ಯಮಯ ಸುಂದರ ಸಾಲುಗಳು. ಸಾಮಾನ್ಯವಾಗಿ ರಾಧೆಯ ವಿರಹ ಕಾವ್ಯಗಳನ್ನು ಓದಿದ್ದೇವೆ. ಇಲ್ಲಿ ಕೃಷ್ಣನ ಒಲವಿನ ಪರಿ, ಮನದ ತುಡಿತ ಚೆನ್ನಾಗಿ ಮೂಡಿದೆ.

ಎರಡನೇ ಕವನ 'ಅವರವರ ಪಾಡು'. ಹಸಿವು, ಬಡತನದ ಬೇಗೆ, ರೋಗರುಜಿನಗಳಲ್ಲಿ ನರಳುವವರ ಶೋಷಣೆ ಲೇಖಕಿಯ ಮನಸ್ಸನ್ನು ತಟ್ಟಿದೆ, ಭಾವರಹಿತರಾಗಿ ಅವರ ಸುಖ ದುಃಖಗಳಿಗೆ ಸ್ಪಂದಿಸದೆ ಅವರ ಚಿತ್ರಗಳನ್ನು ತೆಗೆದು ಮಾರಾಟಮಾಡುವುದು, ಕಾನೂನಿನ ರಕ್ಷಣೆಯ ನೆಪದಲ್ಲಿ, ಸ್ವಾರ್ಥ, ಸ್ವಹಿತ, ಅಮಾನವೀಯ ವರ್ತನೆ "ಶುಭಕರಿಯ" ಕವನದಲ್ಲಿ. ಅಭಿನಂದನೆಗಳು ಕವಿಯತ್ರಿಗೆ.

ಇಂದಿನ ಈ ವಿಶೇಷ ಕಾರ್ಯಕ್ರಮಕ್ಕೆ ಅಧ್ಯಕ್ಷತೆ ವಹಿಸುವ ಸುಸಂಧರ್ಭ ಕೊಟ್ಟ ಸಸಕಸ ಪ್ರತಿಷ್ಠಾನದ ಸಂಚಾಲಕ ವರ್ಗದವರಿಗೆ ಹೃತ್ಪೂರ್ವಕ ಧನ್ಯವಾದಗಳು.

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061

ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ –

ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 218 ನಡೆದ ದಿನಾಂಕ: 22 ಅಕ್ಟೋಬರ್ 2023

ಸಂಚಿಕೆಯ ಬಿಡುಗಡೆ ದಿನಾಂಕ: 11 ನವೆಂಬರ್ 2023 – ಶನಿವಾರ

ಒಳಪುಟದ ಕೆಲವು ವಿಶೇಷ ಚಿತ್ರಗಳು: ಕೃಪೆ ಅಂತರ್ಜಾಲ